ಗಂಗಾವತಿ ತಾಲೂಕಿನ ಸ್ಮಾರಕ ಶಿಲ್ಪಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿರುವ ಎಂ.ಫಿಲ್. ಸಂಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ : ೧೮೦೧೦೮೦೩೦೦೧೨



ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೯

954.87
KUH
G

1408

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

Shri Mahantesh
BOOK BINDING
Digital Colour Print
Laser Prints & Xerox
1st Flor Stadioum Copelex KCD Road DWD
Cell 9632011325

1408

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗಂಗಾವತಿ ತಾಲ್ಲೂಕಿನ ಸ್ಮಾರಕ ಶಿಲ್ಪಗಳು

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ : ೧೮೦೧೦೮೦೩೦೦೧೨

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೯

141199

954.87
K44 9

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನ ಸಮೀಕ್ಷೆ, ಅಧ್ಯಯನ ವಿಧಾನ ಮತ್ತು ಸ್ವರೂಪ

ಅಧ್ಯಾಯ – ಒಂದು
ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನ ಸಮೀಕ್ಷೆ, ಅಧ್ಯಯನ ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಭಾರತ ದೇಶವು ಬಹು ಸಂಸ್ಕೃತಿಯ ನಾಡಾಗಿದ್ದು. ಹಲವು ಆಚರಣೆಗಳಿಗೆ ಹೆಸುರುವಾಸಿಯಾಗಿದೆ. ಈ ನಾಡಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಜೀವನವನ್ನು ಅಭಿವ್ಯಕ್ತಿಗೊಳಿಸುವಲ್ಲಿ ದೇವಾಲಯಗಳು, ಶಿಲ್ಪಗಳು. ಮತ್ತು ಶಾಸನಗಳು, ಸ್ಮಾರಕ ಶಿಲ್ಪಗಳ ಪ್ರಾತ ಮಹತ್ವವಾದುದು. ಈ ಹಿನ್ನೆಲೆಯಲ್ಲಿ ಗಂಗಾವತಿ ತಾಲೂಕಿನ ಗತಕಾಲದ ಇತಿಹಾಸದ ಹಾಗೂ ಸಂಸ್ಕೃತಿಯನ್ನು ತಿಳಿಯಲು ಇಲ್ಲಿನ ಗ್ರಾಮಗಳಲ್ಲಿ ದೊರೆಯುವ ಶಾಸನ, ಸ್ಮಾರಕ ಶಿಲ್ಪ, ದೇವಾಲಯ, ಗವಿಚಿತ್ರ, ಮೂರ್ತಿಶಿಲ್ಪ, ಹಾಗೂ ಕೋಟೆಗಳು ಪ್ರಮುಖವಾಗಿವೆ. ಪ್ರಸ್ತುತ ಅಧ್ಯಯನದಲ್ಲಿ ಸ್ಮಾರಕ ಶಿಲ್ಪಗಳನ್ನು ಮೂಲ ಆಕರಗಳಾಗಿ ಬಳಸಿಕೊಂಡು ಗಂಗಾವತಿ ತಾಲೂಕಿನ ಸಾಂಸ್ಕೃತಿಕ ಇತಿಹಾಸವನ್ನು ನಿರೂಪಿಸುವುದೇ ಅಧ್ಯಯನದ ಉದ್ದೇಶವಾಗಿದೆ.

ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸ, ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿ ಬೆಳಸಿದ ಕಲೆ, ಅವರ ಜೀವನ ಸಮಸ್ಯೆಗಳು, ಅವರ ಜೀವನದ ಮೌಲ್ಯಗಳು ಅವುಗಳ ವಿವರಣೆಯೇ ಆ ದೇಶದ ಇತಿಹಾಸವಾಗಿದೆ. ಜನತೆಯ ಜೀವಾನಾಭರಣವನ್ನು ಮಾಡುವ ಕುರಿತು ಅಧ್ಯಯನವೇ ಸಾಮಾಜಿಕ ಅಧ್ಯಯನ ಅಥವಾ ಸಾಂಸ್ಕೃತಿಕ ಅಧ್ಯಯನವಾಗಿದೆ.

ದಖ್ಖನ್ ಪ್ರಸ್ಥಭೂಮಿಯಲ್ಲಿರುವ ಕರ್ನಾಟಕ ರಾಜ್ಯದ ಪಶ್ಚಿಮ ಬಯಲು ಪ್ರದೇಶದಲ್ಲಿ ಗಂಗಾವತಿ ತಾಲೂಕು ಸಮಾವೇಶಗೊಂಡಿದೆ. ಭೂ ವೈಜ್ಞಾನಿಕವಾಗಿ ಈ ಪ್ರದೇಶವನ್ನು

ಒಳಗೊಂಡಂತೆ ದಕ್ಷಿಣ ಭಾರತದ ಪ್ರಸ್ಥಭೂಮಿಯನ್ನು ಅತ್ಯಂತ ಪ್ರಾಚೀನ ನಿರ್ಮಾಣವೆಂದೂ, ಆದಿಕಲ್ಪ ಯುಗಕ್ಕೆ ಸೇರಿದ್ದಾಗಿದೆ, ಇದು ಸುಮಾರು ಮೂರು ನೂರು ಕೋಟಿ ವರ್ಷಗಳಷ್ಟು ಸುದೀರ್ಘವಾದ ಕಾಲಮಾನದೆಂದು ಭೂವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಸಾಗರದ ಭಾಗವಾಗಿದ್ದ ಈ ಪ್ರದೇಶ ಮೇಲಿದ್ದು ಕಾಲಾಂತರದಲ್ಲಿ ಹಲವಾರು ಮಾರ್ಪಾಡು ಹೊಂದಿ ಸಸ್ಯ ಹಾಗೂ ಪ್ರಾಣಿಗಳ ವಸತಿಗೆ ಯೋಗ್ಯವಾಗಿ ಇಂದಿನ ಸ್ಥಿತಿಗೆ ಬಂದಿದೆ. ಈ ಭೂಭಾಗವು ಸಮುದ್ರ ಮಟ್ಟದಿಂದ ೨೩೪೫ ಅಡಿ ಎತ್ತರದಲ್ಲಿದೆ. ಈ ಪ್ರದೇಶವು ಆಯಕಟ್ಟಿನದಾಗಿದ್ದು ಬೆಟ್ಟ, ಗುಡ್ಡಗಳು, ಫಲವತ್ತಾದ ನೆಲ, ಜಲ, ಸಸ್ಯ ಮತ್ತು ಪ್ರಾಣಿ ಸಂಪತ್ತಿನಿಂದ ಕೂಡಿದ್ದಾಗಿದೆ. ಕೃಷ್ಣ ನದಿಯ ಉಪನದಿಯಾದ ತುಂಗಭದ್ರಾ ನದಿಯು ಗಂಗಾವತಿ ತಾಲೂಕಿನ ಏಕೈಕ ಪ್ರಧಾನ ನದಿಯಾಗಿದೆ. ಈ ಕಾರಣವಾಗಿ ಇಲ್ಲಿ ಹಲವಾರು ರಾಜ ಮನೆತನಗಳು ಆಳ್ವಿಕೆ ಮಾಡಿರುವುದಕ್ಕೆ ಆಧಾರಗಳಿವೆ. ಉದಾಹರಣೆ ಮೌರ್ಯರು, ಶಾತವಾಹನರ ನಂತರ ಕನ್ನಡದ ಅರಸು ಮನೆತನಗಳಾದ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ಯಾದವ, ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ಪಾಳೆಯಗಾರರ ಸಂತತಿಗಳು ಇಲ್ಲಿ ಆಳ್ವಿಕೆಯನ್ನು ನಡೆಸಿರುತ್ತಾರೆ ಎಂಬುವುದು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ದೊರೆಯುವ ಕೆಲವು ಶಾಸನಗಳಿಂದ ತಿಳಿದು ಬರುತ್ತದೆ. ಈ ರಾಜಮನೆತನಗಳು ತಮ್ಮ ದೀರ್ಘಾವಧಿಯ ಆಳ್ವಿಕೆಯ ಕಾಲದಲ್ಲಿ ಕರ್ನಾಟಕದ ಇತಿಹಾಸ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ವಿಶೇಷವಾಗಿ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಇವರ ಕೊಡುಗೆ ಅಪಾರವಾದುದು.

ಗಂಗಾವತಿ ತಾಲೂಕಿನ ಇತಿಹಾಸ ವಿಜಯನಗರದ ಆಡಳಿತದಷ್ಟು ಪ್ರಾಚೀನವಾಗಿದೆ. ಅಂದಿನಿಂದ ಇಂದಿನವರೆಗೆ ತಾಲೂಕಿನ ಇತಿಹಾಸದ ಮೇಲೆ ಶಾಸನಗಳು, ಸ್ಮಾರಕ ಶಿಲ್ಪಗಳು ಬೆಳಕು ಚೆಲ್ಲುತ್ತವೆ. ಆಧುನಿಕ ಕಾಲದಲ್ಲಿ ಈ ತಾಲೂಕು ರಾಜಕೀಯವಾಗಿ 'ಹೈದ್ರಾಬಾದ್ ಪ್ರಾಂತ್ಯ ಹಾಗೂ ಕರ್ನಾಟಕ ಪ್ರಾಂತ್ಯಗಳಿಗೆ ಹಸ್ತಾಂತರವಾಗುತ್ತಾ ಬಂದಕಾರಣ ಆಡಳಿತಾತ್ಮಕವಾಗಿ ಹಲವಾರು ಗೊಂದಲಗಳಿರುವುದರಿಂದ ಇಲ್ಲಿನ ಶಾಸನಗಳ ಸಂಶೋಧನೆಗಳು ವ್ಯಾಪಕವಾಗಿ ನಡೆಯಲಿಲ್ಲ ಆದರೆ ಇಲ್ಲಿಯವರೆಗಿನ ಸಂಶೋಧನೆಗಳಿಂದಾಗಿ ಗಂಗಾವತಿ ತಾಲೂಕಿನ ಐತಿಹಾಸಿಕ ಹಿನ್ನೆಲೆಯನ್ನು ಅರ್ಥೈಸಿಕೊಳ್ಳಲು ಸಹಾಯಕವಾಗಿದೆ. ಗಂಗಾವತಿ ತಾಲೂಕಿನ ಪರಿಸರವು ಭೌಗೋಳಿಕವಾಗಿ ಹಳ್ಳ, ಕೊಳ್ಳ ಬೆಟ್ಟಗುಡ್ಡಗಳಿಂದ ಸಮೃದ್ಧವಾಗಿದ್ದು, ಶಿಲಾಯುಗದ ಮಾನವನು ನೆಲೆಸಲು ಅನುಕೂಲಕರವಾದ ಪ್ರಾಕೃತಿಕ ಸಂಪತ್ತಿನಿಂದ ಕೂಡಿತ್ತೆಂದು ಹೇಳಬಹುದು. ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಹೈದರಬಾದ್ ನಿಜಾಮನ ಕಾಲದವರೆಗಿನ ಸಾಂಸ್ಕೃತಿಕ ಅವಶೇಷಗಳನ್ನು ಒಳಗೊಂಡಿರುವ ಇದು ಐತಿಹಾಸಿಕ ಮಹತ್ವವನ್ನು ಹೊಂದಿದೆ.

ಇತಿಹಾಸ ಕಾಲದಲ್ಲಿ ಬಾಳಿ ಬದುಕಿದ ಹಲವು ರಾಜಮನೆತನಗಳು ಈ ಪ್ರದೇಶವನ್ನು ಆಳ್ವಿಕೆ ಮಾಡಿವೆ. ಮುಖ್ಯವಾಗಿ ವಿವಿಧ ಅರಸರ ಕಾಲವಧಿಯಲ್ಲಿ ರಚನೆಯಾದ ಶಾಸನಗಳು, ದೇವಾಲಯಗಳು, ಸ್ಮಾರಕಶಿಲ್ಪಗಳು ಸಾಂಸ್ಕೃತಿಕ ಮಹತ್ವವನ್ನು ಹೊಂದಿವೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಸ್ಮಾರಕಶಿಲ್ಪಗಳು ನೂರಾರು ಸಂಖ್ಯೆಯಲ್ಲಿದ್ದು, ವಿವಿಧ ಪ್ರಕಾರದಲ್ಲಿವೆ. ಇಂತಹ ನಿರ್ಲಕ್ಷ್ಯೆಗೆ ಒಳಗಾಗಿರುವ ಸ್ಮಾರಕಶಿಲ್ಪಗಳ ರಚನಾ ಉದ್ದೇಶ ಮತ್ತು ಅವುಗಳ ಸಾಂಸ್ಕೃತಿಕ ಮಹತ್ವ ಅರಿಯಲು ಪ್ರಸ್ತುತ ಅಧ್ಯಯನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿನ ಭೌಗೋಳಿಕ ಪರಿಸರವು ಹಳ್ಳ-ಕೊಳ್ಳ, ಬೆಟ್ಟ-ಗುಡ್ಡಗಳಿಂದ ಸಮೃದ್ಧವಾಗಿದೆ, ಪ್ರಾಗ್ಯೈತಿಹಾಸಿಕ ಕಾಲದಿಂದ ಇದು ಹೈದ್ರಾಬಾದ ನಿಜಾಮನ ಕಾಲದವರೆಗಿನ ಸಾಂಸ್ಕೃತಿಕ ಇತಿಹಾಸವು ಇಲ್ಲಿನ ಪ್ರಮುಖ ಪಾತ್ರವನ್ನು ವಹಿಸಿದೆ. ಮುಖ್ಯವಾಗಿ ಸ್ಮಾರಕ ಶಿಲ್ಪಗಳನ್ನು ಕುರಿತಂತೆ ಅಧ್ಯಯನ ಮಾಡುವುದು ಈ ಪ್ರಬಂಧದ ಪ್ರಮುಖ ಉದ್ದೇಶವಾಗಿದೆ.

೧.೧ ಅಧ್ಯಯನದ ಉದ್ದೇಶ

ಯಾವುದೇ ಒಂದು ವಿಷಯಕ್ಕೆ ಅಧ್ಯಯನದ ನಿರ್ದಿಷ್ಟ ಉದ್ದೇಶವೇ ಪ್ರಮುಖವಾದದ್ದು. ಏಕೆಂದರೆ ಅಧ್ಯಯನದ ಉದ್ದೇಶ ಸ್ಪಷ್ಟವಾಗದಿದ್ದರೆ ಇಡೀ ಅಧ್ಯಯನವು ಗೊಂದಲದಿಂದ ಕೂಡಿರುತ್ತದೆ, ಆದ್ದರಿಂದ ಅಧ್ಯಯನದ ಉದ್ದೇಶ ಸ್ಪಷ್ಟವಾಗಿರಬೇಕು. ಪ್ರಸ್ತುತ ಅಧ್ಯಯನವನ್ನು "ಗಂಗಾವತಿ ತಾಲೂಕಿನ ಸ್ಮಾರಕ ಶಿಲ್ಪಗಳು" ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನೆ ಕೈಗೊಳ್ಳಲಾಗಿದೆ, ಇತಿಹಾಸ ಪುಟಗಳಲ್ಲಿ ಅಜ್ಞಾತವಾಗಿರುವ ಗಂಗಾವತಿ ತಾಲೂಕಿನ ಸ್ಮಾರಕ ಶಿಲ್ಪಗಳ ಇತಿಹಾಸವನ್ನು ಪ್ರಸ್ತುತ ಪ್ರೌಢಪ್ರಬಂಧದ ಮೂಲಕ ಬೆಳಕಿಗೆ ತರುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗಂಗಾವತಿ ತಾಲೂಕು ಪರಿಸರದಲ್ಲಿ ಕಂಡುಬರುವ ಸ್ಮಾರಕ ಶಿಲ್ಪಗಳನ್ನು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜೊತೆಗೆ ಕ್ಷೇತ್ರಕಾರ್ಯದ ಮೂಲಕ ದೊರೆತ ಅವಶೇಷಗಳನ್ನು ಗುರುತಿಸಿ, ಅವುಗಳನ್ನು ದಾಖಲಿಸುವುದು ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ. ಗಂಗಾವತಿ ತಾಲೂಕಿನಲ್ಲಿ ಇದುವರೆಗೆ ಬೆಳಕಿಗೆ ಬಂದಿರುವ ಸ್ಮಾರಕ ಶಿಲ್ಪದ ಕುರಿತಾದ ಮಾಹಿತಿಗೆ ಹೊಸ ಸೇರ್ಪಡೆ ಮಾಡಲಾಗುವುದು. ತಾಲೂಕಿನಲ್ಲಿ ಸ್ಮಾರಕ ಶಿಲ್ಪಗಳು ಪ್ರಕಟಗೊಂಡಿರುವ ಹಾಗೂ ಪ್ರಕಟವಾಗದೇ ಇರುವ ಸ್ಮಾರಕ ಶಿಲ್ಪಗಳ ಪರಿಚಯ ಹಾಗೂ ವಿಶ್ಲೇಷಣೆಯನ್ನು ಮಾಡುವುದರ ಮೂಲಕ ಈ ಸ್ಮಾರಕಗಳ ಬಗ್ಗೆ ಇಲ್ಲಿರುವಂತಹ ವಿಭಿನ್ನ ಸಂಪ್ರದಾಯಗಳು, ನಂಬಿಕೆ ಮತ್ತು ಆಚರಣೆಗಳ ಕುರಿತು ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಲಾದ ಮಾಹಿತಿಯನ್ನು ಸಂಪ್ರಬಂಧದಲ್ಲಿ ದಾಖಲಿಸಲಾಗಿದೆ. ಒಟ್ಟಾರೆಯಾಗಿ ಗಂಗಾವತಿ ತಾಲೂಕಿನ ಸ್ಮಾರಕ ಶಿಲ್ಪಗಳನ್ನು ಗುರುತಿಸಿ, ಅವುಗಳ ಐತಿಹಾಸಿಕ ಮಹತ್ವವನ್ನು ಬೆಳಕಿಗೆ ತರುವ ಪ್ರಯತ್ನ ಮಾಡುವುದು. ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ವಿಷಯದ ಬಗ್ಗೆ ಪರಿಪೂರ್ಣ ಸಂಶೋಧನೆಯನ್ನು ಕೈಗೊಂಡಾಗ ಅದು ತನ್ನದೆ ಆದ ವ್ಯಾಪ್ತಿ ಹೊಂದುವುದು ಅತ್ಯವಶ್ಯಕ. ಇದರಿಂದ ಒಂದು ಉದ್ದೇಶಪೂರಿತ ಸಂಶೋಧನೆಯು ಯಶಸ್ವಿಯಾಗಲು ತುಂಬಾ ಸಹಕಾರಿ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕ ಮತ್ತು ಕಾಲ ವ್ಯಾಪ್ತಿಗೆ ನಿಗದಿಪಡಿಸಲಾಗಿದ್ದು, ಭೌಗೋಳಿಕ ವ್ಯಾಪ್ತಿ ಗಂಗಾವತಿ ತಾಲೂಕಿಗೆ ಹಾಗೂ ಕಾಲ ವ್ಯಾಪ್ತಿ ಕ್ರಿ.ಶ ಆರಂಭದಿಂದ ವಿಜಯನಗರೋತ್ತರ ಕಾಲದವರೆಗೆ ನಿಗದಿಪಡಿಸಲಾಗಿದೆ. ಜೊತೆಗೆ ಸಂದರ್ಭಕ್ಕೆ ತಕ್ಕಂತೆ ಅಧ್ಯಯನಕ್ಕೆ ಪೂರಕವಾಗಿ ನೆರೆಯ ತಾಲೂಕಿನ ಗ್ರಾಮಗಳನ್ನು ಕೂಡ ಅಧ್ಯಯನದ ವ್ಯಾಪಿಗೆ ಒಳಪಡಿಸಕೊಳ್ಳಲಾಗಿದೆ.

೧.೩ ಅಧ್ಯಯನ ಸಮೀಕ್ಷೆ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ದೇವಾಲಯ, ಶಾಸನ, ಕೋಟೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ವಿವಿಧ ನೆಲೆಗಳಲ್ಲಿ ಅಧ್ಯಯನಗಳಾಗಿರುವುದು ಕಂಡುಬರುತ್ತದೆ. ಆದರೆ ಪ್ರಸ್ತುತ ಅಧ್ಯಯನ ಸಂಬಂಧಿಸಿದ ನಿರ್ದಿಷ್ಟ ಅಧ್ಯಯನಗಳು ನಡೆದಿರುವುದಿಲ್ಲ. ಆದರೂ ಇಲ್ಲಿಯವರಗೆ ನಡೆದಿರುವ ಅಧ್ಯಯನಗಳು ವಿಷಯಕ್ಕೆ ಸಂಬಂಧಿಸಿದ ಪೂರಕ ಮಾಹಿತಿಗಳನ್ನು ಒದಗಿಸುತ್ತವೆ. ಕೃತಿ, ಪ್ರಬಂಧ, ಹಾಗೂ ಲೇಖನಗಳ ರೂಪದಲ್ಲಿ ನಡೆದಿರುವ ಅಧ್ಯಯನಗಳನ್ನು, ಈ ಕೆಳಕಂಡಂತೆ ಸಮೀಕ್ಷೆಗೆ ಒಳಪಡಿಸಲಾಗಿದೆ.

ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ ಎಸ್. ವೈ., ಕೊಟ್ರೇಶ್ ಮಾಡಲಗೇರಿಯವರ ಸಂಪಾದನೆಯಲ್ಲಿ 'ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ ಕೃತಿಯು ಕೊಪ್ಪಳ ಜಿಲ್ಲೆಯ ಪ್ರಮುಖ ದೇವಾಲಗಳ ವಾಸ್ತು ವಿವರಣೆಯನ್ನೊಳಗೊಂಡಿದೆ. ಇದರಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ದೇವಾಲಯಗಳ ಕುರಿತ ಚರ್ಚಿಸಿದ್ದಾರೆ. ಅಶ್ವಥ ಡಿ.ಎಸ್, ಅವರು ಕೊಪ್ಪಳ ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಯಲ್ಲಿ ಕೊಪ್ಪಳದ ಪ್ರಾಗಿತಿಹಾಸಿಕ, ರಾಜಕೀಯ ಚರಿತ್ರೆ, ವಾಸ್ತು ಶಿಲ್ಪ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕತೆ ಹಾಗೂ ಕೆಲವು ಶಾಸನ, ವೀರಗಲ್ಲು, ನಿಸಿದಿಗಲ್ಲುಗಳನ್ನು ಕುರಿತು ಚರ್ಚಿಸಿದ್ದಾರೆ, ಅ. ಸುಂದರರವರ 'ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ', ಎಂಬ ಕೃತಿಯಲ್ಲಿ ಪ್ರಾಸಂಗಿಕವಾಗಿ ಕೊಪ್ಪಳ ಪ್ರದೇಶದ ಕೆಲವೊಂದು ಪ್ರಾಚೀನ ನೆಲೆ ಹಾಗೂ ಗವಿವರ್ಣ ಚಿತ್ರಗಳನ್ನು ಕುರಿತಾಗಿ ವಿಶ್ಲೇಷಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ–೨, ಕೊಪ್ಪಳ ಜಿಲ್ಲೆ, ಹಂಪ ನಾಗರಾಜಯ್ಯ ಅವರ ಕೊಪ್ಪಳ ಶಾಸನಗಳು ಮತ್ತು ಚನ್ನಬಸವ ಹಿರೇಮಠ ಅವರ ಕೊಪ್ಪಳ ರಾಯಚೂರ ಜಿಲ್ಲೆಯ ಶಾಸನಗಳು. ಶಾಸನ ಸಂಪುಟಗಳು, ಕೊಪ್ಪಳ ಜಿಲ್ಲೆಯ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ಶರಣಬಸಪ್ಪ ಕೋಲ್ಕಾರ ಅವರ 'ಶಿಲಾಯುಗದ ಗವಿಚಿತ್ರಗಳು' ಎಂಬ ಕೃತಿಯಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸ ಕಾಲದ ಗವಿವರ್ಣಚಿತ್ರ ಹಾಗೂ ಬಯಲು ಬಂಡೆ ಚಿತ್ರಗಳನ್ನು ಪ್ರಧಾನವಾಗಿಟ್ಟುಕೊಂಡು ನಡೆಸಿದ ಅಧ್ಯಯನವು ಶಿಲಾಯುಗ ಕಾಲದ ಜನ ಜೀವನವನ್ನು ಅರಿಯುವಲ್ಲಿ ತುಂಬಾ ಮಹತ್ವದ ಗ್ರಂಥವಾಗಿದೆ. ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆಯ ಕುರಿತು ವಿಶ್ಲೇಷಣಾತ್ಮಕ ಸಂಶೋಧನೆ ಇದಾಗಿದೆ. ಶರಣಬಸಪ್ಪ ಕೋಲ್ಕಾರ ಅವರು 'ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು' (ಅಪ್ರಕಟಿತ) ಎಂಬ ಎಂ.ಫಿಲ್ ಸಂಪ್ರಬಂಧದಲ್ಲಿ ವಿಜಯನಗರ ಅರಸರ ಮಾಂಡಲಿಕರಾದ ಕನಕಗಿರಿ ಅರಸರ ರಾಜಕೀಯ, ಆಡಳಿತ, ಶಾಸನ, ದೇವಾಲಯ, ಮೂರ್ತಿಶಿಲ್ಪಗಳನ್ನು ಕುರಿತು ವಿವರವಾದ ವಿಶ್ಲೇಷಣೆ ಮಾಡಿದ್ದಾರೆ ಹಾಗೂ ಇವರು "ವಿಜಯನಗರದ ಮಾತೃಸ್ಥಾನ ಆನೆಗೊಂದಿ ಮತ್ತು ಹಿರೇಜಂತಗಲ್ ಇತಿಹಾಸ – ವಾಸ್ತು ಶಿಲ್ಪಕಲೆ" ಕಲೆಗಳಲ್ಲಿ ವಿಜಯನಗರ ಪರಿಸರದ ಚರಿತ್ರೆ, ಕಲೆ, ಸಂಸ್ಕೃತಿ ಇತ್ಯಾದಿ ಸಂಶೋಧನಾ ಲೇಖನಗಳಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಶಾಸನ, ದೇವಾಲಯ, ಮೂರ್ತಿಶಿಲ್ಪ, ಸ್ಮಾರಕ ಶಿಲ್ಪ, ಕೋಟೆಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ.

ಮಹದೇವ ಸಿ. ಅವರ "ಕುಮ್ಮಟದುರ್ಗ ಅರಸರು" ಈ ಕೃತಿಯಲ್ಲಿ ಕೊಪ್ಪಳ ಜಿಲ್ಲೆಯ ಕುಮ್ಮಟದುರ್ಗದಿಂದ ಆಳಿದ ಮುಮ್ಮಡಿ ಸಿಂಗನಾಯಕ, ಕಂಪಿಲರಾಯ ಹಾಗೂ ಕುಮಾರರಾಮನ ಇತಿಹಾಸವನ್ನು ನಿರೂಪಿಸಲಾಗಿದೆ. ಜೊತೆಗೆ ಕುಮ್ಮಟದುರ್ಗದ ಪ್ರಾಚ್ಯಾವಶೇಷಗಳನ್ನು ಪರಿಚಯಿಸಲಾಗಿದೆ. ಶೇಷಶಾಸ್ತ್ರಿ ಆರ್; ಅವರು "ಕರ್ನಾಟಕದ ವೀರಗಲ್ಲು" ಎಂಬ ಕೃತಿಯಲ್ಲಿ ಕರ್ನಾಟಕದ ಸ್ಮಾರಕ ಶಿಲ್ಪಗಳ ಬಗೆಗೆ ಸಮಗ್ರವಾಗಿ ಮೊದಲಿಗೆ ಅಧ್ಯಯನ ಮಾಡಿದ್ದಾರೆ. ಈ ಕೃತಿಯಲ್ಲಿ ಗಂಗಾವತಿ ತಾಲೂಕಿನಲ್ಲಿರುವ ಆನೆಗೊಂದಿ, ಕಡೇಬಾಗಿಲು ಈ ಪ್ರದೇಶದಲ್ಲಿ ಕಂಡುಬರುವ ವೀರಗಲ್ಲು, ವೀರಮಾಸ್ತಿಗಲ್ಲುಗಳ ಬಗೆಗೆ ವಿಶ್ಲೇಷಿಸಿದ್ದಾರೆ. ಬಸವರಾಜ ಆಕಳವಾಡಿ ಸಂಪಾದನೆಯಲ್ಲಿ 'ಆನೆಗೊಂದಿ', ಅವಲೋಕನ ಕೃತಿಯಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಪರಿಚಯ, ಭೌಗೋಳಿಕ ಮತ್ತು ಪ್ರಾಗಿತಿಹಾಸ, ಪೌರಾಣಿಕ ಹಿನ್ನೆಲೆ, ತಾಲೂಕಿನಲ್ಲಿ ಕಂಡುಬಂದ ರಾಮಾಯಣದ ಐತಿಹ್ಯಗಳು ಚರಿತ್ರೆ, ನರಪತಿ ಸಂಸ್ಥಾನ, ಅರಸುಮನೆತನದ ಅರಸಿಯರು, ಧರ್ಮ ಮತ್ತು ಸಾಂಸ್ಕೃತಿಕ ಶಾಸನಗಳು, ಕಲೆ ಮತ್ತು ವಾಸ್ತುಶಿಲ್ಪ, ಸಾಂಸ್ಕೃತಿಕ ನೆಲೆಗಳು, ಕೋಟೆ ಕೊತ್ತಲುಗಳು, ನವವೃಂದಾವನ, ಅಂಜನಾದ್ರಿ, ನೀರಾವರಿ ವ್ಯವಸ್ಥೆ ಹೀಗೆ ಮೊದಲಾದ ವಿಷಯದ ಕುರಿತು ಅಧ್ಯಯನ ಮಾಡಿದ್ದಾರೆ.

ವಿನೋದಾ ಪಾಟೀಲ ಅವರ 'ಕರ್ನಾಟಕದ ಪ್ರಾಚೀನ ಬಾವಿಗಳು' ಎಂಬ, ಸಂಶೋಧನಾ ಪ್ರಬಂಧದಲ್ಲಿ ಕರ್ನಾಟಕದ ಹಲವು ಬಾವಿಗಳ ಚರಿತ್ರೆಯನ್ನು ತಿಳಿಸಿದ್ದಾರೆ. ಅದರಲ್ಲಿ ಕನಕಗಿರಿಯ ವೆಂಕಟಪತಿ ಬಾವಿಯ ಬಗ್ಗೆ ಉಲ್ಲೇಖಿಸಿದ್ದಾರೆ. ಈ ಗ್ರಂಥದಿಂದ ಕರ್ನಾಟಕದ ನೀರಾವರಿ ವ್ಯವಸ್ಥೆಯಲ್ಲಿ ಬಾವಿಗಳ ಮಹತ್ವ ತಿಳಿದುಬರುತ್ತದೆ. ಹಿರೇಮಠ ಎಸ್.ಎಸ್. ಅವರ 'ಕೊಪ್ಪಳ ಜಿಲ್ಲೆಯ ಜಾತ್ರೆಗಳು' ಎಂಬ ಕೃತಿಯಲ್ಲಿ ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಟಗಿ

ತಾಲೂಕುಗಳಲ್ಲಿರುವ ಜಾತದರೆಯ ಮತ್ತು ಜಾತ್ರೆಯಲ್ಲಿ ನಡೆಯುವ ಪ್ರಮುಖ ಆಚರಣೆಗಳನ್ನು ಕುರಿತು ವಿವರಿಸಿದ್ದಾರೆ. ವೀರುಪಾಕ್ಷ ಪೂಜಾರಹಳ್ಳಿ ಅವರು 'ವಿಜಯನಗರದ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ' ಎಂಬ ಲೇಖನವು ವಿಜಯನಗರ ಅಧ್ಯಯನ ಸಂಪುಟ-೬ರಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಆನೆಗೊಂದಿಯಲ್ಲಿರುವ ಹುಟ್ಟನ್ನು ಹಿಡಿದುಕೊಂಡಿರುವ ಅಂಬಿಗರ ಶಿಲ್ಪ ಹಾಗೂ ಅದರ ಕುರಿತು ಇರುವ ಐತಿಹ್ಯ ಮತ್ತು ಶಾಸನಗಳ ವಿವರವಿದೆ.

ರೇಣುಕಾ ಅವರ 'ಗಂಗಾವತಿ ತಾಲೂಕಿನ ಸಾಂಸ್ಕೃತಿಕ ಅಧ್ಯಯನ' (ಆರಂಭದಿಂದ ವಿಜಯನಗರ ಕಾಲದವರಗೆ), ಎಂಬ ಎಂ.ಫಿಲ್ ಸಂಪ್ರಬಂಧದಲ್ಲಿ ಗಂಗಾವತಿ ತಾಲೂಕಿನ ಶಾಸನ, ಸ್ಮಾರಕ, ದೇವಾಲಯಗಳು ಕುರಿತು ಚರ್ಚಿಸಿದ್ದಾರೆ. ಕುಮಾರಿ ಶಾರದಾ ಮಲ್ಲಿಕಾರ್ಜುನ ಪಾಟೀಲ್ ಅವರು 'ಕೊಪ್ಪಳ ಜಿಲ್ಲೆಯ ಕೆರೆ, ಬಾವಿಗಳು, ಚಾರಿತ್ರಿಕ ಅಧ್ಯಯನ' ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ದೊರೆಯುವ ಪ್ರಾಚೀನ ಕಾಲದಿಂದ ಆಧುನಿಕ ಕಾಲದ ವರೆಗಿನ ಕೆರೆ, ಬಾವಿಗಳ ಕುರಿತು ಚರ್ಚಿಸಿದ್ದಾರೆ. ಗೀತಾ ಪಾಟೀಲ 'ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು' ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ದೇವಾಲಯಗಳು, ಸ್ಮಾರಕ ಶಿಲ್ಪಗಳು, ಮೂರ್ತಿಶಿಲ್ಪಗಳ ಕುರಿತು ವಿವರಿಸಿದ್ದಾರೆ. ಈ ಮಹಾಪ್ರಬಂಧವನ್ನು ಪೂರಕ ಮಾಹಿತಿಗಾಗಿ ಬಳಸಿಕೊಳ್ಳಲಾಗಿದೆ. ಮೇಲೆ ವಿವರಿಸಿದ ಇದುವರೆಗಿನ ಅಧ್ಯಯನಗಳನ್ನು ಗಮನಿಸಿದರೆ ಗಂಗಾವತಿ ತಾಲೂಕಿನ ರಾಜಕೀಯ ಚರಿತ್ರೆ, ದೇವಾಲಯ, ಶಾಸನ, ಜನಪದ ಆಚರಣೆ, ಹಾಗೂ ಐತಿಹಾಸಿಕ ಸ್ಥಳದ ಪರಿಚಯಾತ್ಮಕ ಅಧ್ಯಯನಗಳು ನಡೆದಿವೆ ಹೊರತು ಇಡೀ ಗಂಗಾವತಿ ತಾಲೂಕಿನ ಸ್ಮಾರಕ ಶಿಲ್ಪಗಳ ಕುರಿತು ವ್ಯವಸ್ಥಿತವಾದ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ಮುಖೇನ ಗಂಗಾವತಿ ತಾಲೂಕಿನ ಸ್ಮಾರಕ ಶಿಲ್ಪಗಳ ಕುರಿತು ಸಮಗ್ರವಾದ ಮಾಹಿತಿಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗುವುದು.

೧.೪ ಅಧ್ಯಯನದ ವಿಧಾನ ಮತ್ತು ಸ್ವರೂಪ

ಒಂದು ಕಾರ್ಯ ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತಿಮುಖ್ಯ. ಹಾಗಾಗಿ ಸಂಶೋಧನಾ ಕಾರ್ಯಕ್ಕೂ ವ್ಯವಸ್ಥಿತ ಅಧ್ಯಯನ ಬಹಳ ಅವಶ್ಯಕವಾದದ್ದು. ಅಧ್ಯಯನವನ್ನು ಕ್ಷೇತ್ರಕಾರ್ಯ ಕೈಗೊಂಡು ಪೂರೈಸಲಾಗಿದೆ. ಸಂಶೋಧನೆಗಾಗಿ ಗಂಗಾವತಿ ತಾಲೂಕನ್ನು ಆಯ್ದುಕೊಂಡಾಗ ತಾಲ್ಲೂಕ ತಹಸೀಲ್ದಾರ್ ಕಛೇರಿಯಲ್ಲಿ ತಾಲೂಕಿನ ನಕಾಶೆ, ಇತರೆ ಮಾಹಿತಿಯನ್ನು ಪಡೆದು ಸ್ಮಾರಕ ಶಿಲ್ಪಗಳು, ದೇವಾಲಯ, ಮೂರ್ತಿಶಿಲ್ಪ, ಶಿಲ್ಪಗಳು, ಶಾಸನಗಳು ಇತ್ಯಾದಿ ವಿವರ ಸಂಗ್ರಹಿಸಿಕೊಂಡು ಈವರೆಗಿನ ಅಧ್ಯಯಗಳನ್ನು ಗಮನಿಸಿ ಅಧ್ಯಯನ ಮಾಡಲಾಗಿದೆ. ಅಲ್ಲದೆ ಇವುಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಅಗತ್ಯ ನಕ್ಷೆಗಳ

ರಚಿಸಿಕೊಳ್ಳಲಾಗುವುದು. ಸಾಂಸ್ಕೃತಿಕವಾಗಿ ಇಂದಿಗೂ ನಡೆದುಕೊಂಡು ಬರುತ್ತಿರುವ ಜಾತ್ರೆ ಉತ್ಸವಗಳಿಗೆ ಭೇಟಿ ನೀಡಿ ಛಾಯಾಚಿತ್ರ ಸಂಗ್ರಹಿಸಲಾಗಿದೆ.

ಗಂಗಾವತಿ ತಾಲೂಕಿನ ಪರಿಸರದ ಭೌಗೋಳಿಕ, ಪ್ರಾಗೈತಿಹಾಸಿಕ, ಚಾರಿತ್ರಿಕ, ಪುರಾತತ್ವೀಯ ಸಾಂಸ್ಕೃತಿಕ ಅಂಶಗಳನ್ನು ಕ್ಷೇತ್ರಕಾರ್ಯಗಳ ಮೂಲಕ ದಾಖಲಿಸಿಕೊಳ್ಳಲಾಗುವುದು. ಕ್ಷೇತ್ರಕಾರ್ಯದ ಮಾಹಿತಿಯಿಂದ ಸಂಶೋಧನೆಗೆ ಪ್ರಾಥಮಿಕ ಆಕರ ಸಂಗ್ರಹ ಮಾಡಿ ಇದಕ್ಕೆ ಪೂರಕವಾಗಿ, ಆಕರಗಳನ್ನು ವಿವಿಧ ಗ್ರಂಥಾಲಯಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿದೆ, ಜೊತೆಗೆ ವಿದ್ವಾಂಸರುಗಳನ್ನು ಭೇಟಿ ಮಾಡಿ ಮಾಹಿತಿ ಪಡೆದಿರುತ್ತೇನೆ..

ಪ್ರಸ್ತುತ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಸಮೀಕ್ಷೆ ಹಾಗೂ ಸ್ವರೂಪವನ್ನು ಒಳಗೊಂಡಿದ್ದು ಪ್ರಬಂಧದ ಒಟ್ಟು ರೂಪರೇಷೆಯನ್ನು ಕುರಿತು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯವು ಭೌಗೋಳಿಕ ಹಾಗೂ ಐತಿಹಾಸಿಕ ಸ್ಥಳನಾಮಗಳ ಹಿನ್ನಲೆಯನ್ನು ಒಳಗೊಂಡಿದೆ. ಗಂಗಾವತಿ ತಾಲೂಕಿನ ಭೌಗೋಳಿಕ ಸನ್ನಿವೇಶಗಳು ಚರಿತ್ರೆಯ ನಿರ್ಮಾಣದಲ್ಲಿ ಹೇಗೆ ಪೂರಕವಾಗಿದೆ ಎಂಬ ಅಂಶಗಳನ್ನು ಕುರಿತು ಈ ಅಧ್ಯಾಯನದಲ್ಲಿ ಸವಿವರವಾಗಿ ಚರ್ಚಿಸಲಾಗಿದೆ. ಈ ಭಾಗದಲ್ಲಿ ಆಡಳಿತ ನಡೆಸಿರುವ ರಾಜ ಮನೆತನಗಳಾದ ಮೌರ್ಯ, ಶಾತವಾಹನ, ಕದಂಬ, ಗಂಗರು, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ಯಾದವ, ವಿಜಯನಗರದ ಅರಸರು, ಹಾಗೂ ಕನಕಗಿರಿ ಪಾಳೇಗಾರರ ಆಳ್ವಿಕೆಯನ್ನು ಒಳಗೊಂಡಂತೆ ಲಭ್ಯವಾಗಿರುವ ಚಾರಿತ್ರಿಕ ಕುರುಹುಗಳನ್ನು ಆಧಾರವಾಗಿಟ್ಟು ಕೊಂಡು ಚಾರಿತ್ರಿಕ ಹಿನ್ನಲೆ ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ಸ್ಮಾರಕ ಶಿಲ್ಪಗಳ ಉಗಮ ಮತ್ತು ಬೆಳವಣೆಗೆ, ವೈಶಿಷ್ಟತೆಗಳ ಕುರಿತು ವಿವರಣೆ, ಶಾಸನಗಳು ಹಾಗೂ ಶಿಲ್ಪಗಳ ಹಿನ್ನಲೆಯಲ್ಲಿ ವಿಶ್ಲೇಷಿಸಲಾಗಿದೆ,

ನಾಲ್ಕನೆಯ ಅಧ್ಯಾಯವು ಸ್ಮಾರಕ ಶಿಲ್ಪಗಳ ಪ್ರಕಾರಗಳು ಎಂಬ ಶೀರ್ಷಿಕೆ ಹೊಂದಿದ್ದು, ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಿರುವ ಸ್ಮಾರಕ ಶಿಲ್ಪಗಳ ಲಕ್ಷಣಗಳನ್ನು ಆಧಾರಿಸಿ ವೀರಗಲ್ಲು, ಮಾಸ್ತಿಗಲ್ಲು, ನಿಸಿದಿಗಲ್ಲುಗಳೆಂದು ವಿಂಗಡಿಸಿಕೊಂಡು ಶಿಲ್ಪ ಹಾಗೂ ಶಾಸನ ಹಿನ್ನಲೆಯಲ್ಲಿ ವಿವರಿಸಿರುತ್ತೇನೆ.

ಐದನೆಯ ಅಧ್ಯಾಯವು ನಂಬಿಕೆ ಮತ್ತು ಆಚರಣೆಗಳ ಹಿನ್ನಲೆಯಲ್ಲಿ ಸ್ಮಾರಕ ಶಿಲ್ಪಗಳ

ಮೇಲೆ ಜನ ಸಮುದಾಯಗಳು ರೂಢಿಸಿಕೊಂಡು ಬಂದಿರುವ ನಂಬಿಕೆ ಆಚರಣೆಗಳ, ಜಾತ್ರೆ, ಉತ್ಸವಗಳನ್ನು ಕುರಿತಂತೆ ವಿವರಿಸಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು, ಇದು ಇಡೀ ಅಧ್ಯಾಯನದಲ್ಲಿ ಕಂಡುಕೊಂಡ ಒಟ್ಟಾರೆಯ ಸಂಶೋಧನೆಯ ಫಲಿತಗಳನ್ನು ಒಳಗೊಂಡಿದೆ. ಅದರೊಂದಿಗೆ ಅಧ್ಯಾಯಗಳ ಸಂಕ್ಷಿಪ್ತ ರೂಪವನ್ನು ಇಲ್ಲಿ ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಕೃತಿ, ಲೇಖನ, ಶಾಸನ ಸಂಪುಟ, ಪ್ರಕಟಿತ ಪ್ರೌಢ ಪ್ರಬಂಧ ಮುಂತಾದ ವಿವರಗಳನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ಅಧ್ಯಯನದ ವಿಷಯಕ್ಕೆ ಪೂರಕವಾದ ಛಾಯಾಚಿತ್ರಗಳು, ಅಗತ್ಯ ನಕ್ಷೆಗಳನ್ನು ಅನುಬಂಧದಲ್ಲಿ ನೀಡಿರುತ್ತೇನೆ.

ಅಧ್ಯಾಯ – ಎರಡು
ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ – ಎರಡು
ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ತಾಲೂಕು ಆರ್ಥಿಕ ಶ್ರೀಮಂತಿಕೆಯ ಜೊತೆಗೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿದೆ. ವೈಶಿಷ್ಟ್ಯಪೂರ್ಣವಾದ ಇಲ್ಲಿಯ ಭೌಗೋಳಿಕ ಸನ್ನಿವೇಶ ಚರಿತ್ರೆಯನ್ನು ಭಿನ್ನವಾಗಿಸಿದೆ. ಒಂದಡೆ ದಟ್ಟವಾದ ಬೆಟ್ಟದ ಸಾಲುಗಳು, ಮತ್ತೊಂದೆಡೆ ಬಟ್ಟಬಯಲುಗಳಿಂದ ಕೂಡಿದ ಪರಿಸರದಲ್ಲಿ ನದಿ, ಹಳ್ಳ, ಕೆರೆ ಮಣ್ಣು, ಶಿಲೆ, ಖನಿಜ ಸಸ್ಯಸಂಪತ್ತಿನ ಹಾಗೂ ಪ್ರಾಣಿಗಳ ವೈವಿಧ್ಯತೆ ಇರುವುದು ತಿಳಿದುಬಂದಿದೆ. ಈ ಪ್ರದೇಶ ಪ್ರಾಚೀನ ಕಾಲದಿಂದ ಮಾನವನ ಬದುಕು ಹೇಗೆ ಸಾಂಸ್ಕೃತಿಕರಣಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿರುವುದು ತಿಳಿಯುತ್ತದೆ. ಇಲ್ಲಿಯ ಮಾನವನ ಬದುಕನ್ನು ವೈಶಿಷ್ಟ್ಯಗೊಳಿಸುತ್ತ ನಡೆದ ಹಾದಿಯ ಅವಲೋಕನವೂ ಸ್ವಾರಸ್ಯಕರವಾದ ಸಂಗತಿಯಾಗಿದೆ. ಗಂಗಾವತಿ ತಾಲ್ಲೂಕು ಕೊಪ್ಪಳ ಜಿಲ್ಲೆಯ ಪೂರ್ವ ಭಾಗದಲ್ಲಿದೆ. ಈ ವಿಶ್ವ ಪಾರಂಪರಿಕ ತಾಣ ಹಂಪಿಯಿಂದ ಉತ್ತರಕ್ಕೆ ೧೨ ಕಿ.ಮೀ ಅಂತರದಲ್ಲಿದೆ. ಗಂಗಾವತಿ ತಾಲೂಕಿಗೆ ಅದರ ಸಾಮ್ರಾಜ್ಯ ಮಾತೃ ಸ್ಥಾನ ಆನೆಗೊಂದಿ, ಕಲಾತ್ಮಕ ಸ್ಮಾರಕಗಳ ಕೇಂದ್ರ ಕನಕಗಿರಿ ಗಂಗಾವತಿ ತಾಲ್ಲೂಕಿನಲ್ಲಿದೆ. ಪ್ರಸಿದ್ಧ ಏಳು ಗುಡ್ಡಗಳ ಸಾಲಿನಲ್ಲಿ ಮುಕ್ಕುಂಪಿ ಬೆಟ್ಟ ಸಾಲಿನ ಪೂರ್ವದ ಅಂಚಿಗೆ ಹೊಂದಿಕೊಂಡಂತೆ ಗಂಗಾವತಿ ನಗರ ವಿಸ್ತಾರಕೊಂಡಿದೆ.

೨.೧ ಭೌಗೋಳಿಕ ಸನ್ನಿವೇಶ

ದಖನ್ ಪ್ರಸ್ಥಭೂಮಿಯಲ್ಲಿರುವ ಕರ್ನಾಟಕ ರಾಜ್ಯದ ಪಶ್ಚಿಮ ಬಯಲು ಪ್ರದೇಶದಲ್ಲಿ ಗಂಗಾವತಿ ತಾಲ್ಲೂಕು ಸಮಾವೇಶವಾಗುತ್ತದೆ. ಭೂವೈಜ್ಞಾನಿಕವಾಗಿ ಪ್ರದೇಶವನ್ನೊಳಗೊಂಡಂತೆ

ದಕ್ಷಿಣ ಭಾರತದ ಪ್ರಸ್ಥಭೂಮಿಯನ್ನು ಅತ್ಯಂತ ಪ್ರಾಚೀನ ನಿರ್ಮಾಣವೆಂದೂ, ಆದಿಕಲ್ಪ ಯುಗಕ್ಕೆ ಸೇರುವುದೆಂದು ಸುಮಾರು ಮೂರುನೂರು ಕೋಟಿ ವರ್ಷ ಹಿರಿಯದೆಂದು ಭೂವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಸಾಗರದ ಭೂಭಾಗವಾಗಿದ್ದ ಈ ಪ್ರದೇಶ ಮೇಲೆದ್ದು ಕಾಲಾಂತರದಲ್ಲಿ ಹಲವಾರು ಮಾರ್ಪಾಡು ಹೊಂದಿ ಸಸ್ಯ ಹಾಗೂ ಪ್ರಾಣಿಗಳ ವಸತಿಗೆ ತಕ್ಕುದಾಗಿ ಇಂದಿನ ಸ್ಥಿತಿಗೆ ಬಂದಿದೆ. ಈ ಭೂಭಾಗವೂ ಸಮುದ್ರ ಮಟ್ಟದಿಂದ (ಒ.ಖ.ಐ) ಸುಮಾರು ೨೩೫೬ ಅಡಿ ಎತ್ತರದಲ್ಲಿದೆ.[೧] ಈ ಪ್ರದೇಶವು ಆಯಾಕಟ್ಟಿನದಾಗಿದ್ದು ಬೆಟ್ಟಗುಡ್ಡಗಳು ಫಲವತ್ತಾದ ನೆಲ ಸಮೃದ್ಧಿ ಜಲ, ಸಸ್ಯ ಪ್ರಾಣಿ ಸಂಪತ್ತಿನಿಂದ ಕೂಡಿದ್ದಾಗಿದೆ.

ಗಂಗಾವತಿ ತಾಲ್ಲೂಕು ಕೊಪ್ಪಳ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾಗಿದೆ. ಕೊಪ್ಪಳ, ಯಲಬುರ್ಗಾ, ಕುಷ್ಟಗಿ (ಕೊಪ್ಪಳ ಜಿಲ್ಲೆಯ), ಸಿಂಧನೂರು (ರಾಯಚೂರು ಜಿಲ್ಲೆ) ಮತ್ತು ತುಂಗಾಭದ್ರ ನದಿಯ ಈ ತಾಲ್ಲೂಕಿನ ಮೇರೆಗಳಾಗಿವೆ. ಗಂಗಾವತಿ ತಾಲ್ಲೂಕಿನಲ್ಲಿ ೧೪೯ ಜನವಸತಿ ಇರುವ ಮತ್ತು ೯ ಜನ ವಸತಿ ಇಲ್ಲದಿರುವ ಒಟ್ಟು ೧೫೪೮ ಗ್ರಾಮಗಳಿವೆ.[೨] ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೪೭,೮೩೦ ಹೆಕ್ಟೇರ್ ಇದ್ದು, ಇದರಲ್ಲಿ ನೀರಾವರಿ ಜಮೀನು ೪೧,೪೨೦ ಹೆಕ್ಟೇರ್ ಹಾಗೂ ಖುಷ್ಕಿ (ಒಣಭೂಮಿ) ಜಮೀನು ೨೭,೨೦೦ ಹೆಕ್ಟೇರ್ ಭೂಮಿಯನ್ನು ಒಳಗೊಂಡಿದೆ.[೩] ೨೦೧೧ರ ಜನಗಣತಿಯ ಪ್ರಕಾರ ಈ ತಾಲ್ಲೂಕಿನ ಒಟ್ಟು ಜನಸಂಖ್ಯೆ ೪,೧೬,೩೩೪ ಆಗಿದ್ದು. ಇದರಲ್ಲಿ ಪುರುಷರ ಸಂಖ್ಯೆ ೨,೦೪,೩೫೬ ಹಾಗೂ ಮಹಿಳೆಯರ ಸಂಖ್ಯೆ ೨,೦೧,೯೭೮. ಆಗಿದೆ.[೪] ಒಟ್ಟು ಜನಸಂಖ್ಯೆಯಲ್ಲಿ ಅಕ್ಷರಸ್ಥರ ಸಂಖ್ಯೆ ಪುರುಷರು ಶೇ ೬೫.೯/. ಸ್ತ್ರೀಯರು ಶೇ ೪೦.೩/ ರಷ್ಟು, ಇದ್ದಾರೆ ಒಟ್ಟು ಅಕ್ಷರಸ್ಥರ ಸಂಖ್ಯೆ ೫೩.೧ ರಷ್ಟು ಇರುತ್ತದೆ.

ಕೃಷ್ಣಾ ನದಿಯ ಉಪನದಿಯಾದ ತುಂಗಾಭದ್ರಾ ನದಿಯ ತಾಲೂಕಿನ ಏಕೈಕ ಪ್ರಧಾನವಾದ ನದಿಯಾಗಿದೆ. ತಿರುಮಲಾಪುರದ ಹತ್ತಿರ ತಾಲೂಕನ್ನು ಪ್ರವೇಶಿಸಿ ಆನೆಗೊಂದಿ, ಚಿಕ್ಕಜಂತಕಲ್ಲು, ಅಯೊಧ್ಯ ಬೆನ್ನೂರು, ಉಳೇನೂರು ಮೂಲಕ ಸಂಗಪುರದ ಹತ್ತಿರದ ಸಿಂಧನೂರು ತಾಲೂಕಿಗೆ ಸೇರುತ್ತದೆ.[೫] ಈ ಹರಿವು ಬಹುಮಟ್ಟಿಗೆ ಬೆಟ್ಟ ಗುಡ್ಡಗಳ ನಡುವೆ ಸಾಗಿದೆ. ನದಿಯು ಸಮುದ್ರ ಮಟ್ಟದಿಂದ ೧೭೧೦.[೬] ಎತ್ತರದಲ್ಲಿ ಹರಿಯುತ್ತದೆ. ತುಂಗಭದ್ರಾ ನದಿಯ ಜಾಲವಾಗಿ ಕೆಲವು ಹಳ್ಳಗಳು ತಾಲೂಕಿನಲ್ಲಿ ಹರಿದಿವೆ. ಅವುಗಳಲ್ಲಿ ಬೆಣಕಲ್ ಹಳ್ಳ, ಎಮ್ಮಿಗುಡ್ಡ ಹಳ್ಳ, ಗಡ್ಡಿಹಳ್ಳ, ಆಗೋಲಿಹಳ್ಳ, ಮರಳಿ ಹಳ್ಳ ಮತ್ತು ಸಿದ್ದಾಪುರ ಹಳ್ಳ ಮುಖ್ಯವಾಗಿವೆ. ಬೆಟ್ಟದಲ್ಲಿ ಅಲ್ಲಲ್ಲಿ ನೀರಿನ ಮೂಲಗಳನ್ನು ಕಾಣಬಹುದು. ಅವುಗಳಿಗೆ ಊಟಿಗಳೆನ್ನುವರು. ಉದಾಹರಣೆ: ಮಳೆಯಮ್ಮ ಊಟಿ (ಚಿಕ್ಕ ಬೆಣಕಲ್), ಜಬ್ಬಲೂಟಿ, ಅರವಟ್ಟಿಗೆ ಊಟಿ (ಮಲ್ಲಾಪುರ), ಕಣಿವೆ ಆಂಜನೇಯ ಊಟಿ (ಸಂಗಾಪುರ) ಮುಖ್ಯವಾಗಿವೆ. ತಾಲೂಕಿಲ್ಲಿ ಸುಮಾರು ೧೬ ಪ್ರಮುಖ ಕೆರೆಗಳಿವೆ. ಅವುಗಳಲ್ಲಿ ಕಾಟಾಪುರ ಕೆರೆ, ಲಕ್ಷ್ಮೀದೇವಿ ಕೆರೆ, ವಿಠಲಾಪುರ ಕೆರೆ, ಮುಖ್ಯವಾಗಿವೆ.

ಗಂಗಾವತಿ ತಾಲೂಕಿನಲ್ಲಿ ಪೂರ್ವ ಹಾಗೂ ಪಶ್ಚಿಮವಾಗಿ ಪ್ರಸಿದ್ದ ಎಳು ಗುಡ್ಡದ ಸಾಲು ಬೆಟ್ಟಗಳು ಸುಮಾರು ೫೦ ಕಿ,ಮೀ, ವಿಸ್ತರಿವೆ. ಚಾರಿತ್ರಿಕ ಪ್ರಸಿದ್ದ ಸ್ಥಳಗಳಾದ ಮುಕ್ಕುಂಪಿ, ಹಿರೇ ಬೆಣಕಲ್, ಆಗೋಲಿ, ಎಮ್ಮಿಗುಡೆ, ವಾನ ಭದ್ರೇಶ್ವರ, ಆನೆಗೊಂದಿ ಈ ಏಳು ಗುಡ್ಡದ ಸಾಲಿನಲ್ಲಿವೆ. ಇವುಗಳ ಸಾಲಿನಲ್ಲಿ ನಿಶಾನಿ ಗುಡ್ಡ (೫೮೦ ಮೀಟರ), ಎಮ್ಮಿಗುಡ್ಡ (೮೨೦ ಮೀ) ಮತ್ತು ಮೊರೆರ ಗುಡ್ಡ (೫೯೨ ಮೀ) ಪ್ರಮುಖವಾಗಿವೆ. ಈ ತಾಲೂಕಿನ ಕೆಲವು ಕಡೆ ಚಿಕ್ಕ ಚಿಕ್ಕ ಬಿಡಿ ಬೆಟ್ಟಗಳು ಕಂಡುಬರುತ್ತವೆ. ಅವೆಲ್ಲ ಪ್ರಧಾನವಾಗಿ ಕಣಶಿಲೆಯ ರಚನೆಗಳು ಇವುಗಳ ನಡುವೆ ಕಪ್ಪು ಶಿಲೆಯ ಶ್ರೇಣಿಗಳನ್ನು ಕಾಣಬಹುದು.[೭]

ಗಂಗಾವತಿ ಪ್ರದೇಶದಲ್ಲಿ ಅನೇಕ ನೈಸರ್ಗಿಕ ಮತ್ತು ಕೃತಕ ಕೆರೆಗಳನ್ನು ಕಾಣಬಹುದು. ನೀರಿನ ಮೂಲಗಳಲ್ಲಿ ಮತ್ತು ಮಳೆ ನೀರು ಸಂಗ್ರಹದ ಪ್ರಾಚೀನ ಚಿಕ್ಕ ಕೆರೆಗಳನ್ನು ಶಿಲಾಯುಗದ ನೆಲೆಗಳಾದ ಹಿರೇಬೆಣಕಲ್, ಸಂಗಾಪುರ, ಆಗೋಲಿ, ಚಿಕ್ಕ ಬೆಣಕಲ್ ಬಿಳೇಭಾವಿಗಳಲ್ಲಿ ಕಾಣಬಹುದು. ಹಾಗೆ ಮುಕ್ಕುಂಪಿ ಕೆರೆ, ರಾಯರ ಕೆರೆ, (ಚಿಕ್ಕ ಬೆಣಕಲ್) ಬಸಾಪಟ್ಟಣ ಕೆರೆ, ಹಂಪಸದುರ್ಗಾ, ರಾಮದುರ್ಗಾ ಗಂಗಾವತಿಯ ಪ್ರಮುಖ ಕೆರೆಗಳಾಗಿವೆ. ಈ ಪ್ರದೇಶದಲ್ಲಿನ ಶಿಲೆಗಳು ಜಗತ್ತಿನ ಅತಿ ಪುರಾತನವಾದ ಶಿಲೆಗಳೆಂದು ಪರಿಗಣಿಸಲ್ಪಡುತ್ತವೆ. ಇಲ್ಲಿ ಬರಿದಾಗದ ನೆಸುಗೆಂಪು ಮತ್ತು ಬೂದಿಬಣ್ಣದ ಗ್ರಾನೈಟ್ ಶಿಲೆಗಳ ಅಪಾರ ಸಂಪತ್ತಿದೆ. ಆನೆಗೊಂದಿ ಹತ್ತಿರ ಉತ್ತಮ ಮತ್ತು ಮಧ್ಯಮ ಗುಣ ಮಟ್ಟದ ಬೂದಿ ಬಣ್ಣದ ಕಣ ಶಿಲೆಗಳನ್ನು ಎಮ್ಮಿಗುಡ್ಡದ ಹತ್ತಿರ ಮಧ್ಯಮ ಕೆಂಪು ಕಣಶಿಲೆಗಳನ್ನು ಹಾಗೂ ಬೆಣಕಲ್‌ನಲ್ಲಿ ಕಂದು ಮತ್ತು ಉದಾ ಕಣಶಿಲೆಗಳನ್ನು ಕಾಣಬಹುದು. ಆನೆಗೊಂದಿ ಸಮೀಪದಲ್ಲಿ ಕೊರಂಡುರ ರೂಬಿ ಶಿಲೆಗಳು ದೊರೆಯುತ್ತವೆ.[೮]

ಈ ತಾಲೂಕಿನಲ್ಲಿ ಎರೆ (ಕಪ್ಪು), ಕಪ್ಪು ಮಸಾರಿ, ಕೆಲವು ಕಡೆ ಸವುಳು ಭೂಮಿ ಹಾಗೂ ಜೇಡಿ ಮಣ್ಣಿನಿಂದ ಕೂಡಿದ ಕಾವ ಲವಣಗಳನ್ನಳಗೊಂಡ ಫಲವತ್ತಾದ ಭೂಮಿ ಇದೆ. ತುಂಗಭಧ್ರಾ ನದಿಯನ್ನು ತೀರ ಪ್ರದೇಶದಲ್ಲಿ ಮರುಳು ಮಿಶ್ರಿತ ಕೆಂಪು, ಜೇಡಿ (ಕೆಸರು ಮಣ್ಣು) ಮಣ್ಣನ್ನು ಕಾಣಬಹುದು. ಹುಲಿಹೈದರ ಹತ್ತಿರ ಕಾವಿ ಮಣ್ಣಿದೆ. ಇದು ಈ ಪ್ರದೇಶದ ಪ್ರಾಕೃತಿಕ ವೈಶಿಷ್ಟವಾಗಿದೆ.[೯] ಫಲವತ್ತಾದ ಭೂಮಿಯಿರುವ ಈ ಪ್ರದೇಶದಲ್ಲಿ ತುಂಗಾಭದ್ರಾ ಮತ್ತು ಅದರ ಉಪನದಿಗಳ ನೀರನ್ನು ಬಳಸಿಕೊಂಡು ಮತ್ತು ಮಳೆಯಾಶ್ರಿತ ನೀರಿನಿಂದ ಭತ್ತ, ಜೋಳ, ರಾಗಿ, ತೊಗರಿ, ಕಡಲೆ ಮುಂತಾದ ಧ್ಯಾನಗಳನ್ನು ಹಾಗೂ ಕಬ್ಬು, ಹತ್ತಿ, ಬಾಳೆಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ.[೯]

ಕೊಪ್ಪಳ ಜಿಲ್ಲೆಯ ಅರಣ್ಯ ಪ್ರದೇಶದ ವಿಸ್ತೀರ್ಣ ೨೯,೪೫೧. ಹೆಕ್ಟೇರುಗಳು, ಇದು ಜಿಲ್ಲೆಯ ಬೌಗೋಳಿಕ ಪ್ರದೇಶದ ಶೇ ೫.೩೩ ರಷ್ಟಿದೆ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶದಲ್ಲಿ ಸುಮಾರು ಅರ್ಧದಷ್ಟು (ಶೇ ೪೯.೧೭) ಗಂಗಾವತಿ ತಾಲೂಕಿನಲ್ಲಿದೆ.[೧೦] (ಅಂದರೆ ೧೪,೪೮೭

ಹೆಕ್ಟೇರಗಳಷ್ಟು) ಅಂತಯೇ ಈ ಪ್ರದೇಶವೂ ಹೆಚ್ಚು ಬಂಡೆಗಳ ಬೆಟ್ಟಗಳಿಂದ ಕೂಡಿದ್ದು ಸಸ್ಯಗಳು ದಟ್ಟವಾಗಿಲ್ಲ. ಈ ಪ್ರದೇಶದ ಅಗೋಲಿ, ಹಿರೇಬೆಣಕಲ್ಲು ಕಾದಿಟ್ಟ ಅರಣ್ಯ (೬೬೪೭ ಹೆಕ್ಟೇರ್) ಗಳಿವೆ. ಅರಣ್ಯದಲ್ಲಿ ಪ್ರಧಾನವಾಗಿ ಜಾಲಾರಿ, ಹೊನ್ನ, ಮತ್ತಿ, ಅಳತೆ ಭಾಗಿ ಮರಡಿ ಬೇವು, ಜಾಲಿ, ಕಕ್ಕೆ, ಹುಣಸೆ, ಸೀತಾಫಲ ಮತ್ತಿತರ ಗಿಡಗಳನ್ನು ಕಾಣಬಹುದು.[೧೧]

ಪ್ರಮುಖವಾಗಿ ಈ ಪ್ರದೇಶ ಕಾಡು ಹಾಗೂ ಬೆಟ್ಟಗುಡ್ಡಗಳಲ್ಲಿ ಕರಡಿ, ಚಿರತೆ, ನರಿ, ತೋಳ, ಕಪ್ಪು ಮತ್ತು ಕೆಂಪುಮುಖದ ಮಂಗಗಳು ಮೊಲ, ಚಿಗರಿ, ಮುಳ್ಳಂದಿ, ಕತ್ತೆಕಿರುಬ ಮತ್ತು ಪ್ಯಾಂಗೊಲೀನ ಕಂಡುಬರುತ್ತವೆ. ಹಾವುಗಳಲ್ಲಿ ಹೆಬ್ಬಾವು, ನಾಗರಹಾವು, ಕೆರೆಹಾವು ಪ್ರಮುಖವಾಗಿವೆ. ಪಕ್ಷಿಗಳಲ್ಲಿ ನವಿಲುಗಳು ಮತ್ತು ಹಸಿರು ಗಿಳಿಗಳು, ಪಾರಿವಾಳ, ಗುಬ್ಬಿ ಸಾಮಾನ್ಯವಾಗಿವೆ. ತುಂಗಾಭದ್ರಾ ತೀರ ಪ್ರದೇಶದಲ್ಲಿ ಕಾಡುಕೋಳಿಗಳಿವೆ. ಗಂಗಾವತಿ ತಾಲೂಕು ಪ್ರದೇಶವು ಸಮುದ್ರ ಮಟ್ಟದಿಂದ ಎತ್ತರಲ್ಲಿದ್ದು ಹಾಗೂ ಮಳೆನೆರಳಿನ ಪ್ರದೇಶದಲ್ಲಿರುವುದರಿಂದ ಇಲ್ಲಿನ ಹವಾಗುಣ ಸಾಮಾನ್ಯವಾಗಿ ತಂಪಾಗಿರದೇ ಒಣಹವೆ ಬಿಸಿಲು ಮತ್ತು ಸಕೆಯಿಂದ ಕೂಡಿರುತ್ತದೆ. ಬೇಸಿಗೆಯಲ್ಲಿ ಅತಿ ಉಷ್ಣ ಹಾಗೂ ಚಳಿಗಾಲದಲ್ಲಿ ಅತೀ ಚಳಿ ಇಲ್ಲಿನ ವೈಶಿಷ್ಟ್ಯತೆ. ಈ ಪ್ರದೇಶದಲ್ಲಿ ಉಷ್ಣತೆ ಸರಾಸರಿ ೧೬.೨ ಸೆ. ನಿಂದ ೪೩.೯ ಸೆ. ವರೆಗೆ ಇರುತ್ತದೆ. ಕೆಲವು ಸಲ ಇದು ೪೫ ಸೆ. ವರೆಗೆ ಇರುತ್ತದೆ. ಅಂತೆಯೇ ಮಳೆಯ ಪ್ರಮಾಣ ವಿರಳವಾಗಿದ್ದು ಇಲ್ಲಿಯ ವಾಡಿಕೆಯ ಪ್ರಮಾಣ ೫೮೯ ಮಿ.ಮೀ. ವಾಸ್ತವಿಕ ಸರಾಸರಿ ಮಳೆ ೪೮೯ ಮಿ.ಮೀ[೧೨] (ಕೊಪ್ಪಳ ವಲಯ) ದಾಖಲಾಗಿದೆ. ಹೀಗೆ ಗಂಗಾವತಿ ತಾಲೂಕಿನ ಪರಿಸರದ ನದಿ ಬೆಟ್ಟ, ಖನಿಜ, ಸಸ್ಯಪ್ರಾಣಿ ಸಂಕುಲ ಮುಂತಾದ ಭೌಗೋಳಿಕ ಸನ್ನಿವೇಶವು ಬಹು ಪ್ರಾಚೀನ ಕಾಲದಿಂದಲೂ ಇಲ್ಲಿಯ ಮಾನವರ ಜೀವನ ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತಾ, ಪೋಷಿಸುತ್ತಾ ಬಂದಿದ್ದರ ಪರಿಣಾಮವಾಗಿ ಇಲ್ಲಿ ಬಹುಮುಖಿ ಜೀವನ ಸಂಸ್ಕೃತಿ ರೂಪಗೊಂಡಿದೆ.

೨.೨ ಪ್ರಾಗಿತಿಹಾಸ

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲಿನೆಯದಾಗಿ ಅಕ್ಷರ ಜ್ಞಾನವಿಲ್ಲದ ಹಂತ ಅಥವಾ ಪ್ರಾಗಿತಿಹಾಸ (ಪೂರ್ವ ಇತಿಹಾಸ) ಎರಡನೆಯದು ಅಕ್ಷರ ಜ್ಞಾನವಿದ್ದಂತಹ ಅಥವಾ ರಾಜ ಮಹಾರಾಜರ ಕಾಲ ಹಾಗೂ ಇತಿಹಾಸ ಕಾಲವೆಂದು ಹೇಳಬಹುದು. ಇವುಗಳಲ್ಲಿ ಪ್ರಾಗಿತಿಹಾಸದ ಕಾಲಮಾನ ಸುದೀರ್ಘವಾದುದ್ದಾಗಿದೆ. ಇಂದಿಗೆ ಸುಮಾರು ಐದು ಲಕ್ಷ ವರ್ಷಗಳಿಂದ ಕ್ರಿಸ್ತಶಕೆಯ ಆರಂಭದವರೆಗೂ ಅದು ರೂಢಿಯಲ್ಲಿದ್ದಿತೆಂದು ತಿಳಿಯುತ್ತದೆ. ಈ ಕಾಲದ ಮಾನವನಿಗೆ ನಿತ್ಯ ಬಳಕೆಯಲ್ಲಿದ್ದ ವಸ್ತುವಿನ ಆಧಾರದಿಂದ ಶಿಲಾಯುಗ ಮತ್ತು ಲೋಹಯುಗ ಸಂಸ್ಕೃತಿಯೆಂದು ಎಂದು ಎರಡು ವಿಭಾಗ ಮಾಡಲಾಗಿದೆ.[೧೩] ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಹಾಗೂ ಅವುಗಳ ಬೆಳವಣಿಗೆಗೆ ಮತ್ತು ಕುಶಲತೆಯನ್ನು ಅನುಸರಿಸಿ ಹಳೆಯ ಶಿಲಾಯುಗದ ಸಂಸ್ಕೃತಿ, ಸೂಕ್ಷ್ಮಶಿಲಾಯುಗ

ಸಂಸ್ಕೃತಿ ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ. ಅಧ್ಯಯನದ ತೀವ್ರತೆ ಹಾಗೂ ಪ್ರತಿಯೊಂದು ಹಂತಗಳಲ್ಲಾದ ಬದಲಾವಣೆಗಳನ್ನು ಗುರುತಿಸಿ ಹೊಸ ಹೊಸ ವಿಷಯಗಳ ಕುರಿತು ತಿಳಿಯಲು ಪ್ರಮುಖ ಆಕರವಾಗಿವೆ.[೧೪]

ಈ ಹಿನ್ನೆಲೆಯಲ್ಲಿ ಶಿಲಾಯುಗ ಹಂತದ ಪೈಕಿ ಹಳೆಯ ಶಿಲಾಯುಗದ ಕಾಲಘಟ್ಟದಲ್ಲಿ ಮಾನವ ಗಂಗಾವತಿ ತಾಲ್ಲೂಕಿನ ವಾಸಿಸುತ್ತಿದ್ದನೆಂಬುವುದಕ್ಕೆ ಇಲ್ಲಿಯವರೆಗೂ ಯಾವುದೇ ಪುರಾವೆಗಳು ದೊರೆತಿಲ್ಲ. ಆದರೆ ಮಧ್ಯ ಶಿಲಾಯುಗ ಅಥವಾ ಸೂಕ್ಷ್ಮಶಿಲಾಯುಗ ಅವಶೇಷಗಳು ಈ ಪ್ರದೇಶದಲ್ಲಿ ಕಂಡುಬರುತ್ತದೆ, ಈ ಹಿನ್ನಲೆಯುಲ್ಲಿ ತಾಲೂಕಿನ ಚರಿತ್ರೆಯುನ್ನು ಮಧ್ಯಶಿಲಾಯುಗದಿಂದ ಆರಂಭಗೊಳ್ಳುವುದನ್ನು ಗುರುತಿಸಬಹುದು. ಹೊಸಕೆರೆ, ಹಿರೇಬೆಣಕಲ್, ಹೆಬ್ಬಾಳಗಳಲ್ಲಿ ಈ ಸಂಸ್ಕೃತಿಯ ಕುರುಹುಗಳು ಲಭ್ಯವಾಗಿವೆ. ವಿಶೇಷವಾಗಿ ಅಂಜನಹಳ್ಳಿ ಗ್ರಾಮ ಇಂದರ್ಗಿ ಮತ್ತು ಚಿಕ್ಕರಾಂಪುರದಲ್ಲಿ ಗವಿಗಳ ಎದುರು ಭಾಗದಲ್ಲಿ ನೆಲೆವಿದ್ದ ಗವಿಯಲ್ಲಿ ನೂತನ ಶಿಲೋಪಕರಣಗಳು, ಕಂದುವರ್ಣದ ಚಿತ್ರಿತ ಮಡಿಕೆಗಳು ದೊರತ್ತಿವೆ. ಕೆಂಪು ವರ್ಣದ ಮಡಿಕೆಯು ಅಭ್ರಕ ಮಿಶ್ರಣವನ್ನು ಒಳಗೊಂಡಿದೆ. ಗವಿಯಲ್ಲಿ ಮೂರು ವರ್ಣಚಿತ್ರಗಳು ಕಂಡುಬಂದಿವೆ. ತಿಪ್ಪನಹಾಳದಲ್ಲಿ ಕಂದುವರ್ಣದ ಮಡಿಕೆ ಭಾಗ ಹಾಗೂ ನೀಳಚಕ್ಕೆ ದೊರೆತಿವೆ.

ತಿಮ್ಮಲಾಪುರ, ನಾರಾಯಣಪುರ, ಬಂಡಿಹರ್ಲಾಪುರ ಗವಿವರ್ಣಚಿತ್ರಗಳು, ಮಲ್ಲಾಪುರದಲ್ಲಿ ಗವಿಯ ಒಳಭಾಗದಲ್ಲಿ ಮೂರು ಕಡೆಗಳಲ್ಲಿ ಗುಹಾಚಿತ್ರಗಳು ಕಂಡುಬಂದಿವೆ. ಮನುಷ್ಯರು ಹಾಗು ಪ್ರಾಣಿಗಳಾದ ಕರಡಿ, ಜಿಂಕೆ, ಕೋಣ, ಮೀನು, ಹಾವು ಮೊದಲಾದವುಗಳ ಚಿತ್ರಗಳು ಕಂಡುಬರುತ್ತವೆ. ಹೊಸಕೆರೆಯಲ್ಲಿ ಕಂದುವರ್ಣದ ಮಡಿಕೆ ಭಾಗ ಹಾಗು ನೀಲಚಕ್ಕೆ ಉಪಕರಣಗಳು ದೊರೆತಿವೆ. ವಿಶೇಷವಾಗಿ ಹಿರೇಜಂತಕಲ್‌ನಲ್ಲಿ ಈ ಯುಗದ ಬೂದಿದಿಬ್ಬ ದೊರೆತಿದೆ. ಗವಿಯಲ್ಲಿ ವರ್ಣಚಿತ್ರಗಳು ದೊರೆತಿವೆ. ಕಂದುವರ್ಣದ ಚಿತ್ರಿತ ಕೆಂಪು ಮಡಿಕೆ ಭಾಗ ನೀಳಚಕ್ಕೆ ಗೆರೆಗಳುಳ್ಳ ಮೂಲ ಶಿಲಾಗಟ್ಟಿ ದೊರೆತಿವೆ.[೧೫]

ಮಧ್ಯ (ಸೂಕ್ಷ್ಮ)ಶಿಲಾಯುಗ

ಹಳೆಶಿಲಾಯುಗ ಮತ್ತು ನೂತನ ಶಿಲಾಯುಗದ ನಡುವಿನ ಸಾಂಸ್ಕೃತಿಕ ಹಂತವನ್ನು ಮಧ್ಯ ಶಿಲಾಯುಗ (ಸೂಕ್ಷ್ಮಶಿಲಾಯುಗ)ವೆಂದು ಕರೆಯಲಾಗಿದೆ. ಈ ಕಾಲದ ಮುಖ್ಯ ಲಕ್ಷಣವೆಂದರೆ ಒರಟಾದ ದೊಡ್ಡ ದೊಡ್ಡ ಶಿಲಾಯುಧಗಳ ಬಳಕೆಯನ್ನು ಕೈಬಿಟ್ಟು, ಅತೀ ಸೂಕ್ಷ್ಮ ಹಾಗೂ ಚಿಕ್ಕದಾದ ಆಯುಧಗಳನ್ನು ಬಳಸಿರುವುದು. ಇಂತಹ ಕುರುಹುಗಳು ತಾಲೂಕಿನ ಮಲ್ಲಾಪುರ ಗ್ರಾಮದಲ್ಲಿ ಕಂಡುಬಂದಿವೆ.[೧೬] ಇಲ್ಲಿ ಗವಿಯ ಒಳಭಾಗದಲ್ಲಿ ಎರೆಚಕ್ಕೆ ಮತ್ತು ಅರ್ಧ ಚಂದ್ರಾಕೃತಿ ಉಪಕರಣಗಳು ದೊರೆತಿವೆ. ಆದರೆ ಆನೆಗೊಂದಿಯ ಚಿಕ್ಕರಾಂಪುರದಲ್ಲಿ ಈ ಕಾಲದ ಗವಿವರ್ಣ ಚಿತ್ರಗಳು ದೊರೆತಿವೆ. ಆ ಚಿತ್ರಗಳು ಕೆಂಪು ಕಂದುಬಣ್ಣವನ್ನು ಹೊಂದಿದ್ದು ಜಿಂಕೆ, ಹೋರಿ

ಹಾಗು ಮಾನವ ಚಿತ್ರಗಳು ಕಂಡುಬಂದಿವೆ. ಯಾವುದೇ ಶಿಲೋಪಕರಣಗಳು ದೊರೆತಿಲ್ಲ. ಎರೆಚಕ್ಕೆ ಉಪಕರಣವಾಗಿದೆ.

ಮಾನವ ಜೀವನದ ಸಾಂಸ್ಕೃತಿಕ ಮುನ್ನೆಡೆಯಲ್ಲಿ ಈ ಹಂತದ ಪಾತ್ರ ಗಮನರ್ಹವಾದದು. ಈ ಕಾಲದಲ್ಲಿ ಭೇಟೆಯಾಡುವುದು, ಮೀನು ಹಿಡಿಯುವುದು, ಆಹಾರ ಸಂಗ್ರಹಣೆ ಮಾಡುವ ಜೀವನದ ವ್ಯವಸ್ಥೆ ಇತ್ತು. ಈ ಸಂಸ್ಕೃತಿಯ ಮುಖ್ಯ ಬೆಳವಣಿಗೆ ಎಂದರೆ ಬೇಸಾಯ ಮಾಡುವುದು. ಕಾಲವಾದ ನಂತರದ ನೂತನ ಶಿಲಾಯುಗದಲ್ಲಿ ಅಭಿವೃದ್ಧಿಯಾಯಿತು. ಈ ಕಾಲದ ಆಹಾರ ಉತ್ಪಾದನೆಯ ಬೆಳವಣಿಗೆಯಿಂದಾಗಿ ಸ್ಥಿತ್ಯಂತರ ಹಂತವೆಂದು ಗುರುತಿಸಲಾಗಿದೆ. ಬಳಕೆಯಲ್ಲಿದ್ದ ಉಪಕರಣವು ಗಾತ್ರದ ಪ್ರಮಾಣ ಸಣ್ಣದಿದ್ದು, ಅವುಗಳಲ್ಲಿ ಸಮಾನಂತರ ಅಂಚುಗಳುಳ್ಳ ಅಲಗುಗಳು, ಚಿಕ್ಕ ಅಲಗುಗಳು, ಬಾಗಿದ ಅಲಗುಗಳು, ಮೊನೆಗಳು, ಬೈರಿಗಳು, ಆಹಾರ ಕತ್ತರಿಸುವ ಚಿಕ್ಕ ಮಚ್ಚುಗಳು ಮೊದಲಾದವು ಪ್ರಮುಖವಾಗಿವೆ, ಈ ಹಂತದ ಅವಶೇಷಗಳು ತುಂಗಾಭದ್ರ ನದಿಯ ಎಡ ತೀರದ ಗಂಗಾವತಿ ತಾಲ್ಲೂಕಿನ ಏಳು ಗುಡ್ಡ ಪರಿಸರದಲ್ಲಿ ಅಲ್ಲಲ್ಲಿ ಕಂಡುಬಂದಿವೆ. ವಿಶೇಷವಾಗಿ ಸಂಗಪುರ, ಚಿಕ್ಕಬೆಣಕಲ್ ಇಂದರ್ಗಿ ಮುಂತಾದವು ಬೆಟ್ಟಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳು ದೊರೆತಿವೆ.[೧೭]

ನೂತನ ಶಿಲಾಯುಗ ಸಂಸ್ಕೃತಿ

ಈ ಕಾಲದಲ್ಲಿ ಮಾನವ ಒಂದೆಡೆ ನೆಲೆನಿಂತು ಫಲವತ್ತಾದ ಭೂಮಿಯಲ್ಲಿ ಕೃಷಿಯನ್ನು ಪ್ರಾರಂಭಿಸಿದ. ಸಾಕುಪ್ರಾಣಿಗಳನ್ನು ಸಾಕುವುದನ್ನು ಕಲಿತ್ತುಕೊಂಡ. ಸುಟ್ಟ ಮಣ್ಣಿನ ಪಾತ್ರೆಗಳ ಉಪಯೋಗ, ಬಿಸಿಲಿನಲ್ಲಿ ಒಣಗಿಸಿದ ಬೂದು ಬಣ್ಣದ ಮೃತ್ಪಾತ್ರೆಗಳನ್ನು ಮಾಡುವುದು ಹೀಗೆ ನವೀನ ಬದುಕಿಗೆ ಎಡೆಯಾದ ಈ ಸಂಸ್ಕೃತಿಗೆ ನವ/ನೂತನ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ. ನೂತನ ಶಿಲಾಯುಗ ಯುಗದಲ್ಲಿ ದ್ವಿಮುಖ ಅಲಗುಗಳುಳ್ಳ ತೆಳು ನೀಳಚಕ್ಕೆ, ಕಿರು ನೀಲಚಕ್ಕೆ, ತ್ರಿಭುಜಾಕಾರದ ಮೊನೆ, ಕೊಕ್ಕುಳ್ಳ ಮೊನೆ, ಎಲೆಯಾಕಾರದ ಮೊನೆ, ಒಬ್ಬದಿ ಮತ್ತು ಇಬ್ಬದಿ ಹೆರೆಚಕ್ಕೆ, ಒಳ ಬಾಗಿದಂಚಿನ ಹೆರೆಚಕ್ಕೆ, ಮೂಲಗಟ್ಟಿ ಹೆರೆಚಕ್ಕೆ, ಕೊರಗೆ, ಅರ್ಧಚಂದ್ರಾಕೃತಿ ಮೊದಲಾದ ಉಪಕರಣಗಳ ಬಳಕೆಯಲ್ಲಿರುವುದು ಕಂಡುಬಂದಿದೆ.[೧೮] ಗಂಗಾವತಿ ತಾಲೂಕಿನ ಆರ್ಹಾಳ, ಅರಳಿಹಳ್ಳಿ, ಕಕ್ಕರಗೊಳ, ಕುಂಟೋಜಿ, ಮುಸ್ಲಾಪುರ, ರಾಮದುರ್ಗ, ಹರಳಪುರ, ಹೊಸಕೆರೆ ಮೊದಲಾದ ನೆಲೆಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ. ಆನೆಗೊಂದಿ ಪಶ್ಚಿಮಕ್ಕೆ ತುಂಗಾಭದ್ರ ನದಿಯ ಬಲದಂಡೆಯ ಹತ್ತಿರ 'ವಾಲಿದಿಬ್ಬ' ಅಥವಾ 'ವಾಲಿಕಾಷ್ಠವು' ದೊರೆತಿದ್ದು, ಕಪ್ಪು ವರ್ಣದ ಗೆರೆಗಳಿರುವ ಹಾಗು ಕೆಂಪುಬಣ್ಣದ ಮಡಿಕೆ ಭಾಗಗಳು ದೊರೆತಿವೆ. ಅದೇ ರೀತಿಯಾಗಿ ವೆಂಕಟಾಪುರದಲ್ಲಿ ಈ ಸಂಸ್ಕೃತಿಯ ಬೂದಿದಿಬ್ಬಗಳು, ಮುಸ್ಲಾಪುರದಲ್ಲಿ ಗವಿಯ ಒಳಭಾಗದಲ್ಲಿ ಹೆರೆಚಕ್ಕೆ ಮತ್ತು ಅರ್ಧಚಂದ್ರಾಕೃತಿಯ ಉಪಕರಣಗಳು, ಹಾಗೂ ರಾಮದುರ್ಗದಲ್ಲಿ ಕೊಡಲಿ ಶಿಲೋಪಕರಣಗಳು ದೊರೆತಿವೆ.

ಹರಳಪುರದಲ್ಲಿ ಮೂರು ಶೀಲಾವರ್ಣದ ಚಿತ್ರಗಳು ಕಂಡುಬಂದಿವೆ.[೧೯] ಮೇಲೆ ವಿವರಿಸಿದ ನೆಲೆಗಳಲ್ಲದೆ, ಪುರಾತತ್ವಜ್ಞರಾದ ಅ. ಸುಂದರವರು ಈ ಪ್ರದೇಶದಲ್ಲಿ ನೂತನ ಶಿಲಾ ಸಂಸ್ಕೃತಿಯ ಇನ್ನಷ್ಟು ನೆಲೆಗಳನ್ನು ಶೋಧಿಸಿದ್ದಾರೆ.[೨೦] ಅವು ಹಣವಾಳ, ಹೇರೂರು, ಕೆಸರಹಟ್ಟಿ, ಗೊನ್ನಾಳ, ಆರಾಳ್, ಹಿರೇಜಂತಕಲ್, ಜಂಗಮರಕಲ್ಗುಡಿ, ಹೊಸಕೆರೆ, ಹೆಬ್ಬಾಳ, ಕುಂಟೋಜಿ, ಸಿಂಗನಾಳು, ತಿಪ್ಪನಾಳು, ಪನ್ನಾಪುರ, ಬೇವಿನಹಾಳ್ ಹಾಗೂ ಸೋಮನಹಾಳ್ ಅವರು ಶೋಧಿಸಿದ ಈ ಸಂಸ್ಕೃತಿಯ ಪ್ರಮುಖ ನೆಲೆಗಳಾಗಿವೆ. ಈ ಗ್ರಾಮಗಳ ನೆಲೆಗಳು ನೂತನ ಶಿಲಾಯುಗ ಸಂಸ್ಕೃತಿಯ ಬೂದುವರ್ಣದ ಮೃತ್ಪಾತ್ರೆ ಚೂರುಗಳು ಅಪುರೂಪವಾಗಿ ಉತ್ತಮ ಜಾತಿಯ ಚಕ್ಕಮುಕಿ ಕಲ್ಲಿನ ಬ್ಲೇಡಿನಂತಹ ಚಕ್ಕೆಗಳ ಸಣ್ಣ ಸಣ್ಣ ಆಯುಧಗಳು ತಿಕ್ಕಿ ನಯಮಾಡಿದ ಮೈಯುಳ್ಳ ಕಲ್ಲಿನ ಕೊಡಲಿಗಳು ಪ್ರಾಣಿಗಳ ಎಲುಬುಗಳು ದೊರೆತಿವೆ. ನೆಲೆಗಳು ಈ ಭಾಗದಲ್ಲಿ ನೂತನ ಶಿಲಾಯುಗದ ವಾಸ್ತವ್ಯದ ಸಾಂದ್ರತೆಯನ್ನು ತಿಳಿಯಲು ಸಹಾಯಕವಾಗಿವೆ.[೨೧]

ತಾಮ್ರ ಶಿಲಾಯುಗ

ನೂತನ ಶಿಲಾಯುಗದ ಒಂದು ಘಟ್ಟದಿಂದ ತಾಮ್ರದ ಬಳಕೆ ಆರಂಭವಾಯಿತು. ತಾಮ್ರ ಅದಿರಿನಿಂದ ಲೋಹವನ್ನು ತಯಾರಿಸಿ ಅದರಿಂದ ಆಭರಣ, ಗೊಂಬೆ, ಆಯುಧ ಮೊದಲಾದವುಗಳನ್ನು ಮಾಡಲಾಗುತ್ತಿತ್ತು. ಈ ಹಂತದ ಜನಜೀವನದಲ್ಲಿ ಕಾಣುವ ಖಚಿತ ಬೆಳವಣಿಗೆಯೆಂದರೆ ಶಿಲಾಯುಧಗಳ ಜೊತೆಗೆ ತಾಮ್ರ ಅಥವಾ ಕಂಚಿನ ಉಪಕರಣಗಳ ಬಳಕೆ ಆದ್ದರಿಂದ ಈ ಸಂಸ್ಕೃತಿಯನ್ನು ಶಿಲಾ ತಾಮ್ರಯುಗವೆಂದು ಕರೆಯಲಾಯಿತು.

ಗಂಗಾವತಿ ತಾಲೂಕಿನಲ್ಲಿ ಈ ಸಂಸ್ಕೃತಿಯ ಕುರುಹುಗಳು ಆರ್ಹಾಳ, ಅರಳಿಹಳ್ಳಿ, ಅಂಜಿನ ಹಳ್ಳಿ, ಆನೆಗೊಂದಿ, ಕನಕಗಿರಿ, ಕೆಸರಟ್ಟಿ, ಕುಂಟೋಜಿ, ಗೋನಾಳ, ಚಿಕ್ಕರಾಮಾಪುರ ನೆಲೆಗಳಲ್ಲಿ ಕಂಡುಬಂದಿವೆ. ರಾಮಾಪುರದಲ್ಲಿ ಗವಿ ವರ್ಣಚಿತ್ರಗಳು ದೊರತಿವೆ. ಚಿಕ್ಕರಾಮಾಪುರದಲ್ಲಿ ಗವಿಯಲ್ಲಿ ನೂತನ ಶಿಲೋಪಕರಣಗಳು, ಕಂದುವರ್ಣದ ಚಿತ್ರಿತ ಮಡಕೆಗಳು ಸಿಕ್ಕಿವೆ. ಕೆಂಪು ವರ್ಣದ ಮಡಕೆಯ ಅಭ್ರಕ ಮಿಶ್ರಣವನ್ನೂಳಗೊಂಡಿದೆ. ಗವಿಯಲ್ಲಿ ಮೂರುವರ್ಣ ಚಿತ್ರಗಳು ಕಂಡುಬಂದಿವೆ. ತಿಪ್ಪನಹಾಳದಲ್ಲಿ ಕಂದು ವರ್ಣದ ಮಡಕೆಭಾಗ ಹಾಗೂ ನೀಳಚಕ್ಕೆ ದೊರತಿವೆ. ತಿಮ್ಮಲಾಪುರ, ನಾರಾಣಪುರ, ಬಂಡಿಹಲ್ಲಾಪುರಗಳಲ್ಲಿ ಗವಿವರ್ಣ ಚಿತ್ರಗಳು ಗೋಚರವಾಗಿವೆ, ಮಲ್ಲಾಪುರದಲ್ಲಿ ಗವಿಯ ಒಳಭಾಗದಲ್ಲಿ ಮೂರು ಕಡೆಗಳಲ್ಲಿ ಗುಹಾಚಿತ್ರಗಳು ಕಂಡುಬಂದಿವೆ. ಮನುಷ್ಯರು ಹಾಗೂ ಪ್ರಾಣಿಗಳಾದ ಜಿಂಕೆ, ಕರಡಿ, ಕೋಣ, ಮೀನು, ಹಾವು, ಮೊದಲದವುಗಳ ಚಿತ್ರಗಳು ಕಂಡುಬರುತ್ತವೆ. ಕಂದು ವರ್ಣದ ಚಿತ್ರಿತ ಕೆಂಪು ಮಡಕೆ ಭಾಗ ನೀಳಚಕ್ಕೆ, ಗೆರೆಗಳ್ಳುಳ ಮೂಲ ಶಿಲಾಗಟ್ಟಿ ದೊರೆತಿವೆ.[೨೨]

ಬೂದಿ ದಿಬ್ಬಗಳು

ನೂತನ ಶಿಲಾಯುಗ, ಶಿಲಾ ತಾಮ್ರಯುಗ, ಕಬ್ಬಿಣ ಅಥವಾ ಬೃಹತ್ ಶಿಲಾಯುಗಕ್ಕೆ ಸೇರಿದ ಪ್ರಮುಖ ಬೆಳವಣಿಗೆಯಲ್ಲಿ ಕಂಡುಬರುವ ಅವಶೇಷಗಳೆಂದರೆ ಬೂದಿ ದಿಬ್ಬಗಳು, ಈ ಹಂತದಲ್ಲಿ ಕೃಷಿಯ ಜೊತೆಗೆ ಪಶುಪಾಲನೆ ಸಂಸ್ಕೃತಿ ಅಭಿವೃದ್ಧಿ ಪಡೆಯಿತು. ದನಗಳ ಸಗಣಿಯನ್ನು ಸುಡುವಿಕೆಯಿಂದ ನಿರ್ಮಾಣವಾದ ಬೃಹದ್ದಾಕಾರದ ಬೂದಿದಿಬ್ಬಗಳು ಪಶು ಸಾಕಾಣಿಕೆಯ ಪ್ರಮಾಣವನ್ನು ಸೂಚಿಸುತ್ತವೆ. ಇವು ಭೀಮಾ, ಕೃಷ್ಣ, ತುಂಗಾಭದ್ರ ನದಿ ಪ್ರದೇಶಗಳಲ್ಲಿ ಹೆಚ್ಚಾಗಿ ಲಭ್ಯವಾಗಿವೆ. ವಿಶೇಷವಾಗಿ ಈ ಪರಿಸರದ ನದಿಯ ಪರಿಸರದ ತುಂಗಾಭದ್ರ ಪ್ರದೇಶಗಳಾದ ಇಂದರ್ಗಿ, ಮುಸಲಾಪುರ, ವೆಂಕಟಾಪುರ ನೆಲೆಗಳಲ್ಲಿ ಕಾಣಸಿಗುತ್ತವೆ.[೨೩]

ಆನೆಗೊಂದಿಯ ಪಶ್ಚಿಮಕ್ಕೆ ತುಂಗಾಭದ್ರ ನದಿಯ ಬಲದಂಡೆಯ ಹತ್ತಿರ ದೊರೆತಿರುವ 'ವಾಲಿದಿಬ್ಬ' ಎನ್ನುವ ಬೂದಿದಿಬ್ಬವು ಸಹ ನವಶಿಲಾಯುಗದ ಕಾಲಕ್ಕೆ ಸಂಬಂಧಿಸಿದೆ. ವಾಲಿದಿಬ್ಬವು ಅಂಡಾಕಾರದಲ್ಲಿದೆ. ಸುಮಾರು ೨ ರಿಂದ ೩ ಮೀಟರ್ ಎತ್ತರವನ್ನು ಹೊಂದಿದ್ದು, ಪೂರ್ವ-ಪಶ್ಚಿಮವಾಗಿ ೪೨ ಮೀಟರ್ ಮತ್ತು ದಕ್ಷಿಣೋತ್ತರವಾಗಿ ೨೧ ಮೀಟರ್‌ಗಳಷ್ಟು ವಿಸ್ತಾರವಾಗಿ ಹರಡಿಕೊಂಡಿದೆ. ತುಂಗಾಭದ್ರ ನದಿಯ ದಕ್ಷಿಣಕ್ಕೆ ಒಂದೂವರೆ ಕಿ.ಮೀ ದೂರದಲ್ಲಿರುವ ಈ ದಿಬ್ಬವೂ ಕಿರಿದಾದ ಕಣಿವೆಯಲ್ಲಿದೆ. ಇದರ ಸುತ್ತಲೂ ಹರಿಯುವ ಸಣ್ಣ ನೀರಾವರಿ ಕಾಲವೆಗಳಿಂದಾಗಿ ದಿಬ್ಬದ ಭಾಗಗಳು ಹಾಳಾಗಿವೆ. ದಿಬ್ಬವು ತಿಳಿಬೂದಿ ಬಣ್ಣದಂತಿದೆ. ದಿಬ್ಬದ ದಕ್ಷಿಣಕ್ಕೆ ಬಂಡೆಗಳ ಮೇಲೆ ಕಂಡು ಬರುವ ಚಿತ್ರಗಳು ಹಾಗೂ ಮಡಿಕೆ ಚೂರುಗಳು, ಅಗ್ನಿಶಿಲೆ ಮತ್ತು ಬೆಣಚು ಶಿಲೆಗಳು ಚಕ್ಕೆಕಲ್ಲಿನ ಆಯುಧಗಳು ಕಂಡುಬಂದಿವೆ. ಇಲ್ಲಿ ಒಟ್ಟು ಮೂರು ನಿವೇಶನಗಳು ಕಂಡುಬಂದಿದ್ದು, ಅವು ಬೂದಿದಿಬ್ಬದ ಜೊತೆಗೆ ಸಂಬಂಧ ಹೊಂದಿವೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೨೪]

ಕಬ್ಬಿಣ ಅಥವಾ ಬೃಹತ್ ಶಿಲಾಯುಗ

ವಿಶಿಷ್ಟ ಬಗೆಯ ಸಂಪ್ರದಾಯದಿಂದ ಕೂಡಿದ ಈ ಹಂತ ದಕ್ಷಿಣ ಭಾರತದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಸತ್ತವರಿಗಾಗಿ ದೊಡ್ಡ ದೊಡ್ಡ ಕಲ್ಲುಗಳನ್ನು ನಿಲ್ಲಿಸಿ ಗೋರಿಗಳ ನಿರ್ಮಾಣ ಕಾರ್ಯ ನಡೆದಿದ್ದರಿಂದ ಇದನ್ನು ಬೃಹತ್ ಶಿಲಾಯುಗವೆಂದು ಕರೆಯಲಾಯಿತು. ವಿವಿಧ ಸ್ಥಳಗಳಲ್ಲಿ ಕಂಡುಬಂದಿರುವ ನೂರಾರು ಕಲ್ಲುಗೋರಿಗಳು ಈ ಸಂಸ್ಕೃತಿಯ ವೈಶಿಷ್ಟ್ಯವನ್ನು ತಿಳಿಸುತ್ತವೆ. ಅಲ್ಲದೆ ಅವುಗಳ ಶೋಧ, ಉತ್ಖನನಗಳಿಂದ ವಿವಿಧ ಪ್ರಕಾರದ ಗೋರಿಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಇವುಗಳಲ್ಲಿ ಹಾದಿ ಕೋಣೆ, ಕಂಡಿಕೋಣೆ, ಕೊರೆದು ತಯಾರಿಸಿದ ಶವ ಕುಣಿಗಳು, ಮಡಿಕೆಯ ಶವಪಟ್ಟಿಗೆಗಳುಳ್ಳ ದುಂಡುವೃತ್ತಗಳು, ನಿಸುಗಲ್ಲುಗಳು, ಕಲ್ಲು ಗುಂಟೆಗಳು ಮೊದಲಾದ ಪ್ರಕಾರಗಳು ಈ ತಾಲೂಕಿನಲ್ಲಿ ಕಂಡುಬಂದಿವೆ. ವಿಶೇಷವಾಗಿ ಈ ಪ್ರದೇಶದ ಆಗೋಲಿ, ಅರಳಿಹಳ್ಳಿ, ಆನೆಗೊಂದಿ, ಗಡ್ಡಿ, ಗುಡೂರು, ಚಿಕ್ಕಬೆಣಕಲ್ಲ, ಮಲ್ಲಾಪುರ, ಜಂಗಮರ

ಕಲ್ಗಡಿ, ತಿಮ್ಮಪುರ, ಬಿಳೇಬಾವಿ, ಬಸರಿಹಾಳ ಬಂಡರಹಾಳ, ಮರಕುಂಬಿ, ಯಮ್ಮಿಗುಡ್ಡ, ಸಾಣಾಪುರ ಮತ್ತು ಹಿರೇ ಬೆಣಕಲ್ ಈ ಸಂಸ್ಕೃತಿಯ ಪ್ರಮುಖ ನೆಲೆಗಳಾಗಿವೆ.

ಆಗೋಲಿಯಲ್ಲಿ ಕಿಂಡಿಕೋಣೆ ಗೋರಿಗಳು, ಅರಳಿಹಳ್ಳಿಯಲ್ಲಿ ಶಿಲಾವೃತ್ತಗಳು, ಆನೆಗೊಂದಿಯಲ್ಲಿ ಕಪ್ಪು ಮತ್ತು ಕೆಂಪು ವರ್ಣದ ಮೃತಾಪಾತ್ರೆಗಳು, ಗೀರುಕಲೆಗಳು, ಗಡ್ಡಿಯಲ್ಲಿ ಕೋಣಿಗೋರಿಗಳು, ಚಿಕ್ಕಬೆಣಕಲ್‌ನಲ್ಲಿ ಹಾಳಾದ ಹಲವು ಗೋರಿಗಳು, ಚಿಕ್ಕರಾಂಪುರದಲ್ಲಿ ಗವಿವರ್ಣದ ಚಿತ್ರಗಳು, ಜಂಗಮರಕಲ್ಲುಗ್ಗಡಿಯಲ್ಲಿ ಶವ ಕುಣಿಗಳು, ತಿಮ್ಮಾಪುರದಲ್ಲಿ ಶಿಲಾವೃತ್ತಗಳು, ಬಿಳೇಬಾವಿಯಲ್ಲಿ ಡಮರುವಿನಂತಹ ಕೆಮ್ಮಣ್ಣಿನ ವರ್ಣಚಿತ್ರ, ಬೆನಕಲ್, ಕಿಂಡಿಕೋಣಿ ಗೋರಿಗಳು, ಬಸಿರಿಹಾಳನಲ್ಲಿ ಶಿಲಾವೃತ್ತಾದ ಶವಕುಣಿಗಳು, ಮರಕುಂಬಿಯಲ್ಲಿ ಗವಿಯಲ್ಲಿ ಮೂರು ವರ್ಣಚಿತ್ರಗಳು, ಯಮ್ಮಿಗುಡ್ಡದಲ್ಲಿ ಕಂಡಿಕೋಣೆ ಕಲ್ಮನೆ, ರಾಯಚೂರು ಜಿಲ್ಲೆ ವಿವಿಧ ಮಾದರಿ ಗೋರಿಗಳು, ವೆಂಕಟಾಪುರದಲ್ಲಿ ಗವಿ ವರ್ಣಚಿತ್ರಗಳು, ಸಣ್ಣಾಪುರದಲ್ಲಿ ಕಲ್ಲುಗ್ಗಪ್ಪೆಗಳು ಮತ್ತು ಹಿರೇಬೆಣಕಲ್‌ನಲ್ಲಿ ಕಿಂಡಿಕೋಣೆ ಗೋರಿಗಳು ಕಂಡುಬಂದಿವೆ.[೨೫]

ಪುರಾತತ್ವತಜ್ಞರಾದ ಅ.ಸುಂದರ್‌ಅವರು ಪ್ರಾಗಿತಿಹಾಸ ಸಂಸ್ಕೃತಿಯ ಹಲವು ನೆಲೆಗಳನ್ನು ಶೋಧಿಸಿದ್ದಾರೆ.[೨೬] ಅವುಗಳೆಂದರೆ ಬಂಡಿಹರ್ಲಾಪುರ, ಬಿಳೇಬಾವಿ, ತಿಪ್ಪನಹಾಳ್, ಗೂಡೂರು, ಬಸಿರಹಾಳ್, ಜಿರಾಳಾಕಲ್ಲುಗಡಿ, ಗಡ್ಡಿ, ಚಿಕ್ಕಮಾದಿಹಾಳ್, ಚಿಕ್ಕಬೆಣಕಲ್, ಆಗೋಳಿ, ಮಲ್ಲಾಪುರ, ಕಲ್ಲಪ್ಪನ ಕ್ಯಾಂಪ್ ಪ್ರಮುಖ ವಾದವು, ಈ ನೆಲೆಗಳಲ್ಲಿ ದುಂಡುಕಟ್ಟೆಗಳು, ಶವಕುಣಿಗಳು ಕಂಡಿಗೋರಿಗಳೆಂಬ ಮೂರು ವಿಧವಾದ ಶಿಲಾಗೋರಿಗಳು ಕಂಡುಬಂದಿವೆ. ಜೊತೆಗೆ ಒಳಪಾದ ಕಪ್ಪು, ಕೆಂಪು ಬಣ್ಣದ ಮಡಿಕೆಗಳು ಕಬ್ಬಿಣದ ಉಪಕರಣ ಅವಶೇಷಗಳು ಮಾನವನ ಅಸ್ಥಿ ಚೂರುಗಳು ಕಂಡುಬಂದಿವೆ. ಈ ಕಲ್ಲುಗೋರಿಗಳಲ್ಲಿ ಅಲ್ಲೊಂದು ಇಲ್ಲೊಂದು ಅಪರೂಪವಾಗಿ ಬೃಹದಾಕಾರದ ಕಲ್ಲಿನ ಗೊಂಬೆಗಳಿವೆ. ಚಪ್ಪಟೆ ಕಲ್ಲಿನಲ್ಲಿ ಮನುಷ್ಯ ಕೃತಿಯನ್ನು ಹೋಲುವ ಗೊಂಬೆಗಳನ್ನು ಬಿಡಿಸಲಾಗಿದೆ. ಇಂತಹ ಗೊಂಬೆಗಳು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಸುಮಾರು ಹದಿನಾರು ಕ್ಕಿಂತಲೂ ಹೆಚ್ಚು ಕಂಡುಬಂದಿವೆ. ಹಿರೇಬೆಣಕಲ್, ಹುಲಿಕುಂಟೆಗಳಲ್ಲಿರುವ ಇಂತಹ ಗೊಂಬೆಗಳು ಸಾಮಾನ್ಯವಾಗಿ ಅರ್ಧಗೋಲಾಕೃತಿಯಲ್ಲಿ ತಲೆ ಕಿರಿದಾದ, ಕಂಠ ಮುಂಚಾಚಿದ ಮುಂಡು ಭುಜಗಳು, ನೀಳಾವಾದ ಮುಂಡವಿದೆ. ಬುಡವು ಚೂಪಾಗಿರುತ್ತದೆ. ಹಿರೇಬೆಣಕಲ್ಲಿನ ಗೊಂಬೆಯ ತಲೆ ದೊಡ್ಡದು. ಆದರೆ ಮೂರನೇ ಎರಡು ಭಾಗ ಭೂಮಿಯಲ್ಲೇ ಹುಗಿದಿದೆ. ಒಬ್ಬ ಮನುಷ್ಯನ ರಟ್ಟೆಗಳನ್ನು ಅಡ್ಡಚಾಚಿ ಕೈಗಳನ್ನು ಮೇಲೆತ್ತಿ ನಿಂತಿದೆ.೨೪ ಪ್ರಸ್ತುತ ಅಧ್ಯಯನ ಪ್ರದೇಶದ ಕಲ್ಲಪ್ಪನ ಕ್ಯಾಂಪ್ ಮತ್ತು ಆಗೋಲಿಗಳಲ್ಲಿ ಕಲ್ಲುಗೊಂಬೆಗಳನ್ನು ಸಂಶೋಧಕರಾದ ಡಾ. ಶರಣಪ್ಪ ಕೋಲ್ಕಾರ ಶೋಧಿಸಿದ್ದಾರೆ.[೨೭]

ಕಬ್ಬಿಣದ ಬಳಕೆ

ಬೃಹತ್ ಶಿಲಾಯುಗದ ಹಂತದಿಂದ ಮಾನವನ ಪ್ರಮುಖ ಬೆಳವಣಿಗೆಯಲ್ಲಿ ಕಬ್ಬಿಣ ತಯಾರಿಕೆಯೂ ಒಂದು. ಅದಿರಿನಿಂದ ಕಬ್ಬಿಣ ಉತ್ಪಾದನೆ ಕಂಡುಕೊಂಡ ನಂತರ ಸಾಮಾಜಿಕವಾಗಿ ಕ್ರಾಂತಿಕಾರಿ ಬದಲಾವಣೆಯಾಗುತ್ತ ನಡೆಯಿತ್ತು. ಜಗತ್ತಿನಾದ್ಯಂತ ಆರಂಭವಾದ ಈ ಕಬ್ಬಿಣ ಉತ್ಪಾದನೆಯ ಕಾಲ ನಿರ್ಣಯದಲ್ಲಿ ಭಿನ್ನ ಅಭಿಪ್ರಾಯಗಳಿವೆ. ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ಬೃಹತ್ ಶಿಲಾಯುಗದ ಅವಧಿಯನ್ನು ಇದಕ್ಕೆ ಕೊಡಲಾಗಿದೆ. ಇದು ಉತ್ತರ ಭಾರತದಿಂದ ದಕ್ಷಿಣಕ್ಕೆ ಹರಡಿತೆಂದು ನಂಬಲಾಗಿದೆ. ಆದರೆ ಬ್ರಹ್ಮಗಿರಿಯಲ್ಲಿ ಉತ್ಖನನ ಕೈಗೊಂಡ ಮಾರ್ಟಿನ್ ಮಿಲರ್ ಉತ್ತರ ಭಾರತದಲ್ಲಿ ಬಳಕೆಯಲ್ಲಿರುವ ಮೊದಲೇ ಇಲ್ಲಿ ಕಬ್ಬಿಣದ ಉತ್ಪಾದನೆ ನಡೆಯಿತೆಂದು ಹೇಳಿದ್ದಾರೆ.[೨೮]

ಗಂಗಾವತಿ ತಾಲೂಕಿನ ಗಡಿಪ್ರದೇಶಗಳಾದ ಹೊಸಪೇಟೆ, ಬಳ್ಳಾರಿ, ಸಂಡೂರು ಬೆಟ್ಟಗಳು ಹೇರಳವಾಗಿ ಕಬ್ಬಿಣದ ಅದಿರನ್ನು ಹೊಂದಿದೆ. ಬೃಹತ್ ಶಿಲಾಯುಗದ ಹಂತದಿಂದಲೇ ಇಲ್ಲಿ ಕಬ್ಬಿಣದ ಬಳಕೆ ಆರಂಭವಾದಂತೆ ತೋರುತ್ತದೆ. ಪ್ರಸ್ತುತ ಅಧ್ಯಯನ ಪ್ರದೇಶದ ಹಿರೇಬೆಣಕಲ್‌ನಲ್ಲಿ ಕಂಡುಬಂದ ಕಬ್ಬಿಣ ಉಪಕರಣ ಮತ್ತು ಆನೆಗೊಂದಿಯಲ್ಲಿ ದೊರೆತಾ ಕಬ್ಬಿಣದ ಕಿಟ್ಟುಗಳು ತಾಲೂಕಿನಲ್ಲಿ ಕಬ್ಬಿಣ ಸಂಸ್ಕೃತಿಯ ಇರುವುದಕ್ಕೆ ಪುಷ್ಟಿ ನೀಡುತ್ತವೆ. ಹಿರೇಬೆಣಕಲ್ ನಲ್ಲಿ ಉಪಕರಣವನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಸಂಡೂರು ಅದಿರಿನಿಂದ ಕ್ರಿ.ಪೂ. ೧೧೦೦ರಲ್ಲಿ ತಯಾರಿಸಲಾಗಿದೆಯೆಂದು ತಿಳಿದುಬಂದಿದೆ.[೨೯]

ಆದಿ ಇತಿಹಾಸದ ಕಾಲ

ಮಾನವನ ಜೀವನದ ವಿವಿಧ ಸಾಂಸ್ಕೃತಿಕ ಹಂತದಿಂದ ಲಿಪಿ ಬಳಕೆಗೆ ಬಂದ ಕಾಲವನ್ನು ಇತಿಹಾಸ ಆರಂಭ ಕಾಲವೆಂದು ಗುರುತಿಸಲಾಗಿದೆ. ಆದಿ ಇತಿಹಾಸ ಕಾಲದ ನೆಲೆಗಳು ಮತ್ತು ಅವಶೇಷಗಳು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕಂಡುಬಂದಿವೆ. ಈ ಸಂಸ್ಕೃತಿಯ ಪೂರ್ವಕವಾಗಿ ಇಲ್ಲಿನ ಉಳೇನೂರು, ಕಕ್ಕರಗೊಳ, ಬೆಣಕಲ್, ಸಿರಿವಾಳ, ಮತ್ತು ಹೇರುರು ಗ್ರಾಮಗಳಲ್ಲಿ ಆದಿ ಇತಿಹಾಸ ಕಾಲದ ಅವಶೇಷಗಳು ಕಂಡುಬಂದಿವೆ. ವಿಶೇಷವಾಗಿ ಬೆಣಕಲ್‌ನಲ್ಲಿ ಕೆಂಪು ಲೇಪನದಡಿಯಲ್ಲಿ ಬಿಳಿಯ ವರ್ಣಚಿತ್ರಗಳುಳ್ಳ ಮಡಿಕೆ ಭಾಗಗಳು ದೊರೆತಿವೆ. ಹಿರೇಬೆಣಕಲ್‌ನಲ್ಲಿ ಈ ಹಂತದ ಅವಶೇಷ ದೊರೆಕಿದ್ದು, ಕಬ್ಬಿಣವನ್ನು ಕರಗಿಸುತ್ತದ್ದ ಬಗ್ಗೆ ತಿಳಿಯುತ್ತದೆ.[೩೦]

ಪ್ರಾಗಿತಿಹಾಸ ಕಾಲದ ಕಲೆ

ಮಾನವನು ಆಹಾರ ಸಂಗ್ರಹಣೆ ಹಂತದಲ್ಲಿ ಗವಿ ಬಂಡೆಗಳ ಆಶ್ರಯದಲ್ಲಿ ವಾಸ ಮಾಡುವ ಕಾಲಕ್ಕಾಗಲೇ ಕಲಾ ಅಭಿರುಚಿ ಬೆಳೆಸಿಕೊಂಡನು. ತನ್ನ ನಿರಂತರ ಜೀವನದಲ್ಲಿ ನಡೆಯುವ ಘಟನೆಗಳನ್ನು ಆಧಾರಿಸಿ ಪ್ರಚಲಿತವಿದ್ದ ಪ್ರಾಣಿ, ಪಕ್ಷಿ, ಪ್ರಾಣಿ ಬೇಟಿ, ನೃತ್ಯಭಂಗಿ

ಮೊದಲಾದ ಅಂಶಗಳನ್ನು ಬಣ್ಣದಲ್ಲಿ ಇಲ್ಲವೇ ಗೀರು ಚಿತ್ರಗಳ ಮೂಲಕ ಅಭಿವ್ಯಕ್ತಿಪಡಿಸುತ್ತಾ ಬಂದನು. ವಿಶೇಷವಾಗಿ ಇಂತಹ ಚಿತ್ರಗಳು ತಾಲೂಕಿನ ರಾಂಪುರ, ಹಿರೇಬೆಣಕಲ್, ಮಲ್ಲಾಪುರ, ಹೊಸಕೆರೆ, ಹಂಪಾಸದುರ್ಗ, ಆಗೋಳಿ ಮುತಾಂದ ನೆಲೆಗಳಲ್ಲಿ ಸೂಕ್ಷ್ಮ ಶಿಲಾಯುಗದಿಂದ ಆದಿ ಇತಿಹಾಸ ಕಾಲದವರೆಗಿನ ಚಿತ್ರಗಳು ಕಂಡುಬರುತ್ತವೆ.[೨೧]
ಈ ಪ್ರಾಕ್ಚಾರಿತ್ರಿಕ ಕಾಲದ ಗವಿವರ್ಣ ಹಾಗೂ ಬಯಲುಬಂಡೆ ಚಿತ್ರಗಳಿಂದ ಪ್ರಾಚೀನ ಮಾನವನ ಬದುಕಿನ ಹಲವಾರು ಸಂಗತಿಗಳನ್ನು ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಲು ಅಸ್ಪದವಾಗಿದೆ. ಪಶುಪಾಲನೆ, ಬೇಟೆಗಾರಿಕೆ, ಮಾಂತ್ರಿಕ ಆರಾಧನೆ ಸಮೂಹ ಕುಣಿತ ಮುಂತಾದ ಸಾಮಾಜಿಕ ಸಂಗತಿಗಳು ಬಿತ್ತಿಚಿತ್ರಗಳ ಮೂಲಕ ಅನಾವರಣಗೊಂಡಿವೆ.

೨.೩ ಚಾರಿತ್ರಿಕ ಹಿನ್ನೆಲೆ

ಗಂಗಾವತಿ ತಾಲೂಕಿನಲ್ಲಿ ಈ ಇತಿಹಾಸ ಪೂರ್ವಕಾಲದ ಅವಶೇಷಗಳ ಹೊರತಾಗಿ ಮೌರ್ಯರ ಕಾಲದಿಂದ ವಿಜಯನಗರೋತ್ತರ ರಾಜರ ಕಾಲದವರೆಗಿನ ಕುರುಹುಗಳು ಇಲ್ಲಿ ಲಭ್ಯವಾಗಿವೆ. ಮುಖ್ಯವಾಗಿ ಇಲ್ಲಿನ ಬಹುತೇಕ ಶಾಸನಗಳು ಗಂಗಾವತಿ ತಾಲೂಕಿನಲ್ಲಿ ಚರಿತ್ರೆಯನ್ನು ರೂಪಿಸಲು ಸಹಕಾರಿಯಾಗಿವೆ.

ಮೌರ್ಯರು

ಮೌರ್ಯರ ಕಾಲಘಟ್ಟಗಳಲ್ಲಿ ಗಂಗಾವತಿ ಪ್ರದೇಶವು ಒಂದು ವಾಣಿಜ್ಯ ಮತ್ತು ಧಾರ್ಮಿಕ ಕೇಂದ್ರವಾಗಿ ರಾಜಕೀಯ ವ್ಯವಸ್ಥೆಯ ಮೇಲೆ ಪ್ರಭಾವ ಬೀರಿತ್ತು ಎನ್ನುವುದಕ್ಕೆ ಹಲವು ಆಧಾರಗಳು ಈ ಪರಿಸರದಲ್ಲಿವೆ. ಅವುಗಳನ್ನು ಆಧರಿಸಿ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಮೌರ್ಯರ ಆಳ್ವಿಕೆ ಪ್ರಭಾವವನ್ನು ಗುರುತಿಸಬಹುದು. ಈ ಪ್ರದೇಶದಿಂದ ಕೆಲವೇ ಕಿ.ಮೀ, ಅಂತರದಲ್ಲಿರುವ ಗವಿಮಠ, ಪಾಲ್ಕಿಗುಂಡು (ಕೊಪ್ಪಳ) ಟರ್ನರ್ ಆರ್.ಎಲ್. ೧೯೫೨),[೨೯] ಮಸ್ಕಿ–ನಗರದಲ್ಲಿವೆ. (ಹುಲ್ಷ್ ೩, ೧೯೨೫ ೧೭೪–೧೭೫),೩೧ ನಿಟ್ಟೂರು (ಶೆಟ್ಟರ್ ಎಸ್ ಮತ್ತು ರಾಜಶೇಖರ ಎಸ್, ೧೯೭೭: ೧೩೯),[೩೨] ಉದಯಗೊಳ (ಸಂಯುಕ್ತ ಕರ್ನಾಟಕ ದೈನಿಕ, ೬–೩–೧೯೬೧),[೩೪] ಕನಕಗಿರಿ ಪ್ರದೇಶದ ಉತ್ತರಕ್ಕೆ ಸನ್ನತಿ (ಶರ್ಮ ಎ.ಕೆ ಮತ್ತು ಇತರರು : ೧೯೮೯; ೨, ೧೫ ಮತ್ತು ೧೯೮೯;೪೦೩–೪೧೨)[೩೫] ಹಾಗು ದಕ್ಷಿಣಕ್ಕೆ ಬ್ರಹ್ಮಗಿರಿಯಲ್ಲಿ ಮೌರ್ಯರ ಶಾಸನಗಳು (ಹುಲ್ಷ್ ಇ: ೧೯೨೫: ೧೭೫–೧೮೦)[೩೬] ದೊರೆತಿವೆ.

ಈ ಎಲ್ಲಾ ಸ್ಥಳಗಳ ಮಧ್ಯೆ ಗಂಗಾವತಿ ಪ್ರದೇಶವು ಇರುವುದರಿಂದ ನಿಸ್ಸಂದೇಹವಾಗಿ ಮೌರ್ಯರ ಸಾಮ್ರಾಜ್ಯದ ಭಾಗವಾಗಿತ್ತು. ವಿಶೇಷವೆಂದರೆ ತಾಲ್ಲೂಕಿನ ಕನಕಗಿರಿಯನ್ನು ಮೌರ್ಯ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯದ ರಾಜಧಾನಿಯಾಗಿತ್ತೆಂದು ಎಂದು ವಿದ್ವಾಂಸರು ಗುರುತಿಸಿದ್ದಾರೆ. ಏಕೆಂದರೆ, ಅಶೋಕನ ಬ್ರಹ್ಮಗಿರಿ ಪರಿಸರ ಶಾಸನಗಳು "ಸುವಂಣಗಿರೀತೇ ಆಯತ ಮತಸ

ಮಹಾಮಾತಾಣಂ ಏತನಿಯಾ ಹೇವಾ ಚ ವಚನೇನ ಇಸಿಲಸಿ" ಎಂಬುದಾಗಿ ಪ್ರಾರಂಭಗೊಳ್ಳುತ್ತವೆ. ಅಂದರೆ ಈ ಶಾಸನಗಳು ಅಶೋಕನು ತನ್ನಸಾವಮ್ರಾಜ್ಯದ ದಕ್ಷಿಣಪ್ರಾಂತ್ಯದ ಉಪರಾಜಧಾನಿಯಾಗಿದ್ದಿರಬಹುದಾದ ಸುವರ್ಣಗಿರಿಯಲ್ಲಿ ಇದುದ್ದು. ಆರ್ಯಪುತ್ರ ಹಾಗು ಸುವರ್ಣಗಿರಿ ಮಹಾಮಾತ್ರರಿಗೆ ಉದ್ದೇಶಿಸಿದವು. ದಕ್ಷಿಣದಲ್ಲಿ ಈ ಆದೇಶಗಳು ಸುವರ್ಣಗಿರಿಯಿಂದ ಇಸಿಲಾದಲ್ಲಿದ್ದ ಮಹಾಮಾತ್ರಾರಿಗೆ ನಿರೂಪಿಸಲಾದಂತವು. ಇದರಿಂದ ಸುವರ್ಣಗಿರಿ ಮೌರ್ಯ ಸಾಮ್ರಾಜ್ಯದ ಮುಖ್ಯ ಆಡಳಿತ ಕೇಂದ್ರಗಳಲ್ಲಿ ಒಂದಾಗಿತ್ತೆಂದು ಸ್ಪಷ್ಟವಾಗುತ್ತದೆ. ಆದರೆ ಇಲ್ಲಿಯ ಸುವರ್ಣಗಿರಿಯನ್ನು ಗುರುತಿಸುವಲ್ಲಿ ವಿದ್ವಾಂಸರಲ್ಲಿ ಬಿನ್ನಾಭಿಪ್ರಾಯಗಳಿವೆ. ಅಲ್ಲದೇ ಕನಕಗಿರಿ ಹಿಂದೆ ಸವರ್ಣಗಿರಿ ಎಂತಲೂ ಕೂಡ ಕರೆಯಲಾಗುತ್ತಿತ್ತು.

"ಸ್ಕಂದ ಪುರಾಣ"ದ ತುಂಗಾ ಮಾತೆಯ ಕನಕ ಚಲಪತಿ ಅಷ್ಟೋತ್ತ ಶತಮಾನ ಸೂತ್ರದಿಂದ ತಿಳಿಯುತ್ತದೆ. ಇಲ್ಲಿ ಈ ಸೂತ್ರವನ್ನು 'ಅಶ್ಯಶ್ರೀ ಸ್ವರ್ಣದ್ರೀಶಾಷ್ಟೋತ್ತರ ಶತನಾಮಸ್ತೋತ್ರ' ವೆಂದು ಕನಕಾಚಲ ಲಕ್ಷ್ಮೀನರಸಿಂಹ ದೇವರನ್ನು "ಧ್ಯಾಯೇತ್ಸ್ವರ್ಣ ಗಿರೀಶ್ವರಂ" ಎಂದು ಹಾಗೂ ಸ್ವರ್ಣಶೈಲಾದಿ, ಸ್ವರ್ಣಪುರೀಂದ್ರ, ಸ್ವರ್ಣಾದ್ರಿನಾಥ, ಸ್ವರ್ಣಾದ್ರಿಶ ೧೨ಎಂಬುದಾಗಿ ಸೂಚಿಸಲಾಗಿದೆ. ಅಲ್ಲದೆ ಕನಕಗಿರಿ ಕ್ರಿ.ಶ,೧೬೭೪ರ ಶಾಸನವೊಂದರ ಆರಂಭ ಶ್ಲೋಕ "ಶ್ರೀ ಮತ್ಬರ್ಣ ಗಿರಿಶಶ್ಯ ನರಸಿಂಹಸ್ಪ ಶಾಸನಂ" ಎಂಬುದಾಗಿ ಕೊನೆಗೊಳ್ಳುತ್ತದೆ. ಆದ್ದರಿಂದ ಗಂಗಾವತಿ ತಾಲೂಕಿನ ಕನಕಗಿರಿಯ ಅಶೋನ ಶಾಸನೋಕ್ತ ಸುವರ್ಣಗಿರಿ ಎಂದು ವಾದಿಸಲು ಬಲವಾದ ಅವಕಾಶವಿದೆ. ಅಲ್ಲದೇ ಈ ಸಂದರ್ಭದಲ್ಲಿ ಕನಕಗಿರಿಯು ಕ್ರಿ. ಶ. ೨ನೆಯ ಶತಮಾನದ ಹೊತ್ತಿಗೆ ವ್ಯಾಪಾರ ಕೇಂದ್ರವಾಗಿತ್ತೆಂದು ಹೇಳುವಲ್ಲಿ ಟಾಲಮಿಯಾ ಜೆಯಾಗ್ರಫಿ ಗ್ರಂಥದಲ್ಲಿ ಉಲ್ಲೇಖದಿಂದ ತರ್ಕಿಸಬಹುದು.[೩೭] ಮೇಲಿನ ಎಲ್ಲಾ ಆಧಾರಗಳಿಂದ ಈ ಪ್ರದೇಶದಲ್ಲಿ ಮೌರ್ಯರ ಆಡಳಿತವಾಗಿತ್ತೆಂದ ಹೇಳಬಹುದು.

ಶಾತವಾಹನರು

ಮೌರ್ಯರು ತರುವಾಯ ದಕ್ಕನ್ ಪ್ರಸ್ಥಭೂಮಿಯಲ್ಲಿ ರಾಜ್ಯ ಸ್ಥಾಪನೆಯೊಂದಿಗೆ ಶಾತವಾಹನರು ಅಧಿಕಾರಕ್ಕೆ ಬಂದರು. ಇವರು ಸುಮಾರು ಮೂನ್ನೂರ ಐವತ್ತು ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಶ್ರೀ ಕಾಕುಲಂ, ದಾನ್ಯ ಕಟಕ, ಪೈಥಾನ್ ಇವರ ರಾಜ್ಯಧಾನಿಗಳಾಗಿದ್ದವು. ಇವರ ಆಳ್ವಿಕೆಯ ಅವಧಿಯಲ್ಲಿ ಶಾತವಾಹನರ ಸಾಮ್ರಾಜ್ಯ ಬಂಗಾಳ ಕೊಲ್ಲಿಯಿಂದ ಅರಬ್ಬಿ ಸಮುದ್ರವರೆಗೂ ವ್ಯಾಪಿಸಿತ್ತು ಎಂದು ದೃಢವಾಗಿದೆ. ಶಾತವಾಹನರು ಕರ್ನಾಟಕದ ಬಹುಭಾಗವನ್ನು ಆಳಿದ್ದಾರೆ. ಗಂಗಾವತಿ ಪ್ರದೇಶವು ಸಹ ಇವರ ಆಳ್ವಿಕೆಗೆ ಒಳಪಟ್ಟಿತ್ತೆಂದು ಈ ಪ್ರದೇಶಕ್ಕೆ ಸುತ್ತಮುತ್ತಲಿನ ಸ್ಥಳಗಳಲ್ಲಿ ದೊರೆತ ಸಮಕಾಲೀನ ನೆಲೆ, ಶಾಸನ, ವಸತಿ ನೆಲೆ ಹಾಗೂ ಮೂರ್ತಿಶಿಲ್ಪಗಳಿಂದ ತರ್ಕಿಸಬಹುದು. ಶಾತವಾಹನರ ಶಾಸನಗಳು ಗಂಗಾವತಿ ತಾಲೂಕಿನ ಕನಕಗಿರಿಯಿಂದ ಉತ್ತರಕ್ಕೆ ಸುಮಾರು ೨೦೦ ಕಿ.ಮೀ, ದೂರದ ಸನ್ನತ್ತಿ (ಎ.ಆರ್.ಆಯ.ಇ ೧೯೬೬-೯೭ ನಂ.ಬಿ-

೨೦೩–೨೩೩)[೩೮] ನೈರುತ್ಯಕ್ಕೆ ಸುಮಾರು ೩೦೦ ಕಿ.ಮೀ ದೂರದ ಬನವಾಸಿ (ರಘುನಾಥ ಭಟ್ ಎಚ್.ಆರ್. ೧೯೭೭–೪),[೩೯] ಪಶ್ಚಿಮಕ್ಕೆ ಸುಮಾರು ೧೮೦ಕಿ.ಮೀ ದೂರದಲ್ಲಿ ವಡಗಾಂವ್ ಮಾಧವಪುರ (ಪಂಚಮುಖಿ ಆರ್.ಎಸ್. ೧೯೫೩–೨)[೪೦] ಹಾಗೂ ಸಮೀಪದ ಹಿರೇಹಡಗಲಿ (ಇ.ಆಯ.ಐ)೪೦ ಕುರುಗೋಡ (ರಾಜಶೇಖರ್ ಎಸ್ ೧೯೩೬: ೨೨೨),[೪೧] ಮ್ಯಾಕ್ ಡೋಣಿಗಳಲ್ಲಿ (ಇ.ಐ :೧೫೫)[೪೨] ದೊರೆತಿವೆ. ಸನ್ನತಿ ಒಂದು ಶಾಸನದಲ್ಲಿ "ರ ಇರೊಸಿರಿ ಸಾತ......" ಎಂದಿದೆ. ಇದರಿಂದ ಗುಲಬರ್ಗಾ ಪ್ರಾಂತ ಶಾತವಾಹನರ ಆಳ್ವಿಕೆಗೆ ಒಳಪಟ್ಟಿರಬಹುದೆನ್ನುವುದಕ್ಕೆ ಸಾಕ್ಷಿಯಾಗಿದೆ. ಇನ್ನು ಹಿರೇಹಡಗಲಿ, ಮ್ಯಾಕ್‌ಡೋಣಿ ಶಾಸನಗಳ ಪ್ರಕಾರ ಶಾತಹನಿರಟ್ಟ, ಶಾತಹನಿಹರ ಎಂದು ಉಲ್ಲೀಖಿಸುವ ಹಿರೇಹಡಗಲಿ ಮತ್ತು ಮ್ಯಾಕ್‌ಡೋಣಿ ಶಾಸನಗಳು ಈ ಭಾಗದಲ್ಲಿ ಅವರ ಆಳ್ವಿಕೆಯನ್ನು ದೃಢಪಡಿಸುತ್ತವೆ.

ಉತ್ಖನನಗೊಂಡ ಚಂದ್ರವಳ್ಳಿ ಗ್ರಾಮ, ವಡಗಾಂವ್ ಮಾಧವಪುರಗಳು ಶಾತವಾಹನರ ಕಾಲದ ನೆಲೆಗಳಾಗಿವೆ. ಗಂಗಾವತಿ ಸಮೀಪದ ಸಂಡೂರಿನಲ್ಲಿ ಶಾತವಾಹನರ ಕಾಲದ ಅಪೂರ್ವವಾದ ಯಕ್ಷನ ಮೂರ್ತಿಯೊಂದು ದೊರೆತಿದೆ. (ಸುಂದರ ಅ: ೧೯೮೬:೨೭೯–೮೪)[೪೩] ಹೀಗೆ ಉತ್ತರದಲ್ಲಿ ಗುಲ್ಬರ್ಗಾ ಜಿಲ್ಲೆಯಿಂದ, ದಕ್ಷಿಣದಲ್ಲಿ ಚಿತ್ರದುರ್ಗದ ಜಿಲ್ಲೆ, ಹಾಗೂ ಪಶ್ಚಿಮದಲ್ಲಿ ಕರಾವಳಿಯಿಂದ ಬಳ್ಳಾರಿ ಜಿಲ್ಲೆಯವರೆಗೂ ಆವೃತವಾಗಿದ್ದ ಶಾತವಾಹನ ಸಾಮ್ರಾಜ್ಯದಲ್ಲಿ ಗಂಗಾವತಿ ಪ್ರದೇಶ ಸೇರಿರುವುದನ್ನು ಮೇಲಿನ ಆಧಾರಗಳಿಂದ ಸ್ಪಷ್ಟವಾಗುತ್ತದೆ.

ಕದಂಬರು

ಕದಂಬರು ಕರ್ನಾಟಕವನ್ನು ಆಳಿದ ಪ್ರಥಮ ಕನ್ನಡಿಗರು. ಇವರು ಕ್ರಿ.ಶ. ಸು. ೩೪೦ರಲ್ಲಿ ಅಧಿಕಾರಕ್ಕೆ ಬಂದು ಕ್ರಿ.ಶ. ೫೮೦ವರೆಗೂ ರಾಜ್ಯವಾಳಿದರು. ಬನವಾಸಿ ಇವರ ರಾಜ್ಯಧಾನಿ ತಾಳಗುಂದ ಶಾಸನದ ಪ್ರಕಾರ ಮಯೂರಶರ್ಮನು ಪಲ್ಲವರ ವಿರುದ್ಧ ಸಿಡಿದೆದ್ದು ಅವರನ್ನು ಸೋಲಿಸಿ ಪ್ರಬಲನಾದಾಗ ಮಯೂರಶರ್ಮನನ್ನು ಎದುರು ಹಾಕಿಕೊಳ್ಳದೇ ಅವನಿಗೆ ಪಶ್ಚಿಮ ತೀರದಿಂದ ಮಲಪ್ರಭ ನದಿಯ (ಪ್ರಹಾರ) ವರೆಗಿನ ಪ್ರದೇಶವನ್ನು ಕೊಟ್ಟು ಅವನನ್ನು ರಾಜನೆಂದು ಮಾನ್ಯ ಮಾಡಿದರು. ಈ ವ್ಯಾಪ್ತಿಯಲ್ಲಿ ಗಂಗಾವತಿಯ ಪ್ರದೇಶವು ಸಮ್ಮಿಳಿತವಾಗುತ್ತದೆ. ಆದರೂ ಇಲ್ಲಿ ಕದಂಬರ ಆಳ್ವಿಕೆಯ ಕುರಿತಾಗಿ ಯಾವ ನೇರ ದಾಖಲೆಗಳು ದೊರೆತಿಲ್ಲ. ಗಂಗಾವತಿ ಪ್ರದೇಶಕ್ಕೆ ಸಮೀಪವಿರುವ ದೇವಿಹಾಳ್ ಮತ್ತು ಸಂಡೂರಿನಲ್ಲಿ ಕದಂಬರ ಕಾಲದ ಎರಡು ಶಿಲ್ಪಗಳು ದೊರೆತಿವೆ. ಇವುಗಳಲ್ಲದೆ ಶಿರಹಟ್ಟಿ ತಾಲ್ಲೂಕಿನ ದೇವಿಹಾಳ್‌ದಲ್ಲಿ ಮಹಿಷಾಸುರ ಮರ್ದಿನಿ (ಸುಂದರ ಅ ೧೯೯೦:೨೨೨–೨೨೪೦)[೪೪] ಮತ್ತು ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಅಪೂರ್ವವಾದ ವಿಷ್ಣುವಿನ (೧೯೮೬:೨೭೯–೮೪)[೪೫] ವಿಗ್ರಹಗಳು ದೊರೆತಿವೆ. ಹೀಗೆ ಕೆಲವೇ ಶಾಸನಗಳ ಉಲ್ಲೇಖ ಮತ್ತು ಅವರ ಸಮಕಾಲೀನ ಶಿಲ್ಪಗಳಿಂದ ಗಂಗಾವತಿ ಪ್ರದೇಶದಲ್ಲಿ ಕದಂಬರ ಆಳ್ವಿಕೆಯನ್ನು ತರ್ಕಿಸಬಹುದು.

ಬಾದಾಮಿ ಚಾಲುಕ್ಯರು

ಬಾದಾಮಿ ಚಾಲುಕ್ಯರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಕರ್ನಾಟಕದ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಚಾಲುಕ್ಯರ ಪ್ರಭುತ್ವ ಉತ್ತರದಲ್ಲಿ ನರ್ಮದಾ ತೀರದಿಂದ ದಕ್ಷಿಣದಲ್ಲಿ ಕಾವೇರಿ ಬಯಲಿನವರೆಗೂ ವ್ಯಾಪಿಸಿತ್ತು. ಗಂಗಾವತಿ ಪ್ರದೇಶ ಚಾಲುಕ್ಯರ ಆರಂಭಿಕ ದೊರೆಗಳ ಆಳ್ವಿಕೆಗೆ ಒಳಪಟ್ಟ ಬಗ್ಗೆ ತಿಳಿದುಬರುವುದಿಲ್ಲ. ಆದರೆ ಈ ವಂಶದ ಪ್ರಸಿದ್ಧ ದೊರೆ ಇಮ್ಮಡಿ ಪುಲಕೇಶಿ ದಕ್ಷಿಣದ ಗಂಗ, ಕದಂಬ, ಅಳುಪ, ಪಲ್ಲವ, ಚೋಳ, ಕೊಂಕಣದ ಮೌರ್ಯರನ್ನು ಸೋಲಿಸಿ ದಕ್ಷಿಣಾಪಥದ ಮೇಲೆ ತನ್ನ ಏಕಸ್ವಾಮ್ಯವನ್ನು ಸಾಧಿಸಿದ. ಇವನ ಸಾಮ್ರಾಜ್ಯ ಉತ್ತರದಲ್ಲಿ ನರ್ಮದಾ ತೀರದಿಂದ ಪೂರ್ವದಲ್ಲಿ ಕಳಿಂಗದವರೆಗೂ ವಿಸ್ತರಿಸಿತ್ತು. ಈ ವಿಸ್ತಾರವಾದ ವ್ಯಾಪ್ತಿಯಲ್ಲಿ ಗಂಗಾವತಿ ಪ್ರದೇಶ ಸೇರಿತ್ತು.

ಪುಲಕೇಶಿಯ ಸಾವಿನೊಂದಿಗೆ ಕೈತಪ್ಪಿದ ರಾಜ್ಯವನ್ನು ಅವನ ಮಗ ಒಂದನೇ ವಿಕ್ರಮಾದಿತ್ಯನು ಪುನಹ ವಶಪಡಿಸಿಕೊಂಡ ಇಡೀ ದಕ್ಷಿಣ ಪಥದಲ್ಲಿ ಅಜೇಯನಾಗಿ ಮೆರೆದ. ಇವರ ನಂತರ ಬಂದ ವಿನಯಾದಿತ್ಯ, ವಿಜಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯ ಮತ್ತು ಇಮ್ಮಡಿ ಕೀರ್ತಿವರ್ಮರ ಆಳ್ವಿಕೆಯ ಕಾಲದಲ್ಲಿ ಗಂಗಾವತಿ ಪ್ರದೇಶ ಚಾಲುಕ್ಯ ಸಾಮ್ರಾಜ್ಯದ ಭಾಗವಾಗಿತ್ತೆಂದು ವಿದ್ವಾಂಸರು ಊಹಿಸಿದ್ದಾರೆ. ಕೊಪ್ಪಳ ತಾಲೂಕಿನ ಹಲಗೇರಿ ಗ್ರಾಮದಲ್ಲಿ ದೊರೆತ ಚಾಲುಕ್ಯರ ಶಾಸನವೊಂದು (ದೇಸಾಯಿ ಪಿ.ಬಿ;೧೯೫೭;೧)[೪೬] ವಿಜಯಾದಿತ್ಯನನ್ನು "ಯುದ್ದ ಮಲ್ಲ", ಸತ್ಯಾಶ್ರಯ, 'ಶ್ರೀ ಪೃಥ್ವಿವಲ್ಲಭ' ಎಂದು ವರ್ಣಿಸುತ್ತದೆ. ಇವುಗಳ ಆಧಾರದಿಂದ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಚಾಲ್ಯುಕರ ಆಳ್ವಿಕೆಯನ್ನು ಗುರುತಿಸಬಹುದು.

ರಾಷ್ಟ್ರಕೂಟರು

ಕ್ರಿ. ಶ ೭೫೮ ರಲ್ಲಿ ಬಾದಾಮಿ ಚಾಲುಕ್ಯರ ಇಮ್ಮಡಿ ಕೀರ್ತಿವರ್ಮನನ್ನು ರಾಷ್ಟ್ರಕೂಟರ ದೊರೆ ದಂತಿದುರ್ಗನು ಸೋಲಿಸುವುದರೊಂದಿಗೆ ರಾಷ್ಟ್ರಕೂಟ ಸಾಮ್ರಾಜ್ಯ ಸ್ಥಾಪನೆಗೆ ಅಸ್ತಿಭಾರಹಾಕಿದನು.[೪೭] ಇವರು ಕ್ರಿ.ಶ. ೯೭೩ ರವರಗೆ ಸುಮಾರು ಎರಡು ಶತಮಾನಗಳ ಕಾಲ ಬೃಹತ್ ಸಾಮ್ರಾಜ್ಯವನ್ನು ಕಟ್ಟಿ ಆಳಿದರು. ರಾಷ್ಟ್ರಕೂಟರ ಸಾಮ್ರಾಜ್ಯ ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿ ನದಿವರೆಗೂ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ, ಪೂರ್ವದಲ್ಲಿ ಆಂಧ್ರಪ್ರದೇಶದ ವಾರಂಗಲ್ ಮತ್ತು ಕಡಪ ಜಿಲ್ಲೆಗಳವರೆಗೂ ವಿಸ್ತರಿಸಿತ್ತು. ರಾಷ್ಟ್ರಕೂಟರ ಶ್ರೇಷ್ಠ ಅರಸರಲ್ಲಿ ಒಬ್ಬನಾದ ಅಮೋಘವರ್ಷನ ಆಡಳಿತದ ಅವಧಿಯಲ್ಲಿ ಧರ್ಮ ಮತ್ತು ಸಾಹಿತ್ಯದ ಪ್ರಗತಿಯ ದೃಷ್ಠಿಯಿಂದ ಕರ್ನಾಟಕ ಮತ್ತು ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವಪೂರ್ಣ ಅಧ್ಯಾಯವಾಗಿದೆ. ಸ್ವತ: ವಿದ್ವಾಂಸನಾಗಿದ್ದ ಇವನು ಕನ್ನಡ ಸಾಹಿತ್ಯದ ಪ್ರಥಮ ಗ್ರಂಥ ಕವಿರಾಜಮಾರ್ಗದ[೪೮] ಕರ್ತೃವಾಗಿದ್ದಾನೆ. ಈ ಕೃತಿಯಲ್ಲಿ ಅಮೋಘವರ್ಷನು ಗಂಗಾವತಿ ಪ್ರದೇಶದ ಕೊಪ್ಪಳವನ್ನು 'ವಿದಿತ ಮಹಾ ಕೊಪಣ ನಗರ" ಎಂದು ಕರೆದಿದ್ದಾನೆ. ಇದರಿಂದ

ಕೊಪ್ಪಳವನ್ನೊಳಗೊಂಡ ಗಂಗಾವತಿ ಪ್ರದೇಶ ಅಮೋಘವರ್ಷನ ಅಧೀನದಲ್ಲಿದ್ದತೆಂದು ತಿಳಿಯುತ್ತದೆ. ಗಂಗಾವತಿ ಪ್ರದೇಶದ ಭೋಗಾವತಿ (ಮಾನ್ವಿ ತಾ) ಮತ್ತು ಯೆರಡೋಣಿಗಳಲ್ಲಿ ಇವರ ಕಾಲದ ಶಾಸನಗಳಿವೆ. (ಎ.ಅರ್.ಇ; ೧೯೬೦–೬೧,ಬಿ.೫೫೦)[೪೯] ಭೋಗಾವತಿಯ ಶಾಸನವು ಎರಡನೆಯ ಕೃಷ್ಣನ ಕಾಲದ್ದಾಗಿದೆ. ಇವನ ಮಗ ೨ನೆಯ ಜಗತ್ತುಂಗನ್ನು ತಂದೆಯ ಅಧೀನನಾಗಿ 'ಎಡದೊರೆ ೨೦೦೦'. ಪ್ರಾಂತ್ಯವನ್ನು ಅಣುಜೀವಿತ'ವಾಗಿ ಆಳಿದ ಬಗ್ಗೆ ಹೇಳುತ್ತದೆ. ಕೃಷ್ಣ– ತುಂಗಾಭದ್ರಾ ನದಿಗಳ ನಡುವಿನ ರಾಯಚೂರ ಜಿಲ್ಲೆಯ ಪ್ರದೇಶವೇ ಎಡದೊರೆ. ಈ ಕೆಲವೇ ಶಾಸನ ಆಧಾರಗಳಿಂದ ಪ್ರಸ್ತುತ ಅಧ್ಯಯನ ಚಾಲುಕ್ಯ ಪ್ರದೇಶದಲ್ಲಿ ಅವರ ಆಳ್ವಿಕೆ ಪ್ರಭಾವವನ್ನು ಗುರುತಿಸಲು ಸಹಾಯಕವಾಗಿದೆ.

ಕಲ್ಯಾಣ ಚಾಲುಕ್ಯರು

ಕರ್ನಾಟಕವನ್ನಾಳಿದ ಪ್ರಮುಖ ರಾಜ ಮನೆತನಗಳಲ್ಲಿ ಕಲ್ಯಾಣ ಚಾಲುಕ್ಯ ಮನೆತನವು ಒಂದಾಗಿದೆ. ಈ ಮನೆತನವು ಕ್ರಿ.ಶ. ೯೭೩ರಲ್ಲಿ ಸ್ಥಾಪಿತವಾಗಿ, ಕ್ರಿ. ಶ. ೧೧೮೯ರಲ್ಲಿ ಕೊನೆಗೊಂಡಿತು. ಎರಡನೇಯ ತೈಲಪನು ಈ ವಂಶದ ಮೂಲ ಪುರುಷ. ಚಾಲುಕ್ಯರು ಕರ್ನಾಟಕದಲ್ಲಿ ರಾಷ್ಟ್ರಕೂಟರ ನಂತರ ರಾಜ್ಯ ಸ್ಥಾಪಿಸಿದ. ಇವರು ಸು. ೨೦೦ ವರ್ಷಗಳ ಕಾಲ ದಖನ್ನಿನ ಬಹುಭಾಗವನ್ನು ಆಳಿದರು. ಈ ವಂಶದ ಅರಸರು ಸಾಹ್ಯಿತ, ಧರ್ಮ, ಮತ್ತು ವಾಸ್ತುಶಿಲ್ಪದ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿದ್ದರು.

ಚಾಲುಕ್ಯರ ಆಳ್ವಿಕೆಯ ಅವಧಿಯಲ್ಲಿ ಗಂಗಾವತಿ ಪ್ರದೇಶವು ಸಂಪೂರ್ಣವಾಗಿ ಅವರ ಅಧೀನದಲ್ಲಿತ್ತು. ರಾಷ್ಟ್ರಕೂಟರನ್ನು ಸೋಲಿಸಿದ ನಂತರ ತೈಲಪನು (ಕ್ರಿ. ಶ.೯೭೩–೯೯೭) ಅವರ ಸಾಮಂತರನ್ನು ಸೋಲಿಸಿ ತನ್ನ ಸಾಮ್ರಾಜ್ಯವನ್ನು ತುಂಗಭಧ್ರಾ ನದಿಯವರೆಗೂ ವಿಸ್ತರಿಸಿದನು.[೫೦] ಇವನ ನಿಧನ ನಂತರ ಸತ್ಯಾಶ್ರಯ, ೫ನೇ ವಿಕ್ರಮಾದಿತ್ಯ ಅಧಿಕಾರಕ್ಕೆ ಬಂದನು. ಇವನ ಅಳ್ವಿಕೆ ಸಮಯದಲ್ಲಿ ಗಂಗಾವತಿ ಪ್ರದೇಶನ್ನೊಳಗೊಂಡ ಎಡದೊರೆ – ೨೦೦೦. ಪ್ರಾಂತವನ್ನು ಅವನ ತಮ್ಮ ಒಂದನೆಯ ಜಗದೇಕಮಲ್ಲ ಜಯಸಿಂಹ ಆಳುತ್ತಿದ್ದ ಎಂಬ ವಿಷಯವನ್ನು ಕ್ರಿ.ಶ. ೧೦೧೪ ನವಲಿಯ ಶಾಸನದಿಂದ ತಿಳಿದುಬರುತ್ತದೆ. (ಎ.ಆರ್.ಆಯ್.ಇ ೧೯೫೮–೫೯; ನಂ.೭೧೦)[೫೧] ಆರನೆ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ ಹಲವು ಶಾಸನಗಳು ಗಂಗಾವತಿ ಪ್ರದೇಶದಲ್ಲಿ ದೊರೆಯುತ್ತವೆ. ಕಲ್ಲೂರಿನ ಶಾಸನವು (ದೇಸಾಯಿ ಪಿ.ಬಿ;೧೯೫೬;೪೩–೪೪)[೫೨] ವಿಕ್ರಮಾದಿತ್ಯನು ದಿಗ್ವಿಜಯ ಕೈಗೊಂಡ ಸಮಯದಲ್ಲಿ ನರ್ಮದಾ ದಂಡೆಯ ಮೇಲೆ ಬೀಡು ಬಿಟ್ಟಿದ್ದಾಗ ಕಲ್ಲೂರನ್ನು ದಾನ ಮಾಡಿದ ಬಗ್ಗೆ ತಿಳಿಸುತ್ತದೆ. ವಿಕ್ರಮಾದಿತ್ಯನಿಗೆ ೧೨ ಜನ ರಾಣಿಯರಿದ್ದರು. ಅವರೆಲ್ಲಾ ಒಂದೊಂದು ಪ್ರಾಂತವನ್ನು ಆಳುತ್ತಿದ್ದರು, ಅವರಲ್ಲಿ ಒಬ್ಬಳಾದ ರಾಣಿ ಅಬ್ಬಲಾದೇವಿಯ, ಕರಡಿಲ್ ೪೦೦ ಪ್ರಾಂತದ ಲಿಂಗ (ಲಿಂಗಸ್ಗೂರ) ಗ್ರಾಮದಿಂದ ಆಳುತ್ತಿದ್ದಳು (ಎ .ಅರ್,ಆಯ್. ಇ; ೧೯೫೩–೫೪, ನಂ. ಬಿ. ೨೪೦),[೫೩] ಇನ್ನೊಬ್ಬ ರಾಣಿ

ತ್ರೈಲೋಕ್ಯ ಮಹಾದೇವಿಯು ನಿಟ್ಟಾರವಿ ೭೦ರ ಬಳಿಯ ಅಗ್ರಹಾರ ಮುಕ್ಕುಂದ (ಸಿಂಧನೂರ ತಾ) ನಾಡನ್ನು ಆಳುತ್ತಿದ್ದಳು (ಶರಣಬಸಪ್ಪ ಪಿ: ೧೯೯೦;೩೫)[೫೪] ಎಂದು ತಿಳಿದುಬರುತ್ತದೆ. ವಿಕ್ರಮಾದಿತ್ಯನ ನಂತರ ಬಂದ ಅರಸರು ದುರ್ಬಲವಾದ್ದರಿಂದ ಕಳಚೂರ್ಯರು, ದೇವಗಿರಿಯ ಸೇವುಣರು, ದ್ವಾರಸಮುದ್ರದ ಹೊಯ್ಸಳರು ಉತ್ಕರ್ಷಗೊಂಡಿದ್ದರಿಂದ ಚಾಲುಕ್ಯ ಸಂತತಿ ಕಣ್ಮರೆಯಾಯಿತು.

ಕಳಚೂರ್ಯರು

ಕಲ್ಯಾಣ ಚಾಲ್ಯುಕ ಮುಮ್ಮಡಿ ತೈಲನ ಅಳ್ವಿಕೆಯಲ್ಲಿ ಅಂದರೆ ಕ್ರಿ.ಶ, ೧೧೫೬ರಲ್ಲಿ ಕಳಚೂರ್ಯ ಬಿಜ್ಜಳನು ಪ್ರಬಲನಾಗಿ ಚಾಲುಕ್ಯ ಸಿಂಹಾಸನವನ್ನು ವಶಪಡಿಸಿಕೊಂಡನು. ಬಿಜ್ಜಳ ಸಮೀಪದ ಯೋಧ ಮತ್ತು ದಂಡನಾಯಕನಾಗಿದ್ದನು. ಇವನ ಆಳ್ವಿಕೆಯ ಕಾಲ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಘಟನೆಯಾಗಿದೆ. ಬಿಜ್ಜಳನ ಮಂತ್ರಿಯಾಗಿದ್ದ ಬಸವೇಶ್ವರರು ಸಾಮಾಜಿಕ, ಧಾರ್ಮಿಕ, ಸಮತಾ ಕ್ರಾಂತಿಯನ್ನು ಈ ಅವಧಿಯಲ್ಲಿ ಕೈಗೊಂಡರು.

ಬಿಜ್ಜಳ ನಂತರ ಅವನ ಮಕ್ಕಳಾದ ಸೋವಿದೇವ. ಸಂಕಮ, ಅವಹಮಲ್ಲಿ ಮತ್ತು ಸಿಂಘಣ ಎಂಬುವರು ಕ್ರಮವಾಗಿ ಆಳಿದರು. ತಂದೆಯ ಆಳ್ವಿಕೆಯ ಅವಧಿಯಲ್ಲಿ ರಾಯಮುರಾರಿ ಸೋವಿದೇವನು ಗಂಗಾವತಿ ಪ್ರದೇಶದ ಕೊಪ್ಪಳ ಸೀಮೆಯ ಮಾದಿನೂರಿನಿಂದ ಆಡಳಿತ ನಡೆಸುತ್ತಿದ್ದನೆಂದು ಕುಕನೂರಿನ ಶಾಸನ(ದೇಸಾಯಿ ಪಿ.ಬಿ; ೧೯೫೬;೭೨)[೫೫] ವೊಂದು ತಿಳಿಸುತ್ತದೆ. ಕ್ರಿ.ಶ.೧೧೮೪ ರಲ್ಲಿ ತೈಲಪನ ಮಗ ನಾಲ್ಕನೇ ಸೋಮೇಶ್ವರನು ತನ್ನ ತಂದೆಯ ಕಾಲದಲ್ಲಿ ಕೈ ಬಿಟ್ಟು ಹೋಗಿದ್ದ ಚಾಲುಕ್ಯ ಸಿಂಹನನ್ನು ಪುನ; ವಶಪಡಿಸಿಕೊಂಡನು. ಆದರೆ ಕೆಲದಿನಗಳಲ್ಲಿಯೇ ಚಾಲುಕ್ಯ ಪ್ರಭುತ್ವ ಕೊನೆಗೊಂಡಿತು.

ದೇವಗಿರಿಯ ಸೇವುಣರು

ಚಾಲುಕ್ಯ ಮತ್ತು ಕಳಚೂರ್ಯರ ನಂತರ ದೇವಗಿರಿಯ ಸೇವುಣರು ಪ್ರಬಲರಾಗಿ ಅಧಿಕಾರಕ್ಕೆ ಬಂದರು. ೫ನೇ ಬಿಲ್ಲಮನು ಚಾಲುಕ್ಯ ಸೋಮೇಶ್ವರನಿಂದ ಸ್ವತಂತ್ರನಾಗಿ ಸೇವುಣರ ಪರಮಾಧಿಕಾರವನ್ನು ಸ್ಥಾಪಿಸಿದ್ದನು. ಆ ಗಂಗಾವತಿ ಪ್ರದೇಶದ ಕೊಪ್ಪಳವನ್ನೊಳಗೊಂಡು ಬೆಳ್ವಲ ಸೀಮೆ ಇವನ ವಶವಾಯಿತು. ಇವನ ಕಾಲದ ಕ್ರಿ. ಶ. ೧೧೯೧ರ ಶಾಸನ (ಎ.ಆರ್, ಆಯ್, ಇ;೧೯೫೩,೫೪, ನಂ, ೨೪೦)[೫೬] ವೊಂದು ಕರಡಿಕಲ್., (ಲಿಂಗಸ್ಗೂರು ತಾ) ನಲ್ಲಿ ದೊರತಿದೆ. ಸೇವುಣರ ಪ್ರಸಿದ್ದ ದೊರೆಯಾದ ಎರಡನೇ ಸಿಂಗಣನ ಕಾಲದ ಶಾಸನಗಳು ಗಂಗಾವತಿ ಪ್ರದೇಶದ ಸಂಕನೂರು (ದೇಸಾಯಿ. ಪಿ. ಬಿ.೧೯೫೬; ೩೦)[೫೭] ಕುಕನೂರ (೧೯೫೬;೫೦)[೫೮] ಕೊಪ್ಪಳ (೧೯೫೬;೧೩)[೫೯] ಮತ್ತು ಮುದಗಲ್ (ಎ. ಆರ್, ಆಯ್.ಇ;೧೯೫೩.೫೪ ನಂ.೨೫೩)[೬೦] ಗಳಲ್ಲಿ ದೊರತಿವೆ. ಕ್ರಿ.ಶ. ೧೩೧೩ ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ಸೇನಾಪತಿ ಮಲ್ಲಿಕಾಫರನು

ದೇವಗಿರಿಗೆ ಮುತ್ತಿಗೆ ಹಾಕಿ ೩ನೇ ಸಿಂಘಣನನ್ನು ಸೋಲಿಸಿದನು. ೧೩೧೮ರ ವೇಳೆಗೆ ಯಾದವ ಪ್ರಭುತ್ವ ಕೊನೆಗೊಂಡಿತು.

ಕುಮ್ಮಟದ ಅರಸರು (ಹೊಸಮಲೆ ದುರ್ಗಾ)

ಈ ಅರಸರಿಗೆ ಸಂಬಂಧಿಸಿದ ಎರಡು ಶಾಸನಗಳು ಕುಮ್ಮಟ ದುರ್ಗಾದಲ್ಲಿ ದೊರೆತಿವೆ. ಅವುಗಳಲ್ಲಿ ವೀರಗಲ್ಲು ಒಂದು ಶಾಸನವು ಕಾಲಯುಕ್ತವಾಗಿದೆ. ಕ್ರಿಶ ೧೩೧೫ ರಲ್ಲಿ ಸುರತಾಣದಳವು ನೇಮಿಯ ನೇತೃತ್ವದಲ್ಲಿ ಕುಮ್ಮಟದುರ್ಗಾಕ್ಕೆ ಮುತ್ತಿಗೆ ಹಾಕಿದಂತೆ ತಿಳಿಸುತ್ತದೆ. ಈ ಯುದ್ಧದಲ್ಲಿ ಗಂಡೆಸಿಂಗನಾಯ್ಕ ಮತ್ತು ಅವನ ತಮ್ಮ ಕಾಮಿನಾಯರು ಸತ್ತಿರುವುದನ್ನು ಉಲ್ಲೇಖಿಸುತ್ತದೆ. (ಕೊಪ್ಪಳ, ೧೬೪-೧೬೫). ಈ ಅರಸರು ಹಾಕಿಸಿರುವ ಹೆಚ್ಚಿನ ಶಾಸನಗಳು ಈ ಪ್ರದೇಶದಲ್ಲಿ ದೊರೆಯದಿದ್ದರೂ ಈ ವಂಶದ ಕುಮಾರ ರಾಮನನ್ನು ಕುರಿತು ಬಂದಿರುವ ಕಾವ್ಯಗಳ ಆಧಾರದ ಮೇಲೆ ಇವರ ವಂಶಾವಳಿಯನ್ನು ರಚಿಸಬಹುದಾಗಿದೆ. ಕ್ರಿ.ಶ. ೧೫೨೧ ಹೊಸಮಲೆ (ರಾಮನಮಲೆ) ಶಾಸನ ಇವರ ವಂಶಾವಳಿಯನ್ನು ಹೀಗೆ ಹೇಳುತ್ತದೆ (ಸಂಡುರು.೧೪)

ಮುಮ್ಮಡಿಸಿಂಗ

|

ಕಂಪಿಲರಾಯ ಖಂಡೆಯರಾಯ

|

ಕುಮಾರರಾಮ

|

ಮುಮ್ಮಡಿ ಸಿಂಗನ ಮಗ[೧]

ಇವರಲ್ಲಿ ಮುಮ್ಮಡಿಸಿಂಗ, ಈ ರಾಜ್ಯದ ಸ್ಥಾಪಕನಾಗಿದ್ದನು. ಇವನ ರಾಜಧಾನಿ ಹೊಸ ಮಲೆಯಾಗಿತ್ತು. ಇವನ ನಂತರ ಅವನ ಮಗ ಕಂಪಿಲರಾಯನು ಅಧಿಕಾರಕ್ಕೆ ಬರುತ್ತಾನೆ. ಇವನು ತನ್ನ ರಾಜಧಾನಿಯನ್ನು ಹೊಸಮಲೆಯಿಂದ ಕುಮ್ಮಟದುರ್ಗಕ್ಕೆ ಸ್ಥಳಾಂತರಿಸುತ್ತಾನೆ. ಇವನ ಪತ್ನಿ ಗುಜ್ಜಲ ವಂಶದ ಹರಿಹರದೇವಿ ಕಾಲದಲ್ಲಿ ನೇಮಿಖಾನನು ಕುಮ್ಮಟದುರ್ಗದ ಮೇಲೆ ದಾಳಿ ಮಾಡುತ್ತಾನೆ. ಆಗ ನೇಮಿಖಾನ ಸೋಲುತ್ತಾನೆ. ಇವನ ನಂತರ ಅವನ ಮಗ ಕುಮಾರ ರಾಮನು ಅಧಿಕಾರಕ್ಕೆ ಬರುತ್ತಾನೆ. ಇವನನ್ನು ಹೆಸರಿಸುವ ಶಾಸನಗಳು ದೊರೆಯದಿದ್ದರೂ ಇವನ ಹೆಸರಿನಲ್ಲಿ ಕಟ್ಟಿದ ದೇವಾಲಯಗಳ ಬಗ್ಗೆ ಮಾಹಿತಿಸಿಗುತ್ತದೆ. ವಿಜಯನಗರದ ಅರಸ ವಿರೂಪಾಕ್ಷನು ಆಗೋಲಿಯ ರಾಮನಾಥ ದೇವರಿಗೆ ಹರಿವಾಣ ನೀಡಿದಂತೆ ಹೇಳಿದ್ದು ಈ

ಶಾಸನದಲ್ಲಿ ಈ ದಾನಕ್ಕೆ ತಪ್ಪಿದವರು "ರಾಮನಾಥನ ಲೆಂಕರು" ಎಂಬ ಉಲ್ಲೆಖವಿದೆ. ಇದು ಕುಮಾರ ರಾಮನ ನೆನಪಿಗಾಗಿ ಕಟ್ಟಿದ ದೇವಾಲಯವೇ ಆಗಿದೆ. ಕೃಷ್ಣದೇವರಾಯನ ಕಾಲದಲ್ಲಿ ಈ ಕುಮಾರ ರಾಮನ ಆರಾಧನೆಗೆ ಸಂಬಂಧಿಸಿದಂತೆ ಕೋನೇರಿನಾಯ್ಕನ ಮಗಳು ಗೋಪಯಿ ಹೊಸಮಲೆಯಲ್ಲಿ ರಾಮನಾಥನ ದೇವಾಲಯ ಕಟ್ಟಿಸಿದ್ದಲ್ಲದೆ ಅದಕ್ಕೆ ದಾನ ನೀಡುತ್ತಾಳೆ (ಸಂಡೂರು.೧೪) ಆಕೆ ಕುಮ್ಮಟ ದುರ್ಗದಲ್ಲಿಯೂ ರಾಮನಾಥ ದೇವಾಲಯವನ್ನು ನಿರ್ಮಿಸಿರಬೇಕು. (ಕೊಪ್ಪಳ.೧೬೭) ಆನೆಗೊಂದಿಯಲ್ಲಿಯು ರಾಮನಾಥನ ದೇವಾಲಯವಿದ್ದ ಉಲ್ಲೇಖವಿದೆ.[೨] (ಕೊಪ್ಪಳ೧೬೬)

ಕುಮಾರ ರಾಮನನ್ನು ಕುರಿತು ಬರೆದಿರುವ ಕಾವ್ಯಗಳ ಆಧಾರದ ಮೇಲೆ ಹೇಳುವುದಾದರೆ ದಕ್ಷಿಣ ಭಾರತದಲ್ಲಿ ದೆಹಲಿ ಸುಲ್ತಾನ ರಾಜ್ಯ ಸ್ಥಾಪನೆಯಾದ ನಂತರ ಖಿಲ್ಜಿ ಮನೆತನದ ಅಲ್ಲಾವುದ್ದೀನ್ ಖಿಲ್ಜಿ ದಕ್ಷಿಣದೆಡೆಗೆ ಗಮನಹರಿಸಿದನು. ಆತನ ದಂಡಾಧಿಪತಿ ಮಲ್ಲಿಕಾಫರ್‌ನ ದಾಳಿಗೆ ದಕ್ಷಿಣದ ಎಲ್ಲಾ ರಾಜ್ಯಗಳು ನಲುಗಿದರೂ ಗಂಗಾವತಿ ಪ್ರದೇಶವನ್ನೊಳಗೊಂಡಿದ್ದ ಕುಮ್ಮಟ ರಾಜ್ಯ ದಾಳಿಯನ್ನು ಎದುರಿಸುವಲ್ಲಿ ವಿಫಲನಾಗುತ್ತಾನೆ. ತಮ್ಮ ಕಾರ್ಯ ಸಾಹಸಗಳಿಗೆ ಜನಾನುರಾಗಿಯಾಗಿರುವ ಆ ರಾಜ್ಯದ ಕಂಪಿಲರಾಯ ಮತ್ತು ಅವನ ಮಗ ಕುಮಾರ ರಾಮನು ಕ್ರಿ. ಶ. ೧೩೨೭ ರಲ್ಲಿ ನಡೆದ ಮಹ್ಮದ ಬಿನ್ ಸುಲ್ತಾನನ ದಾಳಿಯಲ್ಲಿ ಹೋರಾಡುತ್ತಾ ವೀರ ಮರಣ ಹೊಂದಿದರು. ನಂತರ ಈ ಪ್ರದೇಶ ದೆಹಲಿ ಸುಲ್ತಾನನ ವಶವಾಯಿತು.

ವಿಜಯನಗರದ ಅರಸರು

ದಕ್ಷಿಣ ಭಾರತದಲ್ಲಿ ಕ್ರಿ. ಶ ೧೩೩೬ ವರಗೆ ಮುಸಲ್ಮಾನರ ದಾಳಿಯ ಅವ್ಯಾಹತವಾಗಿ ನಡೆದುಬಂದಿತು. ಇಲ್ಲಿನ ರಾಜ್ಯಗಳು ಬಲಹಿನ ವಾಗಿದ್ದವು. ಈ ಅವಧಿಯಲ್ಲಿ ರಾಜಕೀಯ ಅನಾಯಕತ್ವ ತಲೆದೋರಿತು. ದೇವಗಿರಿಯ ಸೇವಣರು, ದ್ವಾರಸಮುದ್ರದ ಹೊಯ್ಸಳರು, ವಾರಂಗಲ್ಲಿ ಕಾಕತೀಯರು, ಉತ್ತರದಿಂದ ಬರುತ್ತಿದ್ದ ದಾಳಿಯನ್ನು ಎದುರಿಸಲಾರದೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು.

ಇಂತಹ ಸಂದರ್ಭದಲ್ಲಿ ಹೊಯ್ಸಳರ ಆಡಳಿತದಲ್ಲಿ ಅಧಿಕಾರಿಗಳಾಗಿದ್ದ ಸಂಗಮನ ಮಕ್ಕಳು ಕ್ರಿ.ಶ. ೧೩೩೬ರಲ್ಲಿ ಹೊಸದೊಂದು ರಾಜ್ಯ ಸ್ಥಾಪನೆ ಮಾಡಿ ರಾಜಕೀಯ ಅಸ್ಥಿರತೆಯನ್ನು ಕೊನೆಗಾಣಿಸಿದರು. ಆನೆಗೊಂದಿ ಮೊದಲ ರಾಜಧಾನಿಯಾಗಿತ್ತು. ನಂತರ ವಿಜಯನಗರ ಇವರ ರಾಜಧಾನಿಯಾಯಿತು. ಸಂಗಮ ಮನೆತನದ ಕಾಲದಲ್ಲಿ ಅದರಲ್ಲೂ ವಿಶೇಷವಾಗಿ ಪ್ರೌಢ ದೇವರಾಯನ ಕಾಲದಲ್ಲಿ ಗಂಗಾವತಿ ಪ್ರದೇಶದಲ್ಲಿ ಅನೇಕ ನಿರ್ಮಾಣ ಚಟುವಟಿಕೆಗಳು ನಡೆದವು. ಹಿರೇಜಂತಗಲ್ ಪ್ರಸನ್ನ ಶ್ರೀ ಪಂಪಾವಿರೂಪಾಕ್ಷ ದೇವಾಲಯ ಈ ಕಾಲದ ಪ್ರಮುಖ ನಿರ್ಮಾಣ ವಾಗಿದೆ. ಹಾಗೂ ಬಸಪಟ್ಟಣ, ಚಿಕ್ಕಜಂತಕಲ್‌ನಲ್ಲಿ ಬೃಹತ್ ಕೆರೆಗಳನ್ನು (ರಾಯರ್ ಕೆರೆ) ನಿರ್ಮಿಸಿದ್ದಾನೆ. ಚಿಕ್ಕಬೆಣಕಲ್‌ನಲ್ಲಿ ಇವನ ಒಂದು ಶಿಲಾಶಾಸನವಿದೆ. ಅವನ ಕಾಲದಲ್ಲಿಯೇ

ಕನಕಗಿರಿಯಲ್ಲಿ ಗುಜ್ಜಲವಂಶದ ಪರಸಪ್ಪ ನಾಯಕನು ಪಾಳೆಯಪಟ್ಟನ್ನು ಪ್ರಾರಂಭಿಸಿದನು. ೧೩೪೭ ರಲ್ಲಿ ಹರಿಹರನ ಕಾಲದಲ್ಲಿ ಬೈಚದಂಡ ನಾಯಕನ ಮಗ ಇರುಗಪ ದಂಡ ನಾಯಕನು ಆನೆಗೊಂದಿಯಲ್ಲಿ ಬಸದಿಯೊಂದನ್ನು ನಿರ್ಮಿಸಿದ್ದಾನೆ.[೬೩]

ವಿಜಯನಗರ ಸಾಮ್ರಾಜ್ಯಕ್ಕೆ ಉತ್ತರ ದಿಕ್ಕಿನ ಮುಖ್ಯ ಪ್ರವೇಶ ರಹದಾರಿ ಗಂಗಾವತಿ ತಾಲೂಕಿನಲ್ಲಿತ್ತೆಂಬುದು ಗಮನಾರ್ಹ. ಬಸಾಪಟ್ಟಣ, ಸಂಗಾಪುರ, ಮಲ್ಲಾಪುರ ನಡುವೆ ಉತ್ತರ ದಿಕ್ಕಿನ ಪ್ರವೇಶ ದ್ವಾರ [ಶಿಥಿಲವಾಗಿದೆ] ಈಚೆಗೆ ಬೆಳಕಿಗೆ ಬಂದಿದೆ. ಗಂಗಾವತಿ ತಾಲೂಕಿಗೆ ಸಂಬಂಧಿಸಿದಂತೆ ವಿಜಯನಗರ, ವಿಜಯನಗರೋತ್ತರ ಕಾಲದ ಚರಿತ್ರೆ ಎಂದರೆ ಅದು ಪಾಳೆಪಟ್ಟಿನ ಚರಿತ್ರೆ ಎನ್ನಬಹುದು. ಹೀಗೆ ಗಂಗಾವತಿ ತಾಲೂಕಿನಲ್ಲಿ ನಮಗೆ ವಿಜಯನಗರ ಕಾಲದ ಹಲವಾರು ಶಾಸನಗಳು ಲಭ್ಯವಾಗುವುದರಿಂದ ಈ ಪ್ರದೇಶದಲ್ಲಿ ಇವರ ಆಳ್ವಿಕೆ ಇತ್ತೆಂದು ಸ್ಪಷ್ಟವಾಗುತ್ತದೆ.

ಉಪರಾಜಮನೆತನಗಳ ಆಳ್ವಿಕೆ

ವಿಪ್ರನಾರಾಯಣದ ನೊಳಂಬ ಪಲ್ಲವರು

ಕ್ರಿ. ಶ. ೯೭೩ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿದ ಕಲ್ಯಾಣ ಚಾಲುಕ್ಯರು ಅಧಿಕಾರಕ್ಕೆ ಬಂದ ಮೇಲೆ ನೊಳಂಬವಾಡಿಯ ಮೇಲು ಅವರ ಸಾರ್ವಭೌಮತ್ವ ಸ್ಥಾಪಿತವಾಯಿತು. ರಾಷ್ಟ್ರಕೂಟರ ಸಾಮಂತರಾಗಿದ್ದ ನೊಳಂಬ ಪಲ್ಲವರು ಚಾಲುಕ್ಯರ ಸಾರ್ವಭೌಮತ್ವವನ್ನು ಒಪ್ಪಿಕೊಂಡು ನೊಳಂಬವಾಡಿ-೩೨೦೦೦ ಪ್ರದೇಶವನ್ನು ನೂತನ ರಾಜಧಾನಿ ಕಂಪ್ಲಿಯಿಂದ ಆಳುತ್ತಾರೆ.

ಕಂಪ್ಲಿ ಪ್ರದೇಶ ಒಳಗೊಂಡಿದ್ದ ನೊಳಂಬವಾಡಿ ಪ್ರಸ್ತುತ ಬಳ್ಳಾರಿ ಜೊತೆಗೆ ಚಿತ್ರದುರ್ಗ ತುಮಕೂರು ಜಿಲ್ಲೆಯ ಕೆಲವು ಗ್ರಾಮಗಳನ್ನು, ಆಂಧ್ರಪ್ರದೇಶದ ಅನಂತಪುರ ಕರ್ನೂಲ್ ಜಿಲ್ಲೆಯ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಸಣ್ಣ ವಿಭಾಗವಾಗಿದ್ದ ಈ ಪ್ರಾಂತ್ಯ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ೩೨೦೦೦ ಗ್ರಾಮಗಳನ್ನು ಒಳಗೊಂಡು ದೊಡ್ಡ ವಿಭಾಗವಾಯಿತು.

ತಮಿಳಿನಲ್ಲಿ 'ನೊಳಂಬವಾಡಿ' ಎಂದರೆ ದೊಡ್ಡ ವಿಭಾಗ ಎನ್ನುವ ಅರ್ಥಉಂಟು. ನೊಳಂಬವಾಡಿ, ಆಳುತ್ತಿದ್ದ ಪಲ್ಲವರನ್ನು ನೊಳಂಬರು ಎಂದು ಕರೆಯಲಾಗಿದೆ. ಬಾದಾಮಿ ಚಾಲುಕ್ಯರು ಹಾಗೂ ತಲಕಾಡಿನ ಗಂಗರ ಕಾಲದಲ್ಲಿ ನೊಳಂಬರು ಸಾಮಂತರಾಗಿ ನೊಳಂಬವಾಡಿಯನ್ನು ಆಳುತಿದ್ದರು ಹೆಂಜರು(ಆಂಧ್ರಪ್ರದೇಶದ ಮಡಕಶಿರ ತಾಲೂಕಿನ ಈಗಿನ) ಪ್ರದೇಶವನ್ನು ರಾಜಧಾನಿಯನ್ನಾಗಿ ರಾಷ್ಟ್ರಕೂಟರ ಮೂರನೇ ಗೋವಿಂದ ಗಂಗರನ್ನು ಸೋಲಿಸಿದ ನಂತರ ನೊಳಂಬರು ರಾಷ್ಟ್ರಕೂಟರ ಸಾರ್ವಭೌಮವನ್ನು ಸ್ವೀಕರಿಸಿದರು. ೯ನೆಯ ಶತಮಾನದ ಕೊನೆಯಲ್ಲಿದ್ದ ಮಹೇಂದ್ರ ನೊಳಂಬವಾದಿ ರಾಜನು ಈ ಮನೆತನದ ಪ್ರಮುಖ ಅರಸನಾಗಿದ್ದನು.

ಮಹೇಂದ್ರನು ರಾಷ್ಟ್ರಕೂಟರ ಸಾರ್ವಭೌಮತ್ವದಿಂದ ಮುಕ್ತನಾಗಲು ಯತ್ನಿಸಿದನು. ಬಾಣರನ್ನು ಸೋಲಿಸಿ ಸೇಲಂ ಜಿಲ್ಲೆಯ ಕೆಲವು ಪ್ರದೇಶಗಳನ್ನು ಹಿಡಿಯುತ್ತಾನೆ. ಗಂಗರೊಂದಿಗೆ ನಡೆಸಿದ ಕದನದಲ್ಲಿ ಇವನು ಮರಣ ಹೊಂದಿದನು. ಇವನ ಮಗನಿಗೆ ಅಯ್ಯಪ್ಪ ದೇವನು ಕೂಡ ಯುದ್ಧದಲ್ಲಿ ಅಸುನೀಗಿದನು ನಂತರ ಅವನ ಮಗ ಅಣ್ಣಿಗನು ಕ್ರಿ.ಶ. ೯೨೨/೯೩೩ರ. ಸಂದರ್ಭದಲ್ಲಿ ಅಧಿಕಾರಕ್ಕೆ ಬಂದನು. ಇವನು ಕೂಡ ಗಂಗ ಮತ್ತು ರಾಷ್ಟ್ರಕೂಟರೊಂದಿಗೆ ದ್ವೇಷ ಹೊಂದಿದ್ದನು. ರಾಷ್ಟ್ರಕೂಟರ ಮೂರನೆಯ ಕೃಷ್ಣನು ಇವನ ಸೋಲಿಸಿ ಹತ್ತಿಕ್ಕುತ್ತಾನೆ. ಇವನ ನಂತರ ಬಂದ ನನ್ನಿ ನೊಳಂಬನು ಕೂಡ ರಾಷ್ಟ್ರಕೂಟರ ಮಾಂಡಲೀಕನಾಗಿದ್ದನು.

ಕ್ರಿ. ಶ. ೯೭೩ ರಲ್ಲಿ ಚಾಲುಕ್ಯರು ರಾಷ್ಟ್ರಕೂಟರನ್ನು ಅಂತ್ಯಗೊಳಿಸಿ ಅಧಿಕಾರಕ್ಕೆ ಬರಲು ನೊಳಂಬರು ಚಾಲುಕ್ಯರ ಅಧೀನದಲ್ಲಿ ಮುಂದುವರಿಯುತ್ತಾರೆ. ಆದರೆ ರಾಜಧಾನಿಯನ್ನು ಹೆಂಜೇರುವಿನಿಂದ ಕಂಪಲಿಗೆ ವರ್ಗಾಯಿಸಿದ.[೧೪] ನನ್ನಿನೊಳಂಬನ ತರುವಾಯ ಬಂದ ವೀರನೊಳಂಬನು ಪ್ರಾಯಶ; ಕಂಪಲಿಯಿಂದಾಳಿದ ಮೊದಲ ನೊಳಂಬ ದೊರೆಯಿರಬೇಕು. ಕಂಪ್ಲಿಗೆ ಸುತ್ತಲಿನ ಸ್ಥಳಗಳಲ್ಲಿ ದೊರೆತಿರುವ ಶಿಲಾ ಶಾಸನಗಳಲ್ಲಿ ಅವರು ತಮ್ಮನ್ನ ಪಾರಂಪರಿಕ ವಿಶೇಷಣಗಳಾದ "ಶ್ರೀಪೃಥೀವಲಬ", "ಪಲ್ಲವಾನ್ವಂಯು", "ಪಲ್ಲವಕುಲತಿಲಕ", ಕಾಂಚೀಪುರವರಾಧೀಶ್ವರರೆಂದು ಕರೆದುಕೊಂಡಿದ್ದಾರೆ.[೧೫] ವೀರನೊಳಂಬನ ಕಾಲದ ಕ್ರಿ. ಶ. ೯೮೧ ರ ಶಾಸನವೊಂದು ಕಂಚುಗಾರ ಬೆಳಗಲ್ಲಿನಲ್ಲಿದ್ದು, ಅವನ ಮತ್ತು ಹೆಂಡತಿ ರೇವಲದೇವಿಯಕ್ಕಳ ಬಗ್ಗೆ ಉಲ್ಲೇಖಿಸುತ್ತದೆ.[೧೬] ಇವನ ನಂತರ ತ್ರೈಲೋಕ್ಯಯಲ್ಲಿ ದೊರೆಗಳು ತಮ್ಮ ಸಾರ್ವಭೌಮ ಪ್ರಭುಗಳ (ಚಾಲುಕ್ಯರ) ಬಿರುದುಗಳನ್ನು ತಾವು ಸಹ ಬಳಸಿ ಕೊಂಡಿರುವರು. ಈ ವಂಶದ ನರಸಿಂಘ ದೇವನಿಗೆ ಘಂಟೆಯಾಕಾರದ, ಚಿತ್ರವೆಡಂಗಗಳೆಂಬ, ಹೆಸರುಗಳಿದ್ದವು.[೧೭] ಇವನ ರಾಣಿ ಮಬ್ಬರೆಸಿಯ ಪಂಪಾಕ್ಷೇತ್ರದ (ಹಂಪಿ) ಮಹಾಕಾಲದೇವರಿಗೆ, ಕೆಲವು ತೆರಿಗೆಗಳನ್ನು ಬಿಟ್ಟಳೆಂದು ಕ್ರಿ ಶ. ೧೦೧೪ರ ಗೊನಹಾಳ ಶಾಸನಗಳಿಂದ ತಿಳಿಯುತ್ತದೆ.[೧೮] ಈ ರಾಜದಂಪತಿಗಳಿಗೆ ರೇವಲದೇವಿ ಎಂಬ ಮಗಳಿದ್ದಳು. ಈಕೆಯನ್ನು ಚಾಲುಕ್ಯ ಸಾರ್ವಭೌಮ ಎರಡನೆಯ ಜಯಸಿಂಹನು ವರಿಸಿದ್ದನೆಂದು ಬಾಗಳಿ ಶಾಸನ ವಿವರಿಸುತ್ತದೆ. ನರಸಿಂಘದೇವನ ತರುವಾಯ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾಡಿ ಉದಯದಿತ್ಯನು ಅಧಿಕಾರಕ್ಕೆ ಬಂದನು, ಇವನು ನೊಳಂಬವಾಡಿ–೩೨,೦೦೦. ಜೊತೆಗೆ ಕದಂಬಗಳಗೆ ೧,೦೦೦. ಕೊಗಳಿ ೫೦೦, ಕುದಿಯಪಗವಿ–೭೦, ಕರವಿಡಿ–೩೦ ಪ್ರದೇಶಗಳನ್ನು ಕೂಡ ಆಳಿದನು.[೧೯] ಕ್ರಿ. ಶ. ೧೦೧೮ ರ ಒಂದು ಶಾಸನವು ಇವನ ಚಾಲುಕ್ಯ ಜಗದೇಕಮಲ್ಲಾ ಎರಡನೆಯ ಜಯಸಿಂಹದೇವ ಕ್ರಿ. ಶ. ೧೦೧೫– ೧೦೪೨) ನ ಸಾಮಂತನಾಗಿ ತುಂಗಭದ್ರೆ ತೀರದ ಕಂಪಲಿ ಬೀಡಿನಿಂದ ಆಳಿದನೆಂದು ತಿಳಿಸುತ್ತದೆ.[೨೦] ಇದೇ ವಿಷಯವನ್ನು ಮತ್ತು ಇವನು ಪಂಪಾ ಕ್ಷೇತ್ರಕ್ಕೆ ಭೇಟಿ ನೀಡಿದ ಸಂಗತಿಗಳನ್ನು ಬಾಗಳಿ.[೨೧] ಮತ್ತು ಹಿರೇ ಮ್ಯಾಗಳಗೇರಿ.[೨೨] ಗಳಲ್ಲಿ ದೊರೆಯು ನಾಲ್ಕು ಶಾಸನಗಳು ಉಲ್ಲೇಖಿಸುತ್ತವೆ. ಮಲ್ಲಯ್ಯನ ಗುಡ್ಡದ ಮೈಲಾರಪ್ಪನ ದೇವಾಲಯ ಹಾಗು ಕಂಪಲಿಯ ಸೋಮೇಶ್ವರ ದೇವಾಲಯಗಳನ್ನು

ಇವನೇ ಕಟ್ಟಿಸಿರಬೇಕೆಂದು ತೋರುತ್ತದೆ. ಇವನಿಗೆ ಪಲ್ಲವ, ಪೆರ್ಮಾನಡಿ.[೬೩] ಜಗದೇಕಮಲ್ಲ ನೋಳಂಬ ಪೆರ್ಮಾನಡಿದೇವ ಎಂದು ಕರೆಯಲಾಗುತ್ತಿತ್ತು.[೬೪] ಇವನು ಗಂಗಾವತಿ ಬಳಿ ತುಂಗಭದ್ರ ನದಿ ತೀರದಲ್ಲಿ ವಿಪ್ರನಾರಾಯಣ (ಈಗಿನ ವಿಪ್ರ ಎಂಬ ಹಾಳುಗ್ರಾಮ) ಎಂಬ ಉಪರಾಜಧಾನಿಯನ್ನು ಕಟ್ಟಿ ಆಡಳಿತ ನಡೆಸಿದ ವಿಪ್ರದಲ್ಲಿ ಪ್ರಸ್ತುತ ಹಾಳುಬಿದ್ದ ದೇವಾಲಯಗಳು ಹಾಗೂ ಶಿಲಾಶಾಸನಗಳಿವೆ.[೬೫]

ಆನೆಗೊಂದಿ ಅರಸರು

ಆನೆಗೊಂದಿ ಗಂಗಾವತಿ ತಾಲೂಕಿನ ಕೊಪ್ಪಳ ಜಿಲ್ಲೆಗೆ ಸೇರಿದ ಪ್ರದೇಶ. ತಾಲೂಕು ಕೇಂದ್ರದಿಂದ ಸುಮಾರು ೧೨ ಕಿ. ಮೀ. ದೂರದಲ್ಲಿ ದಕ್ಷಿಣಕ್ಕಿದೆ. ತುಂಗಭದ್ರಾ ನದಿಯ ಉತ್ತರ ದಂಡೆಯ ಮೇಲಿದೆ. ಪ್ರಕೃತಿಯ ರಮಣೀಯವಾದ ಬೆಟ್ಟ ಸಾಲುಗಳು, ಹಾಸುಗಲ್ಲು ಹಾಗೂ ಹೆಬ್ಬಂಡೆಗಳಿಂದ ಆವೃತ್ತವಾಗಿದೆ. ಈ ಪ್ರದೇಶ ಆದಿ ಮಾನವನ ನೆಲೆಯಾಗಿತ್ತೆಂದು ವಿದ್ವಾಂಸರು ಇಲ್ಲಿ ಕಂಡುಬಂದ ಕೆಲವು ಗವಿಚಿತ್ರಗಳು, ಕಲ್ಲಿನ ಆಯುಧಗಳ ಆಧಾರದ ಮೇಲೆ ಹೇಳುತ್ತಾರೆ. ವಿಜಯನಗರದ ಅರಸರು ಇಲ್ಲಿ ಆನೆಗಳನ್ನು ಕಟ್ಟುತ್ತಿದ್ದರಿಂದ ಇದಕ್ಕೆ ಆನೆಗೊಂದಿ ಎಂದು ಹೆಸರು ಬಂದಿತೆಂದು ಹೇಳಲಾಗುತ್ತದೆ. ಶಾಸನಗಳಲ್ಲಿ ಇದನ್ನು ಕುಂಜರ ಕೋಣ, ಹಸ್ತಿನಾವತಿ ಎಂತಲೂ ಕರೆಯಲಾಗಿದೆ. ಆನೆಗೊಂದಿಯಲ್ಲಿ ಕ್ರಿ.ಶ.ಸು. ೧೦-೧೧ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಅರಸ ಅಹವಮಲ್ಲ ಎರಡನೇ ತೈಲನ ಶಾಸನವೊಂದು ಪಂಪಾಸರೋವರದ ಬಳಿ ದೊರೆತಿದೆ. ವಿಯನಗರದ ಪತನ ನಂತರ ಅರವೀಡು ಸಂತತಿಯ ವಂಶಜರು ಆನೆಗೊಂದಿಯನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಆಳಿದರು. ಇವರ ಕಾಲದಲ್ಲಿ ಆನೆಗೊಂದಿ 'ನರಪತಿ ಸಂಸ್ಥಾನ' ವೆಂದು ಕರೆಯಲ್ಪಡುತ್ತಿತ್ತು.

ತ್ರೇತ್ರಾಯುಗದಲ್ಲಿ ಆನೆಗೊಂದಿಯನ್ನು ಕಿಷ್ಕಿಂದೆ ಎಂದು ಕರೆಯಲಾಗುತ್ತೆಂದು ಹೇಳಲಾಗುತ್ತದೆ.[೬೬] ಆಂಜನೇಯ ಜನ್ಮ ಸ್ಥಳವಾದ, ಅಂಜನಾದ್ರಿ ಬೆಟ್ಟ, ಹನುಮನ್ ಸ್ಥಳವು, ಸೇತುವೆ, ವಾಲಿಭಂಡಾರ, ವಾಲಿದಿಬ್ಬ, ವಾಲಿಕಷ್ಟ, ಶಬರಿಗುಹೆ ಹೀಗೆ ಅನೇಕ ಭೌತಿಕ ನಿದರ್ಶನಗಳಿಂದಾಗಿ ಇದು ಕಿಷ್ಕಿಂದಾ ಕ್ಷೇತ್ರವೆಂದು ಸ್ಥಳೀಯರು ಬಲವಾಗಿ ನಂಬುತ್ತಾರೆ. ಈ ಕಾರಣದಿಂದಲೇ ಆನೆಗೊಂದಿ ಪರಿಸರದಲ್ಲಿ ಎಲ್ಲೆಂದರಲ್ಲಿ ಆಂಜನೇಯ ದೈವಗಳನ್ನು ಕಾಣಬಹುದಾಗಿದೆ. ಈ ಬಗ್ಗೆ ಅಚ್ಚರಿ ಮೂಡಿಸಬಹುದಾದಂತಹ ಐತಿಹ್ಯಗಳು ಸಾಕಷ್ಟಿವೆ. ಆನೆಗೊಂದಿಯ ಕೇವಲ ಪ್ರಾಗಿತಿಹಾಸ, ಪೌರಾಣಿಕ ಹಿನ್ನೆಲೆಯನ್ನು ಮಾತ್ರ ಹೊಂದಿರದೆ ವಿಜಯನಗರದ ಕಾಲಕ್ಕಿಂತಲೂ ಸುಮಾರ ೬೦೦ ವರ್ಷಗಳ ಪೂರ್ವದ ಇತಿಹಾಸವನ್ನು ಹೊಂದಿದೆ ಎಂದು ಚೀನಾದ ವಿದೇಶಿ ಪ್ರವಾಸಿಗನಾದ ಹ್ಯೂಯನ್‌ತ್ಸಾಂಗನು ತಮ್ಮ ಪ್ರವಾಸ ಕಥನದಲ್ಲಿ ಬರೆದಿದ್ದಾರೆ.[೬೭] ಆನೆಗೊಂದಿಯಲ್ಲಿ ವಿಜಯನಗರದ ಅರಸರ ಪೂರ್ವದಲ್ಲಿ ಚಾಲುಕ್ಯರು,

ಹೊಯ್ಸಳರು, ಕಾಕತೀಯರು ಮತ್ತು ಕುಮ್ಮಟದರಸರು ಇಲ್ಲಿ ಆಳ್ವಿಕೆ ಮಾಡಿರುವುದು ದೊರೆತ ಆಕರಗಳಿಂದ ಸ್ಪಷ್ಟವಾಗುತ್ತದೆ.

ವಿಜಯನಗರ ಚರಿತೆ ಎನ್ನುವ ಗ್ರಂಥದಲ್ಲಿ ಆನೆಗೊಂದಿ ರಾಜರ ವಂಶಾವಳಿಯಿಂದ ಆಗಿನ ಕಲ್ಯಾಣಪುರ ಈಗಿನ ಆನೆಗೊಂದಿ, ರಾಜ್ಯವು ಉನ್ನತ ಮಟ್ಟದ ಚಾಲುಕ್ಯರು ರಾಜ್ಯಭಾರ ಮಾಡುತ್ತಾ ಕ್ರಿ. ಶ. ೧೦೧೪ ರಲ್ಲಿ ನಂದರಾಜರಿಂದ ಮಾತ್ರ ಇತಿಹಾಸದ ದಾಖಲೆಗಳು ಕಂಡು ಬಂದಿದ್ದು, ಆ ಹಿಂದಿ ಆಳ್ವಿಕೆ ಮಾಡಿದ ರಾಜರ ದಾಖಲೆಗಳು ಅಸ್ಪಷ್ಟವಾಗಿವೆ. ಕ್ರಿ ಶ. ೧೦೧೪ ರಲ್ಲಿ ಈ ವಂಶದ ನಂದರಾಜನು ಇಲ್ಲಿ ರಾಜ್ಯಭಾರ ಮಾಡುತ್ತಾ, ಈತನು ಜೈನ ಧರ್ಮದ ಪೋಷಕನಾಗಿದ್ದು, ಇವನು ಜೈನ ಧರ್ಮದ ಪ್ರಚಾರಕ್ಕೆಂದು. ಜೈನ ಬಸದಿಯನ್ನು ನಿರ್ಮಿಸಿದ್ದಾಗಿ ತಿಳಿಯುತ್ತದೆ. ಈತನು ಕ್ರಿ. ಶ.೧೦೧೪ ರಿಂದ ೧೦೭೬ ರವರಗೆ ರಾಜ್ಯಭಾರ ಮಾಡಿದ್ದಾಗಿ ತಿಳಿಯುತ್ತದೆ. ಈತನ ತರುವಾಯ ನಳರಾಜ. ಕ್ರಿ.ಶ. ೧೦೭೬ ರಿಂದ ೧೧೧೭ ರವರು, ಆಳ್ವಿಕೆ ಮಾಡುತ್ತಾನೆ ಈತನಿಗೆ ೧೦) ಬಿಜ್ಜಳ ೨) ವಿಜಯಧ್ವಜ ೩)ವಿಷ್ಣುವರ್ಧನರೆಂಬ ಮೂರು ಜನ ಮಕ್ಕಳಿದ್ದರೆಂದು ತಿಳಿದುಬರುತ್ತದೆ.

ವಿಜಯಧ್ವಜನು ಕ್ರಿ ಶ ೧೧೧೭ ರಿಂದ ೧೧೫೬ ರವರಗೆ ಜಾಣ್ಮೆಯಿಂದ ರಾಜ್ಯವಾಳುತ್ತಾ ತುಂಗಭಧ್ರಾ ನದಿಯಾಚೆ ದಕ್ಷಿಣಕ್ಕೆ ರಾಜ್ಯಭಾರವನ್ನು ವಿಸ್ತರಿಸಿ, ಒಂದು ಚಿಕ್ಕನಗರ ಸ್ಥಾಪನೆ ಮಾಡುತ್ತಾನೆ. ಅಂದಿನಿಂದ ಹಂಪಿ, ಆನೆಗೊಂದಿ ರಾಜ್ಯದ ಒಂದು (ಬಡಾವಣೆಯಾಗಿ) ಹಂಪಿ ನಗರವಾಗಿ ಪರಿವರ್ತನೆಯಾಯಿತು.[೭೮]

ವಿಜಯಧ್ವಜ ನಂತರ ಈತನ ಮಗ ಅನುವೇಮ ಕ್ರಿ. ಶ. ೧೧೫೬ ರಿಂದ ೧೧೭೯ ರವರಗೆ ರಾಜ್ಯವಾಳಿದರೆ, ಈತನ ಮಗ ನರಸಿಂಹ ದೇವರಾಯ ಕ್ರಿ. ಶ ೧೧೭೯ ರಿಂದ ೧೨೪೬ ರವರಗೆ ದೀರ್ಘಕಾಲ ರಾಜ್ಯವಾಳಿದನು. ಈತನು ಆನೆಗೊಂದಿಯಲ್ಲಿ ಸುತ್ತಮುತ್ತ ಹೆಬ್ಬಾಗಿಲುಗಳನ್ನು ನಿರ್ಮಿಸಿ ದ್ದರಿಂದ ಕಾವಲುಗಾರರನ್ನು ನೇಮಕ ಮಾಡುತ್ತಾನೆ. ಅಲ್ಲದೆ ಕೋಟೆ ಕಟ್ಟಲು ಪ್ರಾಮುಖ್ಯತೆಯನ್ನು ಕೊಟ್ಟನು, ಮೂಲ ಸೌಕರ್ಯ, ರಾಜ್ಯದ ಸ್ವಚ್ಛತೆಗೆ ವಿಶೇಷ ಗಮನ ಕೊಟ್ಟಿದ್ದಾಗಿ ಹಾಗೂ ವಿಪುಲವಾದ ಸಂಪತ್ತನ್ನು ಗಳಿಸಿದ್ದ, ಈ ವಿಪುಲವಾದ ಸಂಪತ್ತಿನ ಸಂಕೇತವೇ ಎರಡು ಆನೆಗಳ ಮಧ್ಯ ಗಜಲಕ್ಷ್ಮಿ ಇದ್ದು, ಗಜ, –ಎಂದರೆ ಆನೆ, ಗುಂದಿ ಎಂದರೆ ಕಟ್ಟಿ ಹಾಕುವುದು. ಈ ಕಾರಣಕ್ಕೆ ಇದನ್ನು ಆನೆಗೊಂದಿ ಎಂಬ ಹೆಸರು ಬಂದಿರಬೇಕೆಂದು ತರ್ಕಿಸಲಾಗಿದೆ.[೭೯]

ಶ್ರೀರಾಜ ನರಸಿಂಹದೇವರಾಯನ ಆಮಂತ್ರಣದ ಮೇರೆಗೆ ವೇದ ಗುಪ್ಪನೆಂಬ ಹಿಮಾಚಲ ಪ್ರಾಂತದವನು ಕಲ್ಯಾಣಪುರವೆಂಬ ಹೆಸರನ್ನು ಬದಲಿಸಿ ಕ್ರಿ.ಶ. ೧೧೭೯ ಹಾಗೂ ೧೨೪೬ರ ಮಧ್ಯ ಭಾಗದಲ್ಲಿ ಆನೆಗೊಂದಿಯೆಂದು ನಾಮಕರಣ ಮಾಡಿದನು. ಈತನ ನಂತರ ಮಗ ರಾಮದೇವರಾಯನು ಕ್ರಿ.ಶ. ೧೨೪೬ ರಿಂದ ೧೨೭೧ರ ವರಗೆ ರಾಜ್ಯವಾಳಿದರೆ ಈತನ ಮಗ ಕ್ರಿ.ಶ.೧೨೭೧ ರಿಂದ ೧೨೬೭ರ ವರಗೆ ರಾಜ್ಯವಾಳಿದ್ದಾಗಿ,[೮೦] ತರುವಾಯ ಶ್ರೀ ರಾಜ

ಜಂಬುಕೇಶವರಾಯ ಕ್ರಿಶ ೧೨೬೭ ರಿಂದ ೧೩೩೪ ರವರಗೆ ರಾಜ್ಯಭಾರ ಮಾಡುತ್ತಾನೆ. ಇವನ ಕಾಲದಲ್ಲಿ ದಿಲ್ಲಿಯ ಸುಲ್ತಾನ ಮಹಮ್ಮದ ಬಿನ್ ತೂಘಲಕ್ ದಂಡೆತ್ತಿ ಬಂದು ಅವನನ್ನು ಸೋಲಿಸುತ್ತಾನೆ. ಈ ಯುದ್ದಲ್ಲಿ ಶ್ರೀ ರಾಜ ಜಂಬುಕೇಶರಾಯನು ವೀರ ಸ್ವರ್ಗವನ್ನು ಅಪ್ಪುತ್ತಾನೆ. ಇಲ್ಲಿಗೆ ಹೊಯ್ಸಳ ರಾಜ್ಯ ಸಮಾಪ್ತಿಯಾಗುತ್ತದೆ.[೮೧] ನಂತರ ರಾಜ್ಯ ದಿಲ್ಲಿಯ ಸುಲ್ತಾನನ ವಶಪಡಿಸಿಕೊಂಡು ಆನೆಗೊಂದಿ ರಾಜ್ಯಕ್ಕೆ ಮಲ್ಲಿಕಾಫರ್‌ನನ್ನು ಮಹಮ್ಮದ ಬಿನ್ ತೊಘಲಕ್ ನೇಮಿಸುತ್ತಾನೆ, ದಿಲ್ಲಿಯಲ್ಲಿ ಆಂತರಿಕ ಕಲಹಗಳು ನಡೆದ ವಾರ್ತೆಯನ್ನು ತಿಳಿದು ಸುಲ್ತಾನನು ಸೈನ್ಯದೊಡನೆ ದಿಲ್ಲಿಗೆ ಮರುಳುತ್ತಾನೆ. ನಂತರ ದಿನಗಳಲ್ಲಿ ಆನೆಗೊಂದಿಯ ಕಾರುಬಾರಿಯಾದ ಮಲ್ಲಿಕಾಫರನು ತನ್ನ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾಗಲು ದಿಲ್ಲಿ ಸುಲ್ತಾನನು ಸ್ಥಳೀಯರ ಮಾಹಿತಿ ಪಡೆದು ಆನೆಗೊಂದಿ ರಾಜ್ಯವನ್ನು ಹರಿಹರನಿಗೆ ಸ್ವತಂತ್ರ ರಾಜ್ಯವನ್ನಾಗಿ ಒಪ್ಪಿಸುತ್ತಾನೆ.[೮೨]

ಪ್ರಥಮವಾಗಿ ಸಂಗಮ ವಂಶದ ಹರಿಹರ ಕ್ರಿ. ಶ. ೧೩೩೬ ರಲ್ಲಿ ಆನೆಗೊಂದಿಯ ಪಟ್ಟಣವನ್ನು ದೆಹಲಿಯ ಸುಲ್ತಾನ ಆದೇಶದ ಪ್ರಕಾರ ಮೊಟ್ಟ ಮೊದಲ ಅರಸನಾಗಿ ಆನೆಗೊಂದಿಯಿಂದ ರಾಜ್ಯಭಾರ ಮಾಡುತ್ತಾನೆ. ಆಗ ತಮ್ಮನಾದ ಬುಕ್ಕನು ಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಾನೆ. ನಂತರ ವಿದ್ಯಾನಗರವಾಗಿ ಅನಂತರ ರಾಜಧಾನಿಯಾಗಿ ವಿಜಯನಗರವು ದೊಡ್ಡ ಸಾಮ್ರಾಜ್ಯವಾಗಿ ಮುಂದುವರೆಯುತ್ತದೆ. ಸಂಗಮ, ಸಾಳುವ, ತುಳುವ, ಮತ್ತು ಅರವೀಡು ಎಂಬ ನಾಲ್ಕು ವಂಶಸ್ಥರಿಂದ ರಾಜ್ಯಭಾರ ನಡೆಯುತ್ತದೆ.[೮೩]

ಕ್ರಿ.ಶ. ೧೩೪೭ ರಲ್ಲಿ ಬಹುಮನಿ ರಾಜ್ಯ ಸ್ಥಾಪನೆಯಾಗಿ ಆನೆಗೊಂದಿಯ ಮೇಲೆ ಆಕ್ರಮಣಗಳು ಪ್ರಾರಂಭವಾಗಿದ್ದರಿಂದ ದೊರೆ ಬುಕ್ಕನು ಆನೆಗೊಂದಿಯನ್ನು ಬಿಟ್ಟು ಹಂಪಿಯಲ್ಲಿ ವಿಜಯನಗರ ಎನ್ನುವ ಹೊಸ ರಾಜಧಾನಿ ಕಟ್ಟಿ ಅಲ್ಲಿಗೆ ತೆರಳಿದನು.[೮೪] ಬುಕ್ಕರಾಯನು ಕ್ರಿ.ಶ. ೧೩೩೭ ರಲ್ಲಿ ಕಾಲವಶನಾದನು. ನಂತರ ಅವನ ಮಗ ಇಮ್ಮಡಿ ಹರಿಹರನ್ನು ಪಟ್ಟಕ್ಕೆ ತರಲಾಯಿತು. ಇಮ್ಮಡಿ ಹರಿಹರನು ರಾಜನಾದ ಮೇಲೆ ವಿದ್ಯಾರಣ್ಯರು ಹತ್ತು ವರ್ಷಕಾಲ ಮಾತ್ರ ಬದುಕಿದ್ದರು. ಆಗ ಅವರಿಗೆ ೧೦೮ ವರ್ಷಗಳು ವಯಸ್ಸು ಆಗಿತ್ತು. ಕ್ರಿ. ಶ. ೧೩೮೬ ರಲ್ಲಿ ಅಂದರೆ ಕ್ಷಯನಾಮ ಸಂವತ್ಸರದ ಜೇಷ್ಟ ಕೃಷ್ಣ ತ್ರಯೋದಶಿ ಶನಿವಾರ ಸರ್ವಜ್ಞ ತಮ್ಮ ಶರೀರವನ್ನು ತ್ಯಜಿಸಿದರು.೮೫ ಎರಡನೆಯ ದೇವರಾಯನು ಕ್ರಿ. ಶ. ೧೪೨೩ ರಿಂದ ಕ್ರಿ. ಶ. ೧೪೪೬ ರವಗೆ ರಾಜ್ಯವಾಳುತ್ತಾ ಆನೆಗೊಂದಿ ಪಟ್ಟಣಕ್ಕೆ ಶುದ್ದವಾದ ನೀರಿನ ವ್ಯವಸ್ಥೆ ಇರಲಲ್ಲಿ ದಕ್ಷಿಣಕ್ಕೆ ತುಂಗಾಭದ್ರ ನದಿಯ ಆಚೆ ವಿಜಯನಗರಕ್ಕೆ ನೀರಿನ ಕೊರತೆಯನ್ನು ನೀಗಿಸಲು ಕಲ್ಲಿನ ಸೇತುವೆಯನ್ನು ನಿರ್ಮಿಸಿ ವಿಜಯನಗರಕ್ಕೆ ನೀರಿನ ವ್ಯವಸ್ಥೆ ಮಾಡುತ್ತಾನೆ. ಈ ಸೇತುವೆಯನ್ನು ಈಗಲೂ ಕಾಣಬಹುದು.[೮೬] ರಾಜಧಾನಿ ಸ್ಥಾನವನ್ನು ಕಳೆದುಕೊಂಡು ನಂತರ ಆನೆಗೊಂದಿ ವಿಜಯನಗರ ಉತ್ತರ ದಿಕ್ಕಿನ ಹೊರ ಸೇನಾ ಠಾಣೆಯಾಗಿತ್ತು. ಇಲ್ಲಿ ಅರಸರ ಪರವಾಗಿ ಒಬ್ಬ ದಳವಾಯಿ ಇದ್ದನೆಂದು ಡೊಮಿಂಗೋಪೇಸ್ ಬರೆದಿದ್ದಾನೆ. ಸೇನಾಠಾಣಿಯ ಜೊತೆಗೆ ಆನೆಗೊಂದಿಯಲ್ಲಿ ಸುಭದ್ರವಾದ

ಸೆರೆಮನೆಯನ್ನು ಕೂಡಾ ಸ್ಥಾಪಿಸಲಾಗಿತ್ತು. ಈ ಸೆರೆಮನೆಯಲ್ಲಿಯೇ ಕೃಷ್ಣದೇವರಾಯನ ಮಗ ತಿರುಮಲನ ಹತ್ಯೆಯ ಆರೋಪಿಗಳಾದ ಮಂತ್ರಿ ಸಾಳ್ವ ತಿಮ್ಮ ಹಾಗೂ ಅವನ ಮಕ್ಕಳಾದ ತಿಮ್ಮದಂಡನಾಯಕ ಮತ್ತು ಸಗೋವಿಂದರಾಜ ಕಣ್ಣು ಕೀಳಿಸಿ ಬಂಧಿಸಲಾಗಿತ್ತು. ಅವರು ಈ ಸೆರೆಮನೆಯಲ್ಲಿಯೇ ಮರಣ ಹೊಂದಿದರು. ವಿಜಯನಗರದ ಸಾಮಂತನಾಗಿದ್ದ ಯಲಹಂಕದ ನಾಡು ಪ್ರಭು ಕೆಂಪೆಗೌಡರು ಸಾಮ್ರಾಟನಿಗೆ ಅವಿಧೇಯನಾಗಿ ನಾಣ್ಯಗಳನ್ನು ಹೊರಡಿಸಿದಾಗ ಅವನನ್ನು ಅಳಿಯ ರಾಮರಾಯನು ಬಂಧಿಸಿ ಆನೆಗೊಂದಿಯ ಸೆರೆಮನೆಗೆ ತಳ್ಳಿದನು. ಕೆಂಪೆಗೌಡನು ಅಲ್ಲಿ ೧೫೯ ರಿಂದ ೧೫೬೫ ರವರಗೆ ೫ವರ್ಷಗಳ ಕಾಲ ಸೆರೆಮನೆಯಲ್ಲಿ ಇದ್ದು, ನಂತರ ದಂಡತೆತ್ತು ಅಲ್ಲಿಂದ ಬಿಡುಗಡೆ ಹೊಂದಿದನು.[೮೬]

ಕ್ರಿ. ಶ ೧೫೬೫ ರಲ್ಲಿ ವಿಜಯನಗರ ಪತನವಾಗಿ ಅರವೀಡು ವಂಶಸ್ಥರು ಪೆನುಗೊಂಡ ಮತ್ತು ಚಂದ್ರಗಿರಿಯಿಂದ ಕ್ರಿ. ಶ. ೧೬೪೬ ರವರೆಗೆ ಆಡಳಿತ ನಡೆಸಿದರು. ಅಲ್ಲಿಗೆ ವಿಜಯನಗರದ ಸಾಮ್ರಾಜ್ಯ ಅಸ್ತಂಗತವಾಯಿತು. ಆದರೆ ಅರವೀಡು ಮನೆತನದ ಶ್ರೀರಂಗರಾಯ ಎಂಬುವನು ಪುನಃ ಆನೆಗೊಂದಿಗೆ ಬಂದು ಆಡಳಿತ ಪ್ರಾರಂಭಿಸಿದನು. ಈ ಪ್ರಭುತ್ವಕ್ಕೆ ಶ್ರೀ ಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ವೀರ ತಿರುಮಲ ವಿದ್ಯಾ ವಿಜಯನಗರ ನರಪತಿ ಸಂಸ್ಥಾನ ಅನೆಗೊಂದಿ ಎಂದು ಹೆಸರಿತ್ತು.ಈ ಸಂಸ್ಥಾನದಲ್ಲಿ ಶ್ರೀರಂಗರಾಯನು(೧೬೪೪–೧೬೭೨) ಸೇರಿ ಒಟ್ಟು ೧೭ ಅರಸರು ಆಡಳಿತ ನಡೆಸಿದರು. ಇವರಲ್ಲಿ ಇಬ್ಬರು ರಾಣಿಯರು ಕೂಡ ಆಳ್ವಿಕೆ ಮಾಡಿದ್ದಾರೆ. ಅನೇಕ ರಾಜಕೀಯ ಸ್ಥಿತ್ಯಂತರಗಳನ್ನು ಕಂಡು ಆನೆಗೊಂದಿ ಸಂಸ್ಥಾನ ಮೇಲೆ ೧೭೭೦ ರಲ್ಲಿ ಪೇಶ್ವೆಗಳು, ೧೭೭೫ ರಲ್ಲಿ ಹೈದರಾಲಿ, ೧೭೮೬ ರಲ್ಲಿ ಟಿಪ್ಪುಸುಲ್ತಾನ ದಾಳಿಗಳು ನಡೆಯುತ್ತವೆ. ೧೭೯ ನಾಲ್ಕನೇ ಆಂಗ್ಲೋ– ಮೈಸೂರು ಯುದ್ದದಲ್ಲಿ ಟಿಪ್ಪು ಮಡಿದ ನಂತರ ಆನೆಗೊಂದಿ ಬ್ರಿಟಿಷರ ಪಾಲಾಯಿತು. ಅವರು ಆನೆಗೊಂದಿ ಅರಸರಿಗೆ ಮಾಶಾಸನ ಗೊತ್ತು ಪಡಿಸಿದರು.[೮೭] ೧೯೪೭ ಭಾರತ ಸ್ವಾತಂತ್ರ್ಯದವರೆಗೂ ಮಾಶಾಸನ ಹಾಗೂ ಆನೆಗೊಂದಿ ಸಹಿತ ಸುತ್ತಲಿನ ಪ್ರದೇಶದ ಮೇಲೆ ಅರಸರು ಹಕ್ಕು ಹೊಂದಿದ್ದರು. ೧೯೪೮ ರಲ್ಲಿ ನಿಜಾಮನ ವಿರುದ್ದ ಭಾರತ ಸರ್ಕಾರ ನಡೆಸಿದ ಕಾರ್ಯಚರಣೆ ನಂತರ ಆನೆಗೊಂದಿ ಆಡಳಿತದ ಒಕ್ಕೂಟದಲ್ಲಿ ವಿಲೀನವಾಯಿತು. ಅಲ್ಲಿಗೆ ಆನೆಗೊಂದಿ ಸಂಸ್ಥಾನ ಕೊನೆಗೊಂಡಿತ್ತು.[೮೮]

ಕನಕಗಿರಿಯ ನಾಯಕರು

'ಕಣ್ಣಿದ್ದವರು ಕನಕಗಿರಿ, ಕಾಲಿದ್ದವರು ಹಂಪಿ ನೋಡಬೇಕು" ಎನ್ನುವ ನೂರಾರು ವರ್ಷದ ಜನವಾಣಿ ಎಷ್ಟೊಂದು ಸೂಕ್ತವಾಗಿದೆ, ಮತ್ತು ಸತ್ಯವಾದ ಮಾತಾಗಿದೆ. ಹಾಗೆ ಈ ಭಾಗದಲ್ಲಿ ಹೆಚ್ಚು ಪ್ರಸಿದ್ದವಾಗಿದೆ. ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ತುಂಬಾ

ಚಿರಸ್ಮರಣೀಯ ಸಾಮ್ರಾಜ್ಯ ಈ ಸಾಮ್ರಾಜ್ಯದ ವಿಶಿಷ್ಟ ಯುಗವೆಂದರೆ, 'ಸುವರ್ಣಯುಗ,' ಈ ಯುಗದಲ್ಲಿ ವಿಜಯನಗರ ಮಾಂಡಲೀಕರ ರಾಜಧಾನಿಯಾಗಿ ಮೆರೆದ ಐತಿಹಾಸಿಕ ಹಿನ್ನಲೆಯ ಧಾರ್ಮಿಕ ಕ್ಷೇತ್ರವಾಗಿದ್ದ ಅಂದಿನ, ಸುವರ್ಣಗಿರಿಯೇ ಇಂದಿನ ಕನಕಗಿರಿ. ಕನಕ ಎಂಬ ಹೆಸರಿನ ಮುನಿ ಇಲ್ಲಿ ತಪಗೈದು ಬಂಗಾರದ ಮಳೆ ತರಿಸಿದ ಕಾರಣ ಈ ಸ್ಥಳಕ್ಕೆ ಕನಕಗಿರಿ ಎಂದಾಯಿತು ಎನ್ನುವುದು ಪ್ರಚಲಿತ ಕಥೆ. ಸ್ಕಂದ ಪುರಾಣದ ತುಂಗಾಮಹಾತ್ಮೆಯಲ್ಲಿ ಕನಕಗಿರಿಯ ಮತ್ತು ಶ್ರೀ ಕನಕಾಚಲಪತಿ ದೇವರ ಉಲ್ಲೇಖವಿದೆ. ಕ್ರಿ.ಶ. ೧೬೭೪ರ ಇಮ್ಮಡಿ ಉಡಚನಾಯಕನ ಶಾಸನವೊಂದರ ಆರಂಭ ಶ್ಲೋಕ....ಶ್ರೀ ಮತ್ಸ್ವರ್ಣಗಿರಿಶಶ್ಯ ನಾರ ಸಿಂಹಸ್ಯ .... ಎಂದಿದೆ. ಇಲ್ಲಿ 'ಸುವರ್ಣಗಿರಿಯ ನರಸಿಂಹ' ಎಂದಿರುವುದು ಕನಕಗಿರಿಗೆ ಸುವರ್ಣಗಿರಿ ಎಂತಲೂ ಕರೆಯುತ್ತಿದ್ದರೆಂಬುದನ್ನು ಸೂಚಿಸುತ್ತದೆ. ಹೀಗಾಗಿ ಅಶೋಕನ ಶಾಸನೋಕ್ತ ಸುವರ್ಣಗಿರಿ" ಈ ಕನಕಗಿರಿಯೇ ಎಂದು ಉಲ್ಲೇಖಿಸಿದ ಪ್ರಚಲಿತ ಕಥೆ, ಸ್ಕಂದಪುರಾಣ ಮತ್ತು ಕನಕಗಿರಿಯ ಇಮ್ಮಡಿ ಉಡಚನಾಯಕನ ಶಾಸನದಿಂದ ಹಿಂದೆ ಈ ಗ್ರಾಮಕ್ಕೆ ಸುವರ್ಣಗಿರಿ ಎಂದು ಕರೆಯುತ್ತಿದ್ದು, ಇಂದು ಇದನ್ನು ಕನಕಗಿರಿ ಎಂದು ಸಂಭೋಧಿಸುತ್ತಿರುವುದು ತಿಳಿದುಬರುತ್ತದೆ.[೮೯]

ಈ ವಂಶದ ನಾಯಕರು ತಮ್ಮನ್ನು ಗುಜ್ಜಲವಂಶೋದ್ಭವರೆಂದು ಕರೆದುಕೊಂಡಿರುವುದು ಚಿಕ್ಕ ಮಾದಿನಾಹಾಳ ರಸ್ತೆಯ ಮಡಿವಾಳಪ್ಪನ ಹೊಲದಲ್ಲಿನ ಶಾಸನ ಕನಕಗಿರಿಯ ಲಕ್ಷ್ಮೀ ದೇವಿಗುಡ್ಡದ ಕೆಳಗೆ ಇರುವ ಮತ್ತು ಬಾವಿಯ ಗೋಡೆಯಲ್ಲಿನ ಶಾಸನ ಕನಕಾಚಲಪತಿ ದೇವಾಲಯದ ಪ್ರಾಕಾರದಲ್ಲಿ ಶಾಸನ ದಿಂದ ತಿಳಿದುಬರುತ್ತದೆ. ಗುಜ್ಜಲ ಶಬ್ದದ ಅರ್ಥ ಸ್ಪಷ್ಟವಾಗಿರದಿದ್ದರೂ ಕೂಡ, 'ಗುಜ್ಜ' ಶಬ್ಬವು 'ಗುಡ್ಡ' ಎಂಬ ಅರ್ಥವನ್ನು ಕೊಡುತ್ತದೆ. ಇಲ್ಲಿ ಗುಜ್ಜಲ ಎಂಬ ಹೆಸರನ್ನು ಹೊಂದಿರುವ ಮನೆತನದವರು ಇದ್ದಾರೆ. ಸ್ಥಳೀಯ ದಂತ ಕಥೆಯೊಂದರ ಪ್ರಕಾರ ನಾಯಕರ ಮೂಲ ಪುರುಷನಾದ ಪರಸಪ್ಪನು ತನ್ನ ಅಪಾರ ಕುಟುಂಬದ, ದನಕರುಗಳ ಹಿಂಡಿನೊಂದಿಗೆ ಕನಕಗಿರಿ ಪ್ರದೇಶಕ್ಕೆ ಬಂದು ನೆಲೆಸಿದನೆಂದು ತಿಳಿಯುತ್ತದೆ.

ಕನಕಗಿರಿ ನಾಯಕರಿಗೆ ವುಡಚ, ಉಡಸಿ. ಎಂಬ ಉಪನಾಮವಿದೆ. ಸ್ಥಳೀಯ ದಂತಕಥೆಯ ಪ್ರಕಾರ ಪರಸಪ್ಪ ಕನಕಗಿರಿ ಪ್ರದೇಶಕ್ಕೆ ಬಂದು ಇಲ್ಲಿಯ ಉಡಚಲಮ್ಮ (ರೋಗ ನಿವಾರಕ ದೇವತೆ) ದೇವಿಯ ಸ್ಥಳವಾದ ಅಂದಿನ ಕಟ್ಟೆ ಹತ್ತಿರ ವಾಸಿಸಲು ಪ್ರಾರಂಭಿಸುತ್ತಾನೆ. ಅದಕ್ಕಾಗಿ ಪರಸಪ್ಪ ಮನೆತನಕ್ಕೆ 'ಗುಜ್ಜಲ' ಎಂಬ ಮೂಲ ಹೆಸರಿದ್ದರೂ ಸ್ಥಳೀಯ ಅಂದಿನ ಜನರು ಇವರನ್ನು ಗುರುತಿಸುವಾಗ ಉಡಚಲಮ್ಮ ದೇವಾಲಯದ ಹತ್ತಿರ ಇದ್ದರಿಂದ 'ಉಡಚನಾಯಕ'ರೆಂದು ಕರೆಯಲೂ ರೂಢಿ ಮಾಡಿಕೊಂಡಿರಬೇಕೆಂದು ಹೇಳಲಾಗುತ್ತಿದೆ.[೯೦] ಕನಕಗಿರಿಯ ಈ ನಾಯಕರು ಮೂಲಪುರುಷ ಯಾರೆಂಬುದು ಶಾಸನಗಳಿಂದ ತಿಳಿಯುದಿಲ್ಲ. ಮತ್ತು ಕನಕಗಿರಿ ಪ್ರದೇಶದ ಆಡಳಿತವು ಯಾವ ನಾಯಕನಿಂದ ಆರಂಭವಾಯಿತೆಂದು ಕೂಡ ತಿಳಿಯುವುದಿಲ್ಲ ಈ ವಂಶದ ಒಟ್ಟು ಮೂರು ನಾಯಕರು ಹೆಸರುಗಳು ಮಾತ್ರ ಶಾಸನಗಳಲ್ಲಿ ಉಲ್ಲೇಖವಾಗಿವೆ. ಅವರುಗಳೆಂದರೆ ಇಮ್ಮಡಿ ವುಡಸಿ ನಾಯಕ, ಕನಕಪ್ಪ ವುಡಸಿನಾಯಕ ಮತ್ತು ರಂಗಪ್ಪನಾಯಕ. ಕ್ರಿ. ಶ. ೧೪೩೬ರಲ್ಲಿ

ಗುಜ್ಜಲ ವಂಶದ ಪರಸಪ್ಪ ನಾಯಕನನಿಂದ ಕನಕಗಿರಿಯಲ್ಲಿ ವಿಜಯನಗರ ಅಧೀನ ಪಾಳೆಯ ಪಟ್ಟು ಪ್ರಾರಂಭವಾಯಿತು. ಈ ವಂಶದಲ್ಲಿ ಒಟ್ಟು ೧೨ ಜನ ನಾಯಕರು ಆಡಳಿತ ನಡೆಸಿದ್ದು ಅವರಲ್ಲಿ ಮೊದಲಿನ ೯ ಜನ ಕನಕಗಿರಿಯಿಂದಲೂ, ಉಳಿದ ೩ಜನ ಪಕ್ಕದ ಹುಲಿಹೈದರದಿಂದಲೂ ಈ ಪ್ರದೇಶದಲ್ಲಿ ಆಡಳಿತ ನಡೆಸಿದರು.[೧]

ಕನಕಗಿರಿ ಸಾಮ್ರಾಜ್ಯವನ್ನು ಆಳಿದ ರಾಜರು

೧) ಪರಸಪ್ಪ ನಾಯಕ – (ಕ್ರಿ.ಶ.೧೪೩೬-೧೫೧೦)

೨) ನವಾಬ ಉಡಚ ನಾಯಕ – (ಕ್ರಿ.ಶ.೧೫೧೦–೧೫೩)

೩) ಕೆಲವಡಿ ಉಡಚ ನಾಯಕ – (ಕ್ರಿ.ಶ.೧೫೩೩–೧೫೭೮)

೪) ಒಂದನೆಯ ಕನಕಪ್ಪ – (ಕ್ರಿ.ಶ.೧೫೭೮–೧೬೧೮)

೫) ಇಮ್ಮಡಿ – (ಕ್ರಿ.ಶ.೧೬೧೮–೧೭೦೮)

೬) ಚಿಕ್ಕ ಕನಕಪ್ಪ – (ಕ್ರಿ.ಶ.೧೭೦೮–೧೭೫೨)

೭) ಹಿರೇ ರಂಗಪ್ಪ – (ಕ್ರಿ.ಶ.೧೭೫೨–೧೭೧೮)

೮) ಮುಮ್ಮಡಿ ಕನಕಪ್ಪ ನಾಯಕ – (ಕ್ರಿ.ಶ.೧೭೮೧–೧೭೮೮)

೯) ಹಿರೇ ನಾಯಕ – (ಕ್ರಿ.ಶ.೧೭೮೧–೧೮೩೩)೪೧

ಇವರಲ್ಲಿ ನವಾಬ ಉಡಚನಾಯಕ, ಇಮ್ಮಡಿ ಉಡಚನಾಯಕ ಮತ್ತು ಹಿರೇ ರಂಗಪ್ಪ ನಾಯಕ ಪ್ರಮುಖ ಪಾಳೆಗಾರರಾಗಿದ್ದರು. ಈ ಅರಸರ ಆಳ್ವಿಕೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ನವಾಬ ಉಡಚನಾಯಕ (ಕ್ರಿ.ಶ. ೧೫೧೦–೧೫೩೩)

ಪರಸಪ್ಪ ನಾಯಕನ ನಂತರ ಅವನ ಮಗ ನವಾಬ ಉಡಚ ನಾಯಕ ಕ್ರಿ.ಶ ೧೫೧೦ ರಲ್ಲಿ ಪಟ್ಟಕ್ಕೆ ಬಂದನು. ಕನಕಗಿರಿಯ ಪಾಳೆಗಾರರಲ್ಲಿ ಪ್ರಸಿದ್ಧನಾದ ದೊರೆಗಳಲ್ಲಿ ಇವನ ಒಬ್ಬ ನವಾಬ ಉಡಚನಾಯಕನ ಕಾಲದಲ್ಲಿ ರಾಜಧಾನಿ ಕನಕಗಿರಿ ವಿಸ್ತಾರ ಹೊಂದಿತ್ತು. ಇವನ ಆಳ್ವಿಕೆಯ ಪೂರ್ವದಲ್ಲಿ ಒಂದು ಸಣ್ಣ ಗ್ರಾಮವಾಗಿದ್ದ ಕನಕಗಿರಿಯನ್ನು ಇವನು ಅದರ ಸುತ್ತ ಮುತ್ತಲಿನ ಗ್ರಾಮಗಳೆನ್ನೆಲ್ಲಾ ಒಂದುಗೂಡಿಸಿ ಕನಕಗಿರಿ ಗ್ರಾಮವನ್ನು ದೊಡ್ಡದಾಗಿ ಮಾಡಿದನು. ಈ ಗ್ರಾಮ ಸುತ್ತಲೂ ಕೋಟೆಯನ್ನು ಕಟ್ಟಿಸಿದನು.

ನವಾಬ ಉಡಚನಾಯಕನ ಆಳ್ವಿಕೆಯ ಸಮಯದಲ್ಲಿ ವಿಜಯನಗರದಲ್ಲಿ ಕೃಷ್ಣದೇವರಾಯನು ಅರಸನಾಗಿದ್ದನು. ಅವನು ಕೈಗೊಂಡ ಅನೇಕ ನಿರ್ಮಾಣ ಕಾರ್ಯಗಳು ನವಾಬನ ಮೇಲೂ ಪರಿಣಾಮ ಬೀರಿರಬೇಕು. ಆದ್ದರಿಂದ ನವಾಬನು ತನ್ನ ರಾಜ್ಯದ ರಾಜಧಾನಿಯಲ್ಲಿ ಹಲವು ವಾಸ್ತು ಕಟ್ಟಡಗಳ ನಿರ್ಮಾಣ ಕೈಗೊಂಡನು. ಕನಕಾಚಲಪತಿ ದೇವಾಲಯದ ಬಲಭಾಗದಿಂದ ಪಶ್ಚಿಮದ ಕಡೆಗೆ ಸು. ೧ ಕಿ.ಮೀ ಉದ್ದದ ನೂರಡಿ ಅಗಲ ವಿಸ್ತಾರವಾದ ಬೀದಿಯನ್ನು ನಿರ್ಮಿಸಿ, ಅದರ ಎಡ–ಬಲ ಭಾಗದಲ್ಲಿ ಗೋಪಿಕೃಷ್ಣ, ಶಂಕರಲಿಂಗ, ಮಹಿಷಮರ್ದಿನಿ ದೇವಾಲಯ,

ವೀರಭದ್ರ ದೇವಾಲಯ, ನಗರೇಶ್ವರ ದೇವಾಲಯ, ಪಂಪಾಪತಿ, ಗಜಲಕ್ಷ್ಮಿ, ಎಲ್ಲಮ್ಮ, ಮಲ್ಲಿಕಾರ್ಜುನ ಮತ್ತು ಸಂಜಿವ ಮೂರ್ತಿ(ಹನುಮಂತ) ದೇವಾಲಯಗಳನ್ನು ನಿರ್ಮಿಸಿದನು. ಇವುಗಳಿಂದ ಇವನು ಸರ್ವಮತಗಳನ್ನು ಸಮಾನವಾಗಿ ಗೌರವಿಸುತ್ತಿದ್ದನೆಂದು ತಿಳಿಯುತ್ತದೆ. ಕನಕಾಚಲಪತಿ ದೇವಾಲಯದ ಪ್ರಕಾರಗೋಡೆ ಇವನ ರಚನೆ ಮತ್ತು ರಾಜಧಾನಿಯ ಹೊರಗೆ ನವಲಿಯ ಭೋಗಪುರೇಶ್ವ ದೇವಾಲಯವನ್ನು, ಎಮ್ಮಿಗುಡ್ಡದ ಕಸಕಾಚಲಪತಿ ದೇವಾಲಯವನ್ನು, ನವಾಬ ಉಡಚ ನಾಯಕನೇ ಕಟ್ಟಿದನು. ಹಂಪಿಯ ವಿರೂಪಾಕ್ಷ ದೇವಾಲಯದ ಉತ್ತರ ಗೋಪುರವನ್ನು ಕೂಡ ಇವನೇ ನಿರ್ಮಿಸಿದನು. ಈಗಲೂ ಅದನ್ನು ಕನಕಗಿರಿ ಗೋಪುರವೆಂದು ಕರೆಯುತ್ತಾರೆ.[೨]

ಇಮ್ಮಡಿ ಉಡಚನಾಯಕ (ಕ್ರಿ.ಶ.೧೬೧೮–೧೭೦೮)

ಕನಕಪ್ಪ ಉಡಚನಾಯಕನ ನಂತರ ಅವನ ಮಗ ಇಮ್ಮಡಿ ಉಡಚ ನಾಯಕನು ಕ್ರಿ.ಶ. ೧೬೧೮ರಲ್ಲಿ ಪಟ್ಟಕ್ಕೆ ಬಂದನು. ಈತನ ಕಾಲದ ಶಿಲಾಶಾಸನಗಳು ದೇವಾಲಯದಲ್ಲಿವೆ. ಈತನ ಆಳ್ವಿಕೆಯಲ್ಲಿ ರಾಜ್ಯದ ವರಮಾನ ೩೨ ಲಕ್ಷಕ್ಕೆ ಏರಿತ್ತಲ್ಲದೆ, ಅನೇಕ ರಾಜಕೀಯ ಚಟುವಟಿಕೆ, ಯುದ್ಧಗಳು ಈ ಅರಸನ ಕಾಲದಲ್ಲಿ ನಡೆದಿವೆಯಂದು ಮತ್ತು ಇಮ್ಮಡಿ ಉಡಚನಾಯಕನು ನಾಡ ಗೌಡರಿಗೆ ದೇಸಾಯಿಗಳಿಗೆ ಸಾಕಷ್ಟು ಉಂಬಳಿಗಳನ್ನು ಕೊಟ್ಟಿದ್ದನೆಂದು ತಿಳಿದುಬರುತ್ತದೆ. ಇವನಿಗೆ ಅಚ್ಚಮ್ಮ, ಚಿನ್ನಮ್ಮ ಮತ್ತು ಕನಕಮ್ಮ ಎಂಬ ಮೂವರು ರಾಣಿಯರಿದ್ದರಂತೆ. ಇವರಲ್ಲಿ ಚಿನ್ನಮ್ಮರಾಣಿ ಕನಕಾಚಲ ದೇವಸ್ಥಾನಕ್ಕೆಲ್ಲಾ (ನೆಲಕೆ) ಬಂಡೆಗಳನ್ನು ಹೊಂದಿಸಿದ್ದಲ್ಲದೇ ಕನಕಗಿರಿಯ ವಾಯುವ್ಯ ದಿಕ್ಕಿನಲ್ಲಿ ತನ್ನ ಹೆಸರಲ್ಲಿ ದೊಡ್ಡದೊಂದು ಕೆರೆ ಕಟ್ಟಿಸುತ್ತಾಳೆ. ಆ ಕೆರೆಗೆ ಚಿನ್ನಮ್ಮನ ಕೆರೆ ಎಂದು ಕರೆಯುವ ವಾಡಿಕೆ ಇಂದಿಗೂ ಜೀವಂತವಾಗಿದೆ. ರಾಣಿ ಅಚ್ಚಮ್ಮ ಕನ್ನೇರುಮಡು ರಸ್ತೆಯಲ್ಲಿ ಬೃಹತ ಬಾವಿಯೊಂದನ್ನು ತೋಡಿಸಿದ್ದಾಳೆ. ಇದೇ ರೀತಿಯಾಗಿ ರಾಣಿ ಕನಕಮ್ಮ ಲಕ್ಷ್ಮಿದೇವಿ ಗುಡ್ಡದ ಬಳಿ ಬಾವಿಯೊಂದನ್ನು ನಿರ್ಮಿಸಿದ್ದಾಳೆ ಹೀಗಾಗಿ ಇವರ ಕಾಲಮಾನದಲ್ಲಿ ಕನಕಗಿರಿ ರಾಜಧಾನಿ ಸುತ್ತ ಮುತ್ತ ಸಾಕಷ್ಟು ಕೆರೆ ಬಾವಿಗಳು ನಿರ್ಮಾಣವಾಗಿದ್ದು, ಜನ ಹೇಳುವ ಹಾಗೇ ಸುಮಾರು '೭೦೦' ಬಾವಿಗಳು ನಿರ್ಮಾಣಗೊಂಡವೆಂದು ಹೇಳುತ್ತಾರೆ.[೩]

ಹಿರೇ ರಂಗಪ್ಪ ನಾಯಕ (ಕ್ರಿ.ಶ. ೧೭೫೨–೧೭೮೧)

ಚಿಕ್ಕ ಕನಕಪ್ಪ ಉಡಚನಾಯಕನ ನಂತರ ಅವನ ಮಗ ಹಿರೇ ರಂಗಪ್ಪ ನಾಯಕ ಕ್ರಿ.ಶ. ೧೭೫೨ರ ವೇಳೆಯಲ್ಲಿ ಪಟ್ಟಕ್ಕೆ ಬಂದನು. ಇವನ ಆಳ್ವಿಕೆಯ ಸಮಯದಲ್ಲಿ ಸಾಧು–ಸಂತರು. ಕವಿ–ವಿದ್ವಾಂಸರು ಬೆಳಕಿಗೆ ಬರುತ್ತಾರೆ. ಏಕೆಂದರೆ ಹಿರೇರಂಗಪ್ಪ ನಾಯಕನಲ್ಲಿ ಸಾಂಸ್ಕೃತಿಕ ಆಸಕ್ತಿ ಮತ್ತು ಸಾಧು ಸಂತರ ಮೇಲೆ ಭಕ್ತಿ ವಿಶೇಷವಾಗಿತ್ತು. ಹಾಗಾಗಿ ಈತನ ಕಾಲದಲ್ಲಿ ದೇವಿಪುರಾಣ, ಕೀರ್ತನೆ, ಕಾಮ ವಿಡಂಬನೆ ಮುಂತಾದ ಪ್ರಕಾರಗಳ ಸಾಹಿತ್ಯ ಕೃತಿಗಳು ರಚಿತವಾಗಿವೆ. ಹಿರೇರಂಗಪ್ಪನ ನಾಯಕನ ಇಚ್ಚೆಯಂತೆ ಅಪೂರ್ಣವಾಗಿದ್ದ ಅಪರಾಳ ತಮ್ಮಣ್ಣನವರ

"ಶ್ರೀ ಕೃಷ್ಣ ಪಾರಿಜಾತಕ" ನಾಟಕವನ್ನು ಕವಿ ಶಿರುಗುಪ್ಪಿ ಸದಾಶಿವಯ್ಯ ಅವರು ಪೂರ್ಣಗೊಳಿಸಿದರು.[೯೪]

ಈ ಮೇಲಿನ ಮೂವರು ಪ್ರಬಲ ನಾಯಕರ ಆಳ್ವಿಕೆಯ ನಂತರ ಈ ವಂಶದ ಒಂಭತ್ತನೆಯ ದೊರೆ ಹಿರಿಯ ನಾಯಕ ಉದ್ದಟನಾಗಿದ್ದರಿಂದ ಹೈದರಬಾದ್ ನಿಜಾಮ ಅವನನ್ನು ಸೋಲಿಸಿ ರಾಜ್ಯವನ್ನು ಕೈವಶ ಮಾಡಿಕೊಂಡನು.

ಹುಲಿಹೈದರ ಸಂಸ್ಥಾನ (ಕ್ರಿ.ಶ. ೧೮೩೩– ೧೯೪೮)

ಕನಕಗಿರಿಯಿಂದ ಸುಮಾರು ಹತ್ತು ಕಿ.ಮೀ ದೂರದಲ್ಲಿ ಹುಲಿಹೈದರ ಗ್ರಾಮವಿದೆ. ಇಲ್ಲಿ ಕನಕಗಿರಿಯ ಗುಜ್ಜಲವಂಶದ ನಾಯಕ ಮನೆತನದವರು ಆಳ್ವಿಕೆಯನ್ನು ನಡೆಸಿದ್ದು, ಇದಕ್ಕೆ 'ಹುಲಿಹೈದರ ಸಂಸ್ಥಾನ" ವೆಂದು ಹೆಸರು. ಕನಕಗಿರಿ ಪಾಳೇಪಟ್ಟವನ್ನು ಹೈದರಾಬಾದ್ ನಿಜಾಮನು ಹಿರೇ ನಾಯಕನಿಂದ ವಶಪಡಿಸಿಕೊಂಡ ನಂತರ ಅವನ ಎರಡನೆಯ ಮಗ ರಂಗನಾಥಪ್ಪ ನಾಯಕ ಬಂಡೇಳಲು ಅವನಿಗೆ ನಿಜಾಮನು ಕನಕಗಿರಿಯನ್ನು ಹೊರತು ಪಡಿಸಿ ೧೬ ಹಳ್ಳಿಗಳನ್ನು ನೀಡಿದನು. ರಂಗಪ್ಪ ನಾಯಕನು ಹುಲಿಹೈದರ ಪ್ರದೇಶವನ್ನು ಕೇಂದ್ರವಾಗಿರಿಸಿಕೊಂಡು ಆಡಳಿತವನ್ನು ಪ್ರಾರಂಭಿಸಿದನು. ಕನಕಗಿರಿ ಗ್ರಾಮ ನಿಜಾಮನ ಸ್ವಾಧೀನದಲ್ಲಿದ್ದರೂ ಶ್ರೀ ಕನಕಾಚಲಪತಿ ದೇವರ ಜಾತ್ರೆ ನಡೆಸುವ ಅಧಿಕಾರವನ್ನು ನಾಯಕರಿಗೆ ಬಿಡಲಾಗಿತ್ತು. ಇವನ ಕಾಲದಲ್ಲಿ ಟಿಪ್ಪುಸುಲ್ತಾನ ಮತ್ತು ಹರಪ್ಪನಹಳ್ಳಿ ಪಾಳೆಯಗಾರರು ಕನಕಗಿರಿಯ ಮೇಲೆ ದಾಳಿ ಮಾಡಿದರು. ಇವನ ನಂತರ ಹಿರಿಯ ಮಗ ರಂಗಪ್ಪ ನಾಯಕ ಅಧಿಕಾರ ವಹಿಸಿಕೊಂಡನು. ರಂಗಪ್ಪನಾಯಕನಿಗೆ ಗಂಡು ಮಕ್ಕಳು ಇರಲಿಲ್ಲ ಈತನು ಮೃತನಾದ ನಂತರ ಹಿರಿಯ ರಾಣಿ ವೆಂಕಟಮ್ಮ, ಮೈದುನ ಸೋಮಸಾಗರದ ಕನಕಪ್ಪ ನಾಯಕನ ಮಗ ಉಡಸಿನಾಯಕನನ್ನು ದತ್ತು ತೆಗೆದುಕೊಂಡು ಈತನ ಕಾಲದಲ್ಲಿ ಕನಕಾಚಲಪತಿ ದೇವಾಲಯಕ್ಕೆ ಅರಸನ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಉಡಸಿನಾಯಕನ ನಂತರ ಅವನ ಮಗ ರಾಜರಂಗಪ್ಪ ನಾಯಕ ಅಧಿಕಾರ ವಹಿಸಿಕೊಂಡನು. ಆದರೆ ಅವನು ಚಿಕ್ಕ ವಯಸ್ಸಿನಲ್ಲಿಯೇ ನಿಧನ ನಾದನು, ರಾಣಿ ಗೌರಮ್ಮ ಮೈದುನನ ಮಗ ರಂಗಪ್ಪ ನಾಯಕನನ್ನು ದತ್ತು ತೆಗೆದುಕೊಂಡಳು(ಸದ್ಯ ಹುಲಿಹೈದರ್ ರಲ್ಲಿದ್ದಾರೆ) ಆದರೆ ರಂಗಪ್ಪನಾಯಕ ಅಲ್ಪ ಪ್ರಾಯುದವನಾಗಿರುವುದರಿಂದ ಆಡಳಿತ ಸರಿಯಾಗಿ ನೆಡೆಯುತ್ತಿಲ್ಲವೆಂದು ನೆಪವೊಡ್ಡಿ ನಿಜಾಮ ಸಂಸ್ಥಾನವನ್ನು ಸ್ವಾಧೀನಪಡಿಕೊಂಡನು. ರಾಣಿಗೌರಮ್ಮ ಹಾಗೂ ದತ್ತು ಪುತ್ರ ರಾಜರಂಗಪ್ಪ ನಾಯಕನನ್ನು ಬಂಧಿಸಿ ಹೈದರಾಬಾದಿನಲ್ಲಿ ಇರಿಸಲಾಯಿತು.(ರಾಣಿ ಗೌರಮ್ಮ ೧೯೫೨) ರಲ್ಲಿ ಅಲ್ಲಿಯೇ ನಿಧನ ನಾದಳು. ನಂತರ ರಾಜ ರಂಗಪ್ಪ ನಾಯಕನಿಗೆ[೯೫] ಅಧಿಕಾರ ಬಿಟ್ಟು ಕೊಡಲಾಯಿತಾದರೂ ೧೯೪೮ ರ ವಿಮೋಚನೆಯೊಂದಿಗೆ ಭಾರತ ಸರ್ಕಾರದಲ್ಲಿ ವಿಲೀನವಾಯಿತ್ತು.

ಹೀಗೆ ಗಂಗಾವತಿ ತಾಲೂಕು ಪರಿಸರವು ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಹೈದರಾಬಾದ್ ನಿಜಾಮನ ಕಾಲದವರೆಗೆ ಚಾರಿತ್ರಿಕ ಹಿನ್ನೆಲೆಯನ್ನು ಒಳಗೊಂಡಿದೆ.

ಕೊನೆಟಿಪ್ಪಣಿಗಳು

೧. ಚಂದ್ರಶೇಖರ ಎಚ್., ೧೯೯೩, ರಾಯಚೂರು ನೈಸರ್ಗಿಕ ಸಂಪನ್ಮೂಲ ಬಳಕೆಯ. ಸ್ಥಿತಿಗತಿ ಮತ್ತು ಮುನ್ನೋಟ, ತಿರುಳ್ಗನ್ನಡ, ಪು-೩೭.
೨. ಕೊಪ್ಪಳ ಜಿಲ್ಲೆ ಅಂಕಿ ಅಂಶಗಳ ನೋಟ, ೨೦೦೬-೦೭. ಪು-೧.
೩. ಸಾಮಾನ್ಯ ಮಾಹಿತಿ ತಹಶೀಲ್ದಾರ್ ಕಾರ್ಯಲಯ ಗಂಗಾವತಿ ತಹಶೀಲ್ದಾರ್.
೪. ಕೊಪ್ಪಳ ಜಿಲ್ಲೆ, ೨೦೦೬-೦೭, ಪೂರ್ವೋಕ್ತ, ಪು-೭.
೫. ಅದೇ. ಪು-೧೪.
೬. ಅಭಿಶಂಕರ್ ಕೆ. ೧೯೭೦, ರಾಯಚೂರ ಡಿಸ್ಟ್ರಿಕ್ಟ್ ಗೆಜೆಟಿಯರ್. ಪು-೧೫.
೭. ಶರಣಬಸಪ್ಪ ಕೋಲ್ಕಾರ ಪಿ. ೨೦೦೨, ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸದ ಕಾಲದ ಕಲೆ, ಪಿ.ಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು-೧೦.
೮. ಪ್ರಕಾಶ ಹುಣಸಗಿ., ೧೯೬೭, ಗಂಗಾವತಿ ತಾಲೂಕ ದರ್ಶನ, ಪು-೧೩.
೯. ಬಂಗಾರಿ ವಿ. ಎಸ್., ೧೯೭೬, ಕೊಪ್ಪಳ ನಾಡಿನ ಭೌಗೋಳಿಕ ದರ್ಶನ, ಪು-೨೩೫-೩೪೧.
೧೦. ಚಂದ್ರಶೇಖರ., ೧೯೯೯, ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ, ಪು, ೮೫.
೧೧. ಶರಣಬಸಪ್ಪ ಕೋಲ್ಕಾರ. ೨೦೦೨, ಪೂರ್ವೋಕ್ತ, ಪು-೩೩.
೧೨. ಅಭಿ ಶಂಕರ್ ಕೆ(ಸಂ): ೧೯೭೨, ಬಳ್ಳಾರಿ ಡಿಸ್ಟ್ರಿಕ್ಟ್ ಗೆಸೆಟೆಯರ್, ಪು-೫೬.
೧೩. ಶಿವತಾರಕ್., ೨೦೦೧, ಕರ್ನಾಟಕ ಪುರಾತತ್ವ ನೆಲೆಗಳು. ಪು-೨.
೧೪. ಅದೇ, ಪು-೩
೧೫. ಅದೇ, ಪು-೭೩.
೧೬. ಅದೇ, ಪು-೬೪.
೧೭. ಶರಣಬಸಪ್ಪ ಕೋಲ್ಕಾರ (ಸಂ), ೨೦೦೨, ಅಕ್ಷಯ ಸವಿಸಂಚಿಕೆ, ಪು-೧೩.
೧೮. ಅದೇ, ಪು, ೫೨-೫೮.
೧೯. ಶಿವತಾರಕ್., ೨೦೦೧, ಪೂರ್ವೋಕ್ತ, ಪು-೧೭.
೨೦. ಅದೇ, ಪು-೬೬-೭೭.
೨೧. ಸುಂದರ ಅ., ೧೯೯೩, ಗಂಗಾವತಿ ತಾಲೂಕಿನ ಪ್ರಾಚ್ಯವಸ್ತುಗಳು, ಪು-೬೪-೭೫
೨೨. ಶಿವತಾರಕ್., ೨೦೦೨, ಪೂರ್ವೋಕ್ತ, ಪು-೬೬-೬೭.
೨೩. ಬಡಿಗೇರ ವಿ.ಎಸ್., ೨೦೦೨, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪು-೨೩.
೨೪. ದೇವರಾಜ ಡಿ. ವಿ, ಮತ್ತು ಪಾಟೀಲ, ಪಿ. ಎಸ್., ೧೯೯೧, ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್, ಪು-೬೪.

೨೫. ಶಿವತಾರಕ್., ೨೦೦೨, ಪೂರ್ವೋಕ್ತ ಪು-೬೫-೭೬.

೨೬. ಸುಂದರ ಅ., ೧೯೯೩, ಪೂರ್ವೋಕ್ತ, ಪು-೩೨.

೨೭. ಸುಂದರ ಅ., (ಸಂ); ಕರ್ನಾಟಕ ಚರಿತ್ರೆ ಸಂಪುಟ-೧, ಪು-೨೪೦-೨೪೧.

೨೮. ಇತಿಹಾಸ ದರ್ಶನ, ಸಂಪುಟ-೧೩, ೧೯೯೮, ಪು-೧೯-೨೨.

೨೯. ಶರಣಬಸಪ್ಪ ಕೋಲ್ಕಾರ. ೨೦೦೨, ಪೂರ್ವೋಕ್ತ. ಪು-೩೩.

೩೦. ಶಿವತಾರಕ್., ೨೦೦೧, ಪೂರ್ವೋಕ್ತ, ಪು-೬೭-೭೭.

೩೨. ಸುಂದರ ಅ., ೧೯೭೩, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ. ಪು-೪೩.

೩೩. Turner R.L. 1952, The Gavimath and Palkigundu Inscription of Ashoka. P-130

೩೪. Hultzsch E:, 1925, "Corpus Inseriptionum Indicarum" Vol-1, Inscription of Ashoka P-136

೩೫. ಶೆಟ್ಟರ್ ಎಸ್ ಮತ್ತು ರಾಜಶೇಖರ ಎಸ್. ೧೯೭೭. ನಿಟ್ಟೂರಿನ ಅಶೋಕನ ಶಿಲಾಶಾಸನಗಳು, ಪು-೭೭

೩೬. ಉದೇಗೊಳ್ಳ ಅಶೋಕನ ಶಾಸನಗಳು, ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ೦೬/೦೩/೧೯೬೧, ಪು-೬.

೩೭. Sharma.I.K; Varaprasad Rao.J, and Srinivas Rao.G.V, 1989.P, 89

೩೮. Huletzseh E., ೧೯೨೫, ಪೂರ್ಮೋಕ್ತ, ಪು, ೧೭೫-೮೦.

೩೯. ಅದೇ. ಪು-೧೭೭.

೪೦. Srikanta Shashtri.S. ೧೯೪೦, ¸of Karnataka History,Vol-೧, P, ೯೬

೪೧. Sundar A., 1973, Some Tamples of North Dharwad Distoiats and Hoysala Architecture. P, 170

೪೨. Annual Report on Indian Epiraphy, ೧೯೬೬-೬೭. ಪು-೨೧೩

೪೩. ರಘುನಾಥ ಭಟ್ ಎಚ್,ಆರ್., ೧೯೭೭, ಕರ್ನಾಟಕ ಶಾಸನ ಕಲೆ, ಪು-೪೩.

೪೪. ಪಂಚಮುಖಿ ಆರ್. ಎಸ್., ೧೯೫೩. ಮುಂಬಯಿ ರಾಜ್ಯದಲ್ಲಿ ಕನ್ನಡ ಸಂಶೋಧನೆ. ಪು-೩೩.

೪೫. Epigraphia Indiea, Vol-2. P,310.

೪೬. Rajashekar s., 1976, painted Inseriptiona at Kurugodu, all India oriental conference P, 48 (Twenty Eighth session) Summaries of papers,

೪೭. Epigraphia Indiea, Vol, 14. P, 311.

೪೮. Sundar A., 1986, Two Rare Sculpturer from Soudar Bellarey District, Studies in India Cuture, P, 50
೪೯. Sundara , A; 1986, An Early Kadamba mahishamadini Seculpture from Devihal, P, 53.
೫೦. Sundara A : ೧೯೮೬, ಪೂರ್ವೋಕ್ತ, ಪು–೨೭೯–೮೪.
೫೧. ದೇಸಾಯಿ. ಪಿ. ಬಿ., ೧೯೫೬, ಶಾಸನ ಪರಿಚಯ, ಪು–೨೧.
೫೨. Rajashekar S, ೧೯೭೬. ಪೂರ್ವೋಕ್ತ ಪು–೨೨೨.
೫೩. Nagaraj Rao M. S; 1978, Progress of Archaollogy in Karnataka. P, 50.
೫೪. ದೇವರ ಕೊಂಡಾರಡ್ಡಿ. ೧೯೯೯, ಕೊಪ್ಪಳ ಜಿಲ್ಲೆಯ ಶಾಸನ ಸಂಪುಟ–೨. ಪು, ೪೫.
೫೫. Annual Report in Indian Epigraphy, 1960-1961 P, 210.
೫೬. ದೇವರ ಕೊಂಡಾರಡ್ಡಿ. ೧೯೯೯, ಪೂರ್ವೋಕ್ತ, ಪು–೬೬.
೫೭. Sundara A., ೧೯೭೬, ಪೂರ್ವೋಕ್ತ. ಪು–೪೫
೫೮. Shanta Kumari S, L; 1984- 85, A note on the two, Rastrakuta Saulptures from Nilagunda, P, 36
೫೯. Annual Reports on Indian Epigraphy, 1958-1959, NO, 700. P, 156.
೬೦. ದೇಸಾಯಿ ಪಿ. ಬಿ., ೧೯೫೬. ಪೂರ್ವೋಕ್ತ, ಪು–೩೩–೪೪,
೬೧. Annual Report on Indian Epigraphiy, 1953-54, NO. B 241. P, 241.
೬೨. ಶರಣಬಸಪ್ಪ ಪಿ., ೧೯೯೦, ಪ್ರಾದೇಶಿಕ ಪುರಾತತ್ವ ಅನ್ವೇಷಣೆ ಹಾಗೂ ಮಧ್ಯಕಾಲೀನ ಸ್ಮಾರಕಗಳ ಒಂದು ಅಧ್ಯಯನ, ಪು–೯೬.
೬೩. ದೇಸಾಯಿ ಪಿ.ಬಿ., ೧೯೫೬, ಪೂರ್ವೋಕ್ತ ಪು–೬೭.
೬೪. Annual Reports On India Epigraphy, 1953- 54, P, 240.
೬೫. ದೇಸಾಯಿ.ಪಿ.ಬಿ., ೧೯೫೬, ಪೂರ್ವೋಕ್ತ, ಪು–೩೧.
೬೬. ಅದೇ, ಪು–೫೦.
೬೭ ಅದೇ, ಪು–೧೩.
೬೮. Annual Reports on India Epigraphy, 1953, 54. P, 253.
೬೯. ದೇವರ ಕೊಂಡಾರೆಡ್ಡಿ. ೧೯೯೯, ಪೂರ್ವೋಕ್ತ ಪು–೨೦.
೭೦. ಅದೇ, ಪು–೩೦.
೭೧. ಅದೇ, ಪು–೩೧.
೭೨. ಶರಣಬಸಪ್ಪ ಕೋಲ್ಕಾರ,, ೨೦೦೫, ಕಂಪ್ಲಿ ಇತಿಹಾಸ ಪು–೧೦–೧೧.

೭೩. SII IX pt. ಕಂಚುಗಾರ ಬಳಗಲ್ಲು. ಪು–೭೪.

೭೪. ಅದೇ, ಪು–೭೫.

೭೫. AR, -1977-78, ಪು–೮೬.

೭೬. SII IX pt, I, ಗೊನಹಾಳ್, ಪು–೭೯.

೭೭. ೦ಖ, ೧೯೭೭–೭೮, ಕ, ೧೦೯–

೭೮. SII IX pt. I. P, 80.

೭೯. SII IX Pt, P, 133

೮೦. SII IX Pt. P, 113

೮೧. ದೇವರ ಕೊಂಡಾರೆಡ್ಡಿ. ೧೯೯೮, ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ–೧, ಹಳೇನಲ್ಲುಡಿ, ಪು–೩೧.

೮೨. SII Pt, I, ಪು–೮೩–೮೪

೮೩. ಶರಣಬಸಪ್ಪ ಕೋಲ್ಕಾರ. ೨೦೧೪, ವಿಜಯನಗರದ ಮಾತೃಸ್ಥಾನ ಆನೆಗೊಂದಿ, ಪು–೧೨೩.

೮೪. SII IX Pt, I P, 87

೮೫. SII IX Pt I P, 249 and P, 92.

೮೬. SII IX PT I P, 98.

೮೭. SII IX Pt, I P, 133,

೮೮. SII IX XI ,P, 14,

೮೯. SII IX pt .I X, P, 106.

೯೦. ದೇವರ ಕೊಂಡಾರೆಡ್ಡಿ,, (ಸಂ) ೧೯೯೯, ಪೂರ್ವೋಕ್ತ, ಪು–೪೪.

೯೧.. ಅದೇ. ಪು–೪೫.

೯೨. ದುರುಗಪ್ಪ ಎಂ,ಕೆ., ೨೦೦೭, ಕನಕಗಿರಿ ನಾಯಕರು, ಪು–೪೯.

೯೩. ಅಲ್ಲಾಗಿರಿ ರಾಜು, ೨೦೦೬, ಪುಣ್ಯಕ್ಷೇತ್ರ ಕನಕಗಿರಿ, ಪು–೫೮.

೯೪. ನಾಗಯ್ಯ ಜೆ.ಎಮ್., ೧೯೯೧, ಬಳ್ಳಾರಿ ಜಿಲ್ಲೆಯ ಶಾಸನಗಳು ಪು–೧೫.

೯೫. ದೇವರ ಕೊಂಡಾರೆಡ್ಡಿ. ೧೯೯೯ ಪೂರ್ವೋಕ್ತ. ಪು–೪೯.

ಅಧ್ಯಾಯ - ಮೂರು
ಸ್ಮಾರಕ ಶಿಲ್ಪಗಳ ಉಗಮ, ಮತ್ತು ವಿಕಾಸ ಹಾಗೂ ವೈಶಿಷ್ಟ್ಯತೆ

ಅಧ್ಯಾಯ – ಮೂರು
ಸ್ಮಾರಕ ಶಿಲ್ಪಗಳ ಉಗಮ, ಮತ್ತು ವಿಕಾಸ ಹಾಗೂ ವೈಶಿಷ್ಟ್ಯತೆ

ಮಾನವ ಹುಟ್ಟು ಅನಿವಾರ್ಯವಾಗದೇ ಇರಬಹುದು, ಆದರೆ ಹುಟ್ಟಿದ ನಂತರ ಸಾವು ಎಂಬುದು ಅನಿವಾರ್ಯವೂ, ಪ್ರಕೃತಿ ಸಹಜವೂ ಹೌದು. ಈ ಸಾವಿನ ಅರ್ಥ, ಕಲ್ಪನೆ ಮತ್ತು ವ್ಯಾಖ್ಯಾನಗಳು ವ್ಯಕ್ತಿಯಿಂದ ವ್ಯಕ್ತಿಗೆ ಸಂಸ್ಕೃತಿಯಿಂದ ಸಂಸ್ಕೃತಿಗೆ, ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ.[೧] ಮಾನವನಿಗೆ ಒದಗುವ ಕಷ್ಟಗಳಿಗಿಂತಲೂ ಸಾವಿನ ಭಯ ಎಂಬುದು ಅವರ ಜೀವನದಲ್ಲಿ ಅಲ್ಲೋಲ ಕೊಲ್ಲೋಲವನ್ನುಂಟುಮಾಡುವ ಸಂಗತಿಯಾಗಿದೆ. ಮರಣವೆಂಬುದು ಅವನನ್ನು ಕ್ಷಣ ಮಾತ್ರದಲ್ಲಿ ಇಲ್ಲವಾಗಿಸುವ ಇನ್ನೊಂದು ಭಯಂಕರ ಸಂಗತಿ. ಸತ್ತ ಆತ್ಮದ ಬಗ್ಗೆ ಪ್ರೀತಿ, ಪರಸ್ಪರ ವಿರುದ್ಧವಾದ ಅವನ ಭಾವನೆಗಳು, ಅವನ ಶವಗಳನ್ನು ರಕ್ಷಿಸಿಟ್ಟ ವಿವಿಧ ರೀತಿಗಳು ಸಮಾಧಿ ಮಾಡುವುದು, ಸುಡುವುದು, ಮುಂತಾದ ಸಂಪೂರ್ಣ ನಿರ್ನಾಮ ಮಾಡುವ ರೀತಿಗಳಲ್ಲಿ ಸುವ್ಯಕ್ತವಾಗಿದೆ.[೨] ಪ್ರಾಚೀನ ಕರ್ನಾಟಕದಲ್ಲಿ ವಿವಿಧ ಬಗೆಯ ಶವ ಸಂಸ್ಕಾರಗಳನ್ನು ಕಾಣುತ್ತೇವೆ. ಆ ಸಮಾಧಿ ಮುಂದೆ ಕಾಣಿಕೆಗಳು, ಬಲಿ, ಹಾಗೂ ಮರಣ ಹೊಂದಿದವರ ಗೌರವ ಸೂಚಕವಾಗಿ ನಿಲ್ಲಿಸಿರುವ ಸ್ಮಾರಕಗಳು ಇವುಗಳೆಲ್ಲವನ್ನು ಗಮನಿಸಿದಾಗ ಈ ಎಲ್ಲವುಗಳ ನಡುವೆ ಸಾಮ್ಯತೆ ಐಕ್ಯತೆ ಕಂಡುಬರುತ್ತದೆ. ಸಾವಿನ ಬಗ್ಗೆ ತಮಗಿರುವ ಮಾನವನ ಮೂಲಭೂತ ಭಾವನೆಗಳು ಒಂದೇ ಆಗಿರುವುದರಿಂದ ಅವನಿಗೆ ಅದರ ಬಗ್ಗೆ ತನಗಿರುವ ಭೀತಿಯ ಜೊತೆಗೆ ಅಭಿವ್ಯಕ್ತಿಯ ಸಾಮ್ಯವನ್ನು ತೋರಿಸಿದ್ದಾನೆ.[೩]

ಸ್ಮಾರಕಗಳ ನಿರ್ಮಾಣ

ಗತಿಸಿಹೋದ ಮಾನವನನ್ನು ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೋ, ಮಡಿದವನ ಸ್ಮರಣೆ ಬರುವಂತೆಯೋ, ಕೆಲವಾರು ಸಂಕೇತಗಳನ್ನೋ, ಗುರುತುಗಳನ್ನೋ ಒಂದು

ನಿಗಧಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಇವು ಸಾಮಾನ್ಯವಾಗಿ ಆ ಪ್ರದೇಶಗಳಲ್ಲಿನ ನಂಬಿಕೆ, ಧರ್ಮ, ಸಾಮಾಜಿಕ ಪ್ರತಿಷ್ಠೆಗಳನ್ನನುಸರಿಸಿಯೇ ಬೆಳೆದಿದೆ. ಬೃಹದಾಕಾರದ ಪಿರಮಿಡ್ಡುಗಳಿಂದ ಹಿಡಿದು ಸಣ್ಣ ಮಟ್ಟದ ಕಲ್ಲುಗಳವರೆಗೂ ಅವುಗಳ ವ್ಯಾಪ್ತಿಯನ್ನು ಗುರುತಿಸಬಹುದು. ಪ್ರಾಗಿತಿಹಾಸಿಕ ಕಾಲದ ಕಲ್ಲಿನ ಮನೆಗಳಿಂದ ಹಿಡಿದು ಅಮೃತ ಶಿಲೆಯಿಂದ ನಿರ್ಮಿಸಿದ ಉನ್ನತ ನಾಗರಿಕತೆಯ ಶ್ರೇಷ್ಠ ವಸ್ತುವಿನವರೆಗೂ ಇದರ ವೈಭವವನ್ನು ಗುರುತಿಸಬಹುದು.[೬] ಸ್ಮಾರಕಗಳು ಮಾನವನ ಜೀವನ ವಿಧಾನವನ್ನು ಜೀವನದ ಬಗ್ಗೆ ಅವನಿಗಿರುವ ಧೋರಣೆಗಳನ್ನೋ ಅಂದಿನ ಅವನ ನಾಗರಿಕತೆ ಮತ್ತು ಸಂಸ್ಕೃತಿಯನ್ನೋ ತಿಳಿಸಿ ಕೊಡುವ ಕುರುಹುಗಳಾಗಿವೆ. ಎಲ್ಲಾ ಸ್ಮಾರಕಗಳು ಮಡಿದ ವ್ಯಕ್ತಿಯ ನೆನಪನ್ನುಂಟು ಮಾಡಲು ಇರುವ ಸಂಕೇತಗಳು. ಸತ್ತ ವ್ಯಕ್ತಿಯ ನೆನಪನ್ನು ಘನೀಭವಿಸಿ ಅಭಿವ್ಯಕ್ತಗೊಳಿಸುವ ಸಾಧನಗಳು. ಇದಕ್ಕೆ ಕಾರಣವೆಂದರೆ ಈ ಎಲ್ಲಾ ಸಾಧನೆಗಳು ಆಯಾ ವರ್ಗಕ್ಕೆ ಅನುಗುಣವಾಗಿ ಮಾಡಿಕೊಂಡ ನಿರ್ದಿಷ್ಟವಾದ ಸಂಕೇತಗಳಾಗಿದ್ದು ಅವು ಪರಂಪರಾಗತವಾಗಿ ಒಪ್ಪಿಕೊಂಡುಂತವು ಎಂಬುದು. ಇವೆಲ್ಲವೂ ಮತ್ತೆ ಮತ್ತೆ ಅದೇ ಸಂದರ್ಭದಲ್ಲಿ, ಅದೇ ಸನ್ನಿವೇಶಗಳಲ್ಲಿ ಉಪಯೋಗಿಸಲ್ಪಡುವುವು. ಆಗಲೇ ಹೇಳಿದಂತೆ ಈ ಎಲ್ಲ ಸಂಕೇತಗಳು ಸಾರ್ವತ್ರಿಕ ಅಲ್ಲ, ಆಯಾ ಸಂಸ್ಕೃತಿಗಳ, ಜನರ ನಂಬಿಕೆ ಮತ್ತು ಕಲ್ಪನೆ ಪರಿಸರಗಳನ್ನು ಅವಲಂಬಿಸಿ ಇರುವಂಥವು.

ವೇದಗಳಲ್ಲಿ ಹೇಳಿರುವಂತೆ 'ಪಿತೃಮೇಧ' ಎಂಬ ವಿಧಿಯಲ್ಲಿ ಮಡಿದವರನ್ನು ಸಂಸ್ಕರಿಸಿದ ಸ್ಥಳದಲ್ಲಿ ಸ್ಮಾರಕವನ್ನು ನಿರ್ಮಿಸುವ ಬಗ್ಗೆ ಮಾಹಿತಿ ನೀಡುತ್ತದೆ. ಶತಪಥ ಬ್ರಾಹ್ಮಣದಲ್ಲಿ ಮೃತರಿಗಾಗಿ ಸ್ಮಾರಕವನ್ನು ನೆಡುವುದರ ಪ್ರಸ್ತಾಪ ಬರುತ್ತದೆ. ವೀರರ ಆರಾಧನೆ ಈಜಿಪ್ಟ್ ಬೆಬಿಲೋನಿಯ ಮತ್ತು ಭಾರತದ ಸಿಂಧೂಬಯಲಿನ ನಾಗರಿಕತೆಯಲ್ಲಿ ಕುರುಹುಗಳು ಸಿಗುತ್ತವೆ. ಸ್ಮಾರಕ ಕಲ್ಲುಗಳನ್ನು ನೆಡುಯುವುದೆ ಮುಖ್ಯವಾಗಿ ಆಚರಣೆ ಯಾಗಿರುವ ಅಂತ್ಯ ಸಂಸ್ಕಾರವು ಮಾರಿಯ ಜನಾಂಗದಲ್ಲಿ ಬೆಳೆದುಬಂದಿರುವುದನ್ನು ಗುರುತಿಸಬಹುದಾಗಿದೆ.[೭] ಈ ಜನಾಂಗದವರು ವಾಸಿಸುವ ಸ್ಥಳಗಳಲ್ಲಿ ಸಾಲು ಸಾಲು ಸ್ಮಾರಕ ಶಿಲೆಗಳು ಕಂಡುಬರುತ್ತವೆ. ಇವು ಗಾತ್ರದಲ್ಲಿ ದೊಡ್ಡದಾಗಿಯೂ ಮತ್ತು ಕೆಲವು ಕಡೆಗಳಲ್ಲಿ ಬಹಳ ಚಿಕ್ಕದಾಗಿರುತ್ತವೆ. ಕಾಲಕ್ರಮೇಣದಲ್ಲಿ ಬೆಳೆಯುತ್ತವೆ ಎಂಬುವುದು ಅಲ್ಲಿನ ಜನರ ನಂಬಿಕೆ. ಅವರಲ್ಲಿ ಬಹುಜನ ಕಲ್ಲಿನ ಕಂಬಗಳನ್ನು ನಿಲ್ಲಿಸುತ್ತಾರೆ. ಇದನ್ನು ಉರುಸು ಕಲ್ಲು ಎಂಬುದಾಗಿ ಕರೆಯುತ್ತಾರೆ. ಮತ್ತೆ ಕೆಲವರು ವಿಶಾಲವಾದ ಕಲ್ಲು ಚಪ್ಪಡಿಯನ್ನು ಕೆಲವು ಕಲ್ಲುಗಳ ಆಸರೆಯಿಂದ ನಿಲ್ಲಿಸುತ್ತಾರೆ.

ಕಾತೆವಾಡದಲ್ಲಿನ ಪ್ರತಿಯೊಂದು ಹಳ್ಳಿಯಲ್ಲಿಯೂ ನಮಗೆ ಈ ತರನಾದ ಸ್ಮಾರಕ ಶಿಲೆಗಳು ಕಂಡುಬರುತ್ತವೆ. ಅವು ತಮ್ಮ ವಂಶದ ಅಥವಾ ಯಾವುದೇ ವ್ಯಕ್ತಿಯ ಗೌರವರ್ಥಕವಾಗಿ ನೆಟ್ಟ ಕಲ್ಲುಗಳಾಗಿರುತ್ತವೆ. ಈ ನೆಟ್ಟ ಕಲ್ಲುಗಳು ಊರಿನ ದನಗಳನ್ನು ರಕ್ಷಿಸಲು ಹೋಗಿ, ಯುದ್ಧದಲ್ಲಿ ಸತ್ತ, ಆಕಸ್ಮಿಕವಾಗಿ ಸತ್ತ ಹಾಗೂ ತಮ್ಮ ಗಂಡನೊಂದಿಗೆ ಸಹಗಮನ ಮಾಡಿದ ಮಹಾಸತಿಯರ ಅವರ ಸ್ಮಾರಕ ಶಿಲೆಗಳಾಗಿರುತ್ತವೆ. ಈ ಕಲ್ಲುಗಳ ಮೇಲೆ ಮಡಿದ ವ್ಯಕ್ತಿಯ ಹೆಸರು, ಕಾಲ ಮತ್ತು

ಕಾರಣಗಳನ್ನು ಬರೆಯಲಾಗಿರುತ್ತದೆ. ಹಾಗೂ ಸತ್ತವರ ಚಿತ್ರಗಳನ್ನು ಕೂಡ ಬಿಡಿಸಲಾಗಿರುತ್ತದೆ.[೬] ಶವಸಂಸ್ಕಾರದ ಆರಂಭದ ಹಂತದಲ್ಲಿ ಮರಣ ಹೊಂದಿದವನ ಆಯುಧಗಳು, ಅವನ ಗತಿಸಿ ಹೋದ ಜೀವನದಲ್ಲಿ ಸಹಾಯಕ್ಕೆ ಬರಲೆಂದು ಅವುಗಳನ್ನು ಅವನ ಸಮಾಧಿಯೊಡನೆ ಸೇರಿಸಿ ಬಿಡುತ್ತಿದ್ದರು. ಆದರೆ ಆಯುಧಗಳ ಬಗ್ಗೆ ಮಾನವನ ನಂಬಿಕೆ ಮತ್ತು ದೃಷ್ಟಿಕೋನ ಬೆಳೆದ ಹಾಗೆ ವೀರನ ಅಸ್ತ್ರ ಅಥವಾ ಆಯುಧಗಳ ಬಗ್ಗೆ ಅವನಿಗೆ ದೈವದತ್ತವಾದದ್ದು, ಅದೇ ಅವನ ಎಲ್ಲಾ ಗೆಲುವಿಗೆ ಕಾರಣವಾಯಿತೆಂದು ಭಾವಿಸಿ, ಅದನ್ನೋ ವೀರನ ಮರಣದ ನಂತರ ವೀರನಷ್ಟೇ ಗೌರವದಿಂದ ಕಾಣಲಾರಂಭಿಸಿದರು. ಉದಾಹರಣೆಗೆ ಆಂಧ್ರಪ್ರದೇಶ ಪೋತರಾಜುವನ್ನು ಅವನ ಆಯುಧವಾದ ಬರ್ಚಿಯ ಮೂಲಕ ಆರಾಧಿಸುತ್ತಾರೆ.[೭] ೧೨ನೇ ಶತಮಾನದ ಫಲ ನಾಡಿನ ವೀರರ ಆಯುಧಗಳನ್ನು ಕಾರಂಪೂಡಿಯಲ್ಲಿ ಇಂದಿಗೂ ಆರಾಧಿಸುವುದನ್ನು ಸ್ಮರಿಸಬಹುದು.[೮] ವೀರರ ಶಸ್ತ್ರಾಸ್ತ್ರಗಳನ್ನು ಪೂಜಿಸುವ ಸಂಪ್ರದಾಯ ಚಿತ್ರದುರ್ಗ ಜಿಲ್ಲೆಯ ಕೆಲವು ಕಡೆಗಳಲ್ಲಿ ಇಂದಿಗೂ ಪ್ರಚಲಿತದಲ್ಲದೆ. ಚಿತ್ರದುರ್ಗ ಜಿಲ್ಲೆಯ ಕೆಲವು ಕಡೆ ಗೊಲ್ಲ ಮತ್ತು ಬೇಡ ಜನಾಂಗದವರು ತಮ್ಮ ಜನಾಂಗದ ಒಳಿತಿಗಾಗಿ ಹೋರಾಟ ಮಾಡಿದ ವೀರರ ಹೆಸರಿನಲ್ಲಿ ಕತ್ತಿಯನ್ನು, ಬಿಲ್ಲು ಮತ್ತು ಬಾಣವನ್ನು ಇಟ್ಟುಕೊಂಡು ಪೂಜಿಸುತ್ತಿರುವುನ್ನು ಕಾಣಬಹುದು. ಹಾಗೆಯೇ ಇದೇ ಪ್ರದೇಶದ ಸುತ್ತುಮುತ್ತ 'ವೀರ ಸಿರಿಯಣ್ಣ' 'ಗಾದ್ರಿಪಾಲನಾಯಕ' ಎಂಬುವರ ಆಯುಧಗಳನ್ನು ಇಂದಿಗೂ ಪೂಜಿಸುತ್ತಾರೆ.[೯]

ಬ್ರಿಟಿಷರ ವಿರುದ್ಧ ಹೋರಾಡಿ ಮಡಿದ ವೀರ ಸಂಗೊಳ್ಳಿರಾಯಣ್ಣ ಸ್ನೇಹಿತನ ಕುತಂತ್ರದಿಂದ ಆಂಗ್ಲರಿಗೆ ಸೆರೆಯಾದ. ಅವನನ್ನು ಕೊಂದು ಬಿಡಬೇಕು ಎಂದು ತೀರ್ಮಾನಿಸಿದ ಅಧಿಕಾರಿಗಳು ಕ್ಷಮಾಪತ್ರ ಬರುವುದಕ್ಕೂ ಕಾಯಲಿಲ್ಲ. ಆ ಪತ್ರ ಬಂದರೆ ರಾಯಣ್ಣ ಬದುಕಿ ಮೋಸ ಮಾಡಿದ ಸ್ನೇಹಿತನನ್ನು ಸೆದೆಬಡಿಯುತ್ತಾನೆಂದು ಯೋಚಿಸಿ ಕೊಂದುಬಿಟ್ಟರು. ರಾಯಣ್ಣಗೆ ಒದಗಿಬಂದ ದುರ್ಮರಣಕ್ಕೆ ಮರುಗಿದ. ಜನ ಅವನ ಪರಾಕ್ರಮ ಗುಣಗಳಿಗೆ ಮಾರುಹೋದ ಜನತೆ ಯಾವ ಮರಕ್ಕೆ ಅವನನ್ನು ನೇಣುಹಾಕಿ ಪ್ರಾಣ ತೆಗೆದರೋ ಅದೇ ಮರವನ್ನು ಸ್ಮಾರಕವಾಗಿ ಸ್ವೀಕರಿಸಿದರು. ಅದನ್ನೇ ಜನರು ನಂಬಿಕೆ ಎಂದು ನಡೆದುಕೊಳ್ಳವುದರ ಮೂಲಕ ತಮ್ಮ ಕೋರಿಕೆಗಳನ್ನು ಈಡೇರಿಸುವಂತೆ ಬೇಡಿಕೆ ಇಡತೊಡಗಿದರು. ಇದೇ ಶತಮಾನದಲ್ಲಿ ನಡೆದ ಸ್ವಾತಂತ್ರ ಸಂಗ್ರಾಮದಲ್ಲಿ ಅಗ್ರಗಣ್ಯ ಚಂದ್ರಶೇಖರ್ ಅಜಾದ್ ಸ್ಮಾರಕವೂ ಇದೇ ತೆರನಾಗಿದೆ. ಅಲಹಾಬಾದ್‌ನ್ ಇಂದಿನ ಅಜಾದ್ ಪಾರ್ಕ್‌ನಲ್ಲಿ ಒಂದು ನೇರಳೆ ಮರದ ಕೆಳಗೆ ಚಂದ್ರಶೇಖರ್ ಬ್ರಿಟಿಷರ್ ಗುಂಡಿಗೆ ಬಲಿ ಯಾಗದೆ ತಾನೇ ಗುಂಡು ಹಾರಿಸಿಕೊಂಡು ಮಡಿದ ನಂತರ ಸರಕಾರದವರು ಆ ಮರವನ್ನು ಕಡಿದು ಹಾಕಿದರು. ಆ ವೃಕ್ಷ ಹೋಗಿದ್ದಕ್ಕೆ ಜನ ಚಿಂತಿಸಲಿಲ್ಲ, ಅದೇ ಸ್ಥಳದಲ್ಲಿ ಮತ್ತೊಂದು ನೇರಳೆ ಗಿಡವನ್ನು ಬೆಳೆಸಿದರು. ಆದರೆ ಸ್ಮಾರಕದ ಜೊತೆಗೆ ಜನರ ವಿಶ್ವಾಸವು ಸೇರಿ ಸತ್ತವನಿಗೆ ಸಂಬಂಧಪಟ್ಟ ಯಾವುದೇ ವಸ್ತು ಸತ್ತವನ ಸ್ಮಾರಕವಾಗಬಲ್ಲದು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಮಾನವ ತನ್ನೊಂದಿಗೆ ಸಾಕಲು ಪ್ರಾರಂಭಿಸಿದ ಮೊದಲ ಪ್ರಾಣಿ ಎಂದರೆ ನಾಯಿ. ಇದು

ಬೇಟೆಯಲ್ಲಿ ಮಾನವನಿಗೆ ಬೆನ್ನೆಲುಬಾಗಿ ನಿಂತ ಪ್ರಾಣಿ. ಅನೇಕ ರೀತಿಯಿಂದ ನೆರವಾಗುವ ನಾಯಿಯ ಬಗ್ಗೆ ಮಾನವನಿಗೆ ಇಂದಿಗೂ ಇರುವ ವಿಶ್ವಾಸ ಹಾಗೂ ಕಾಳಜಿಯನ್ನು ವಿವರಿಸಲು ಸಾಧ್ಯವಿಲ್ಲ. ಅದನ್ನು ತನ್ನ ಮಗನಂತೆ ಸ್ನೇಹಿತನಂತೆ ಹಲವು ರೀತಿಗಳಲ್ಲಿ ನಡೆಸಿಕೊಳ್ಳುತ್ತಿದ್ದಾನೆ. ಬೇಟೆಯಾಡಿ ಯಶಸ್ವಿಯಾಗಿ ಬಂದ ನಂತರ ಬಂಗಾಳದ ಮಾಳರ್ ಎಂಬ ಜನಾಂಗದವರು ಔತಣವನ್ನು ನೀಡುತ್ತಾರೆ. ಬೇಟೆಯ ನಾಯಿಯನ್ನು ಕೊಂದವನಿಗೆ ದಂಡವನ್ನು ಹಾಕುತ್ತಾರೆ. ನಾಯಿಯ ಬಗ್ಗೆ ಇಷ್ಟು ಕಾಳಜಿ ತೋರಲು ಕಾರಣವೇನೆಂದರೆ ನಾಯಿ ತನ್ನ ಒಡೆಯನ ಬಗ್ಗೆ ತೋರುವ ನಿಷ್ಠೆ ಇದನ್ನು ಅರಿತ ರಾಕ್ಷಸರು ಮತ್ತು ದೈವಗಳು ಜನರನ್ನು ಮೋಸ ಮಾಡಲು ಅವರಿಗೆ ಪ್ರಿಯವಾದ ಶ್ವಾನದ ರೂಪದಲ್ಲಿ ಬರುವರೆಂಬ ನಂಬಿಕೆ ಇದೆ.[೧೦]

ಪಂಜಾಬ್ ರಾಜ್ಯದ ಲಾಹೋರಿನಲ್ಲಿ ಒಂದು ವೀರ ನಾಯಿಯ ಗೋರಿ ಇದೆ. ಶ್ವಾನ ಯಾವ ಸ್ಥಳದಲ್ಲಿ ಮೃತಪಟ್ಟಿತೋ ಅದೇ ಸ್ಥಳದಲ್ಲಿ ಅದರ ಸಮಾಧಿ ಇದೆ. ಈಗ ಅದು ಒಂದು ಪೂಜಾರ್ಹ ಸ್ಥಳವಾಗಿದೆ. ಬುಲಂದಷಾನಲ್ಲಿ ಮೂವರ ಸಂತರ ಸಮಾಧಿಗಳಿವೆ. ಅವುಗಳ ಬಳಿ ಅವರಿಗೆ ಪ್ರಿಯವಾದ ಶ್ವಾನವೊಂದರ ಸಮಾಧಿಯಿದೆ. ನಂತರ ವ್ಯಕ್ತಿಗಳ ಸಮಾಧಿಗಳನ್ನು ಕಂಡಷ್ಟೆ ಗೌರವದಿಂದ ಆ ಸಮಾಧಿಗಳನ್ನು ಕಾಣುತ್ತಾರೆ. ಮಧ್ಯಭಾರತ ಹಾಗೂ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ನಾಯಿಗಳಿಗೆಂದು ಕಟ್ಟಿಸಿರುವ ದೇವಾಲಯಗಳಿವೆ.[೧೧] ರಾಜಸ್ಥಾನದ ರಜಪೂತರ ವೀರರ ಕುದುರೆಗಳಿಗೆ ಸ್ಮಾರಕಗಳನ್ನು ನೆಟ್ಟಿದ್ದಾರೆ. ಮಣ್ಣಿನ ಕುದುರೆ ಬೊಂಬೆಗಳು ರಾಜಸ್ಥಾನದ ಹಳ್ಳಿಗಳ ಬಳಿ ಇರುವ ಗುಡಿಗಳಲ್ಲಿ ಸಾಮಾನ್ಯವಾಗಿವೆ. ಅಲ್ಲಿ ಅವುಗಳನ್ನೇ ಆರಾಧಿಸುತ್ತಾರೆ. ಚಿತ್ರದುರ್ಗ ಬೆಟ್ಟದ ಮೇಲೆ ಬೊಂಬೆ ಮನೆ ಎಂಬ ಮಂಟಪ ಇದೆ. ಇದರಲ್ಲಿ ಎರಡು ಕುದುರೆಗಳು ಮತ್ತು ಎರಡು ಆನೆಗಳ ಭಗ್ನ ಶಿಲ್ಪಗಳಿವೆ. ಅವು ಪಾಳೆಗಾರರ ಪಟ್ಟದ ಕುದುರೆ ಮತ್ತು ಆನೆ ಸ್ಮಾರಕಗಳು ಆಗಿರಬಹುದು ಎಂಬ ಸಂಶಯ ಬರುತ್ತದೆ. ಆಂಧ್ರಪ್ರದೇಶದ ಸನಪ ಎಂಬ ಗ್ರಾಮದಲ್ಲಿ ಮಾಧವರಾಜರ ಗುಡಿ ಇದೆ. ಅದರ ಮೇಲೆ ಕುದುರೆಯ ವಿಗ್ರಹ ಇರುವುದನ್ನು ಕಾಣಬಹುದು.[೧೨]

ಸ್ಮಾರಕ ಶಿಲ್ಪಗಳ ವೈಶಿಷ್ಟತೆ

ಸ್ಮಾರಕ ಶಿಲ್ಪಗಳು ತನ್ನದೇ ಆದ ವೈಶಿಷ್ಟತೆಯನ್ನು ಒಳಗೊಂಡಿದೆ. ಅವುಗಳೆಂದರೆ

೧. ವೀರನೊಬ್ಬನನ್ನೂ ಸ್ಮಾರಕವಾಗಿಸಿದ ಶಿಲೆಯೇ ವೀರ ಸ್ಮಾರಕ ಅಥವಾ ವೀರಗಲ್ಲು. ವೀರಗಲ್ಲುಗಳನ್ನು ಗುರುತಿಸುವುದು ಬಹಳ ಸುಲಭ ಸಾಮಾನ್ಯವಾಗಿ ಅವುಗಳ ಮೇಲೆ ಮೂರು ಅಥವಾ ಐದು ಹಂತಗಳಲ್ಲಿ ಶಿಲ್ಪ ರಚನೆ ಇರುತ್ತದೆ. ಕೆಳಗಿನ ಹಂತದಲ್ಲಿ ವೀರನು ತನ್ನ ಶತ್ರುಗಳೊಡನೆ ಹೋರಾಡುತ್ತಿರುವಂತೆಯು ಮದ್ಯದ ಹಂತದಲ್ಲಿ ಮಡಿದ ಅವನನ್ನು ದೇವತಾ ಸ್ತ್ರೀಯರು ವೀರ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವಂತೆಯೂ ಹಾಗೂ ಮೇಲಿನ ಭಾಗದಲ್ಲಿ ಭಗವಂತನ ಸಾನಿಧ್ಯದಲ್ಲಿ ಇರುವಂತೆಯೂ ಕೆತ್ತಲಾಗಿರುತ್ತದೆ.[೧೩] ಕೆಲವು ಕಲ್ಲುಗಳ ಮೇಲೆ ನಾಲ್ಕು ಹಂತದ

ಚಿತ್ರಗಳನ್ನು ಕಾಣಬಹುದು. ಕೆಲವು ವೀರಗಲ್ಲುಗಳ ಮೇಲೆ ಹಂತಗಳಿರದೆ, ಕುದುರೆ ಸವಾರಿ ಮಾಡುತ್ತಿರುವ ಅಥವಾ ಯುದ್ದ ಮಾಡುತ್ತಿರುವ ವೀರನ ಚಿತ್ರದಲ್ಲಿ ಅವನು ಬಿಲ್ಲನ್ನೋ, ಅಥವಾ ಖಡ್ಗವನ್ನೋ ಹಿಡಿದು ನಿಂತಿರುವ ವೀರನ ರಣರಂಗದ ಚಿತ್ರವಿರುತ್ತದೆ. ಕೆಲವು ಕಡೆ ಒಂದೇ ಹಂತದಲ್ಲಿ ವೀರನ ಚಿತ್ರದ ಪಕ್ಕದಲ್ಲಿ ದೇವತಾ ಸ್ತ್ರೀಯರು ಕೊಂಡೊಯ್ಯುತ್ತಿರುವ ಚಿತ್ರವು ಕಂಡುಬರುತ್ತದೆ. ಅಂದರೆ ಯುದ್ದದ ರಣರಂಗವನ್ನೋ ನೆನಪಿಗೆ ತರುವ ಯಾವುದೇ ಚಿತ್ರವಿದ್ದರೂ ಅದನ್ನು ವೀರಗಲ್ಲೆಂದೂ ಪರಿಗಣಿಸಬಹುದು. ಎಷ್ಟೋ ಕಡೆಗಳಲ್ಲಿ ವೀರನ ವಿಷಯವನ್ನು ಉಲ್ಲೇಖ ಮಾಡಿ, ಅವನ ಶೌರ್ಯದ ಗುಣಗಾನವನ್ನು ಮಾಡಲಾಗಿರುತ್ತದೆ. ವೀರಗಲ್ಲಿನ ಮೇಲೆ ಬರಹ ಇರಬಹುದು, ಇಲ್ಲದಿರಬಹುದು ಇನ್ನೂ ಕೆಲವು ಕಡೆ ವೀರನ ಚಿತ್ರವನ್ನೇ ಕೊರೆಯದೆ ಅವನ ಶೌರ್ಯವನ್ನು ಮಾತ್ರ ಕಂಡಿರಿಸುವುದನ್ನು ಕಾಣಬಹುದು. ಬರಹವುಳ್ಳ ವೀರಗಲ್ಲುಗಳನ್ನು ಶಾಸನ ಉಲ್ಲೇಖಿತ ವೀರಗಲ್ಲು ಎಂದು ಮತ್ತು ಶಾಸನ ಉಲ್ಲೇಖ ಇಲ್ಲದ ವೀರಗಲ್ಲುಗಳೆಂದು ಅಧ್ಯಯನ ಮಾಡಲಾಗಿದೆ. ಈ ಮೇಲಿನಂತೆ ಸ್ಮಾರಕ ಶಿಲ್ಪಗಳ ವೈಶಿಷ್ಟತೆಯನ್ನು ಕಾಣಬಹುದಾಗಿದೆ.

೨. ಶಸ್ತ್ರಧಾರಿಯಾದ ಪುರುಷ ಮತ್ತು ಅವನ ಜೊತೆ ಇನ್ನೊಬ್ಬ ಸ್ತ್ರೀ ಚಿತ್ರವಿದ್ದರೆ ಅವನು ಹೋರಾಡಿ ಸತ್ತ ವೀರನೆಂದು, ಅವನ ಜೊತೆ ಸಹಗಮನ ಮಾಡಿದ ಹೆಂಡತಿ ಎಂದು ತಿಳಿಯಬೇಕು. ಕೆಲವೊಮ್ಮೆ ಮೂರು, ನಾಲ್ವರು ಸ್ತ್ರೀಯರ ಚಿತ್ರವಿದ್ದು, ಅವರೆಲ್ಲರೂ ತಮ್ಮ ಗಂಡನ ಸಮೇತ ಸಹಗಮನ ಮಾಡಿರುತ್ತಾರೆ.

ಎ. ಕೆಲವು ಮಾಸ್ತಿಗಲ್ಲುಗಳ ಮೇಲೆ ಕೇವಲ ಸ್ತ್ರೀ ವಿಗ್ರಹವಿರುತ್ತದೆ. ಆಕಸ್ಮಾತ್ ಪುರುಷನ ಚಿತ್ರವಿದ್ದರೆ ಅದು ಒಂದು ಮೂಲೆಯಲ್ಲಿ ಚಿಕ್ಕದಾಗಿರುತ್ತದೆ.

ಬಿ. ಕೆಲವು ಮಾಸ್ತಿಗಲ್ಲುಗಳ ಮೇಲೆ ಒಂದು, ಮತ್ತು ಅದರ ಬಲಭಾಗದಿಂದ ಹೊರಟಿರುವಂತೆ ಒಂದು ಕೈ ಇರುತ್ತದೆ. ಆ ಕೈ ತುಂಬಾ ಬಳೆ, ತೋಳ್ಬಳೆಗಳು ಇರುತ್ತವೆ. ಇದನ್ನು 'ಒಂಟಿಕೈ ಮಾಸ್ತಿಗಲ್ಲು' ಎಂದೂ ಹಳ್ಳಿಗಳಲ್ಲಿ 'ವ್ಯಾಸನ ತೋಳು' ಎಂದು ಕರೆಯುವುದುಂಟು. ಕೆಲವು ಕಡೆ ಕಂಬದಿಂದ ಎರಡು ಕೈಗಳು ಹೊರಟಿರುವಂತೆ ಚಿತ್ರಿಸಿದ್ದಾರೆ, ಅದನ್ನು 'ಇಕ್ಕೈಯಿ ಮಾಸ್ತಿಗಲ್ಲು' ಎಂದು ಕರೆಯುತ್ತಾರೆ. ಇಂತಹ ಮಾಸ್ತಿಗಲ್ಲುಗಳು ಬಹಳ ವಿರಳ. ಎರಡು ರೀತಿಗಳಲ್ಲೂ, ಎಲ್ಲೋ ಒಂದು ಮೂಲೆಯಲ್ಲಿ ಗಂಡ ಹೆಂಡತಿಯರನ್ನು ಕೆತ್ತಿರುವುದುಂಟು. ಮೇಲಿನ ಮಾಸ್ತಿಗಳಲ್ಲಿ ಸ್ತ್ರೀ ವಿಗ್ರಹವಿರುವ ಕಡೆ ಗಮನಿಸಬೇಕಾದ ಕೆಲವು ಸಂಗತಿಗಳಿವೆ. ಸ್ತ್ರೀ ಅಥವಾ ಮಾಸ್ತಿ ಸಾಮಾನ್ಯವಾಗಿ ತನ್ನ ಬಲಗೈಯನ್ನು ಮೇಲಕ್ಕೆ ಚಾಚಿ, ಎಡಗೈಯಲ್ಲಿ ಒಂದು ಕಳಸವನ್ನು ಹಿಡಿದಿರುತ್ತಾಳೆ. ಎಡಗೈಯಲ್ಲಿ ಕನ್ನಡಿ ಹಿಡಿದಂತೆ ತೋರಿಸುವುದು ಉಂಟು. ಬಲಗೈ ಹೆಬ್ಬೆರಳು ಮತ್ತು ಅದರ ಪಕ್ಕದ ಬೆರಳುಗಳ ಮಧ್ಯೆ ನಿಂಬೆಯ ಹಣ್ಣನ್ನು ಹಿಡಿದಿರುತ್ತಾಳೆ. ಎರಡು ಕೈ ತುಂಬಾ ಬಳೆಗಳು ಇರುತ್ತವೆ. ತಲೆಯಿಂದ ಪ್ರಭಾವಳಿಯಂತೆ ಕಾಣುವುದು ಬೆಂಕಿಯ ಜ್ವಾಲೆಯ ದ್ಯೋತಕವಾಗಿರುತ್ತದೆ. ವೀರನ ಜೊತೆಯಲ್ಲಿ ಇಬ್ಬರು, ಮೂವರು ಸ್ತ್ರೀಯರ ಚಿತ್ರವಿದ್ದು, ಅವರಲ್ಲಿ ಒಬ್ಬಳ ಹಿಂದೆ

ಮಾತ್ರ ಜ್ವಾಲೆ ಇದ್ದರೆ ಆಕೆಯ ಮಾತ್ರ ಸಹಗಮನ ಮಾಡಿದಳೆಂದೂ ಇನ್ನೊಬ್ಬಳು ಸಹಗಮನ ಮಾಡದೆ ಉಳಿದಳೆಂದು ಭಾವಿಸಬೇಕೆಂದು ತೋರುತ್ತದೆ.[೧೪]

೩. ಚಿತ್ರದುರ್ಗದ ವಸ್ತುಸಂಗ್ರಹಾಲದಲ್ಲಿರುವ ಮಾಸ್ತಿಕಲ್ಲೊಂದರಲ್ಲಿ, ನಾಯಕನೊಬ್ಬ ಸತ್ತಾಗ ಅವನ ಜೊತೆ ಮಡಿದ ಅವನ ಒಂಭತ್ತು ಪತ್ನಿಯರ ವಿಗ್ರಹಗಳನ್ನು ಕೆತ್ತಲಾಗಿದೆ. ಕಲಶ, ಕನ್ನಡಿ, ಬಳೆಗಳು, ತೋಳ್ಬಂದಿ, ನಿಂಬೆ ಮೊದಲಾದ ಹಣ್ಣು ಮಂಗಳ ದ್ರವ್ಯಗಳಾಗಿದ್ದು, ಮಾಸ್ತಿಯು ಮುತ್ತೈದೆಯಾಗಿ ತನ್ನ ಗಂಡನಿರುವ ಸ್ವರ್ಗಲೋಕಕ್ಕೆ ಹೋದದನ್ನು ಸೂಚಿಸುತ್ತದೆ. ಎತ್ತಿದ ಬಲಗೈ ಜನತೆಗೆ ಆಶಿರ್ವಾದವನ್ನು ಮಾಡುವುದನ್ನು ತಿಳಿಸುತ್ತದೆ. ಮಂಡ್ಯ ಜಿಲ್ಲೆಯ ಪುರ ಗ್ರಾಮದ ಶಾಸನವೊಂದರಲ್ಲಿ ಈ ಬರಹವಿದೆ. "ಬುತ್ತಿಖರನು ಸ್ವರ್ಗಸ್ಥನಾದಲ್ಲಿ ಆತನ ಹೆಂಡತಿಯರು ಮೂವರು ತೋಳುಕವಿಕೂಟ ಕಂಬ" "ತೋಳುಕ್ಕೈ ಕೊಡು" ಎನ್ನುವ ಮಾತು ಸಹಗಮನಾಗುವ ಎಂಬ ಅರ್ಥದಲ್ಲಿ ಬರುತ್ತದೆ. ಸಹಗಮನ ಮಾಡುವ ಸ್ತ್ರೀ ಚಿತೆಯೇರಲು ಹೋಗುವಾಗ, ಅವಳ ಬಲಗೈಯ ಮುದ್ರೆಯನ್ನು ಕಲ್ಲಿನ ಮೇಲೆ ಒತ್ತಿಸಿಕೊಂಡು, ಬಳಿಕ ಅದನ್ನು ಸಾಲಂಕೃತವಾಗಿ ಇಡೀ ತೋಳಿನ ರೂಪದಲ್ಲಿ ಕೊರೆಯುತ್ತಿದ್ದಂತೆ ಊಹಿಸಬಹುದು. ಆದರೂ ಕಂಬದಿಂದ ತೋಳು ಹೊರಟಂತಿರುವ ಮಾಸ್ತಿಕಲ್ಲುಗಳು ಸಾಂಕೇತಿಕತೆಯನ್ನು ಇನ್ನೂ ಬಿಡಸಬೇಕಾಗಿದೆ. ಮಾಸ್ತಿಯು ಕೈಎತ್ತಿಕೊಂಡು ನಿಂತಿರುವ ಚಿತ್ರಗಳು ಭಾರತದ ಎಲ್ಲಾ ಕಡೆಗಳಲ್ಲಿ ದೊರಕುತ್ತವೆ.[೧೫] ವೀರಗಲ್ಲು ಮತ್ತು ಮಾಸ್ತಿಗಲ್ಲುಗಳ ಮೇಲಿರುವ ಶಿವಲಿಂಗದ ಚಿತ್ರವು ಅವರು ಭಗವಂತನ ಸಾನಿಧ್ಯಕ್ಕೆ ಹೋದರೆಂಬುವುದನ್ನು, ಸೂರ್ಯ ಚಂದ್ರರ ಚಿತ್ರಗಳು ಆ ವೀರ ಮತ್ತು ಮಾಸ್ತಿಯರ ಸ್ಮಾರಕಗಳಾದ ಶಿಲೆಗಳು ಶಾಶ್ವತವಾಗಿ ಉಳಿದು ಅವರ ಹೆಸರು ಲೋಕದಲ್ಲಿ ಎಂದೆಂದಿಗೂ ಉಳಿಯಲೆಂಬ ಹಾರೈಕೆಯನ್ನು ಸೂಚಿಸುತ್ತವೆ. ಪ್ರಾಚೀನ ಕಾಲದಲ್ಲಿ ಮದುವೆ ಮಂಟಪಕ್ಕೆ ಉತ್ಸವದಲ್ಲಿ ಹೋಗುತ್ತಿದ್ದ ವರನ ಕೈಯಲ್ಲಿ ಮೊದಲಾದ ನಿಂಬೆ ಹಣ್ಣನ್ನು ಇಡಿದು ಹೋಗುತ್ತಿರುವಂತೆ, ಮಹಾದೇವಿಯಕ್ಕನ ರಗಳೆ ಶಿವತತ್ವ ಚಿಂತಾಮಣಿ ಇತ್ಯಾದಿ ಗ್ರಂಥಗಳಲ್ಲಿ ಕಂಡುಬರುತ್ತದೆ. ಮಾಸ್ತಿಯ ಕೈಯಲ್ಲಿ ಮೊದಲಾದ ನಿಂಬೆಯ ಹಣ್ಣು ಇರುವುದು ಆ ಕಾರಣಕ್ಕಾಗಿ ಎಂದು ತೋರುತ್ತದೆ. ಅಲ್ಲಿ ಗಂಡು ವಧುವಿನ ಮನೆಗೆ ಬರುತ್ತಾನೆ. ಇಲ್ಲಿ ಹೆಂಡತಿ ಗಂಡನ ಮನೆಗೆ (ವೀರಸ್ವರ್ಗಕ್ಕೆ) ಹೋಗುತ್ತಾಳೆ, ಈ ರೀತಿಯ ವೈಶಿಷ್ಟ್ಯತೆಗಳನ್ನು ಸ್ಮಾರಕ ಶಿಲ್ಪಗಳಲ್ಲಿ ಕಾಣಬಹುದಾಗಿದೆ.[೧೬]

ಕೊನೆ ಟಿಪ್ಪಣಿಗಳು

೦೧. ಶೇಷಶಾಸ್ತ್ರಿ, ಆರ್. ೨೦೦೭, ಕರ್ನಾಟಕದ ವೀರಗಲ್ಲುಗಳು, ಪುಟ, ೧೨

೦೨. ಅದೇ, ಪುಟ, ೧೨.

೦೩. ಪರಮಶಿವಮೂರ್ತಿ, ಡಿ.ವಿ. ಕನ್ನಡ ಶಾಸನ ಶಿಲ್ಪ, ಪುಟ, ೧೪೩.

೦೪. ಅದೇ, ಪುಟ, ೧೩

೦೫. ಕಲುಬುರ್ಗಿ ಎಂ. ಎಂ. ೨೦೧೧, ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪುಟ – ೧೯.

೦೬. ಶೇಷಶಾಸ್ತ್ರಿ, ಆರ್. ಪೂರ್ವೋಕ್ತ, ಪು. ೧೩.

೦೭. ಅದೇ, ಪುಟ–೧೪.

೦೮. ಅದೇ, ಪುಟ–೧೬.

೦೯. ಅದೇ, ಪುಟ–೧೯.೧೦

೧೦. ಅದೇ, ಪುಟ–೧೯.

೧೧. ಮಂಜುನಾಥ. ಮಾಸ್ತಿಕಲ್ಲು ವೀರಗಲ್ಲು ಮತ್ತು ನಿಸಿದ ಶಾಸನಗಳು, ಪುಟ. ೪

೧೨. ಶ್ಲೇಷಶಾಸ್ತ್ರಿ, ಆರ್. ಪೂರ್ವೋಕ್ತ, ಪುಟ. ೨೦.

೧೩. ಅದೇ, ಪುಟ–೨೧.

೧೪. ಅದೇ, ಪುಟ–೨೨.

೧೫. ಚಿದಾನಂದಮೂರ್ತಿ ಎಂ. ೧೯೮೪, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಪುಟ–೧೫

೧೬. ಅದೇ, ಪು, ೧೫–೧೬.

141199

ಕಿರಿಗನ್ನದ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಾಯ – ನಾಲ್ಕು
ಸ್ಮಾರಕ ಶಿಲ್ಪಗಳ ಪ್ರಕಾರಗಳು

ಅಧ್ಯಾಯ – ನಾಲ್ಕು
ಸ್ಮಾರಕ ಶಿಲ್ಪಗಳ ಪ್ರಕಾರಗಳು

ವೀರಗಲ್ಲು

ಕರ್ನಾಟಕದ ಶಾಸನಗಳಲ್ಲಿ ದೊರೆಯುವಂತಹ ಮೂಲ ಸಾಮಗ್ರಿಗಳನ್ನು ವಿಭಿನ್ನವಾದ ದೃಷ್ಟಿಯಿಂದ ವಿಶ್ಲೇಷಿಸಿದ ಯಶಸ್ಸು ಎಂ.ಚಿದಾನಂದ ಮೂರ್ತಿಯವರಿಗೆ ಸಲ್ಲುತ್ತದೆ. ಇವರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯಲ್ಲಿ ಉಲ್ಲೇಖಿಸಿರುವ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದು ಔಚಿತ್ಯವೆಂದೆನಿಸುತ್ತವೆ. ರಾಜರ ಕಾಲದಿಂದ ಕಾಲಕ್ಕೆ ಆಡಳಿತ ನಡೆಸಿರುವುದಕ್ಕೆ ಇತಿಹಾಸವೆಂಬ ಭಾವನೆ ಬಹಳ ಪ್ರಚಲಿತವಾಗಿದೆ. ಜನತೆ ಬಾಳಿ ಬದುಕಿದ ರೀತಿ, ಅನುಸರಿಸಿದ ಧರ್ಮ, ಬೆಳೆಸಿದ ಕಲೆ, ಅವರ ಜೀವನ ಸಮಸ್ಯೆಗಳು, ಅವರ ಜೀವನದ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಆ ದೇಶದ ಮತ್ತು ಜನತೆಯ ಇತಿಹಾಸ.[೧] ಈ ರೀತಿಯ ಇತಿಹಾಸವನ್ನು ಒದಗಿಸುವಲ್ಲಿ ಸ್ಮಾರಕ ಶಿಲ್ಪಗಳು ಬಹಳ ಪ್ರಮುಖವಾದವು. ನಿಧಾನವಾದ ವ್ಯಕ್ತಿಯನ್ನು ಸಮಾಧಿ ಅಥವಾ ಸಂಸ್ಕಾರ ಮಾಡಿದ ನಿರ್ಧಿಷ್ಟ ಸ್ಥಳದ ಗುರುತಿಗಾಗಿಯೋ, ಮಡಿದವರ ಸ್ಮರಣಾರ್ಥವಾಗಿಯೋ, ಕೆಲವಾರು ಸಂಕೇತಗಳನ್ನೋ, ಗುರುತು ಗಳನ್ನೋ ಒಂದು ನಿಗಧಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಇವು ಸಾಮಾನ್ಯವಾಗಿ ಆಯಾ ದೇಶಗಳಲ್ಲಿನ ಧರ್ಮ, ನಂಬಿಕೆ, ಸಾಮಾಜಿಕ ಪ್ರತಿಷ್ಠೆಗಳನ್ನು ಅನುಸರಿಸಿಯೇ ಬೆಳೆದಿವೆ. ಪ್ರಪಂಚದಾದ್ಯಂತ ಇಂತಹ ಸ್ಥಳಗಳ ಮೇಲೆ ತಮ್ಮದೇ ಆದಂತಹ ಸ್ಮಾರಕಗಳನ್ನು ಕಟ್ಟಿರುವುದನ್ನು ಕಾಣಬಹುದು.[೨]

ವೀರರು ತಮ್ಮ ಸ್ವಾರ್ಥಕ್ಕಾಗಿ ಮಡಿಯದೆ ಸಮಾಜದ ಒಳಿತ್ತಿಗಾಗಿ ಪ್ರಾಣತ್ಯಾಗ ಮಾಡಿದ್ದರಿಂದ ಇವರ ಸ್ಮರಣಾರ್ಥವಾಗಿ ಮಾಡಿರುವ ಸ್ಮಾರಕ ಶಿಲ್ಪಗಳೇ ವೀರಗಲ್ಲುಗಳು.[೩]

ಅಂದರೆ ಇಚ್ಛಾಮರಣವನ್ನು ಆಹ್ವಾನಿಸಿದವರ ಗೌರವಾರ್ಥ ನೆಟ್ಟ ನಿಸಿದಿಗಳ ಜೊತೆ ಜೊತೆಗೆ ರಣರಂಗದಲ್ಲಿ ಮಡಿದ ಯೋಧರ ವೀರಗಲ್ಲುಳೂ ಸೇರಿಕೊಳ್ಳವುತೊಡಗಿದವೆಂದರ್ಥ. ಯುದ್ಧವನ್ನು ತೀವ್ರವಾಗಿ ಪ್ರೀತಿಸಿ ಕೊನೆಯುಸಿರಿರುವವರೆಗೂ ಕಾದಾಡಿದ ಮಾವನಗಂಧಹಸ್ತಿಪಿಟ್ಟುಗನ, ವೈರಿ ಸೈನ್ಯಕ್ಕೆ ಕಠೋರನಾದ ಬೋಯಿಗನ, ಬಾಗಿಯೂರಿನ್ನಿ ವೀರಮರಣ ಹೊಂದಿದ್ದ ಸಾವಿಯಬ್ಬೆಯ ವೀರಗಲ್ಲುಗಳು ಇದಕ್ಕೆ ನಿದರ್ಶನಗಳು.[೪] ಅವರು ಮಾಡಿದ ಹೋರಾಟ ಇಂದಿನ ನಮ್ಮ ದೃಷ್ಟಿಯಲ್ಲಿ ಏನಾದರೂ ಆಗಿರಲಿ ಸಮಾಜದ ಒಳಿತಿಗಾಗಿ ಜೀವನದ ಹಂಗನ್ನು ತೋರಿದ ಅವರು ಧೀಮಂತಿಕೆಯನ್ನು ಊಹಿಸಲು ಅಸಾಧ್ಯವಾದುದು. ಅವರ ಹೋರಾಟವು ಸಾಮಾಜಿಕ ನಿಷ್ಠೆ, ಸ್ವಾಮೀ ಭಕ್ತಿ ಸ್ವಾಭಿಮಾನಗಳಿಂದ ಕೂಡಿದುದಾಗಿದೆ.

ಪ್ರಸ್ತುತ ಅಧ್ಯಯನ ವೀರಗಲ್ಲುಗಳನ್ನು ಅಧ್ಯಯನದ ದೃಷ್ಟಿಯಿಂದ ಹೋರಾಟದ ಪ್ರಭೇದಗಳನ್ನು ಗಮನದಲ್ಲಿಟ್ಟಕೊಂಡು ವೀರನಾದವನು ಯಾವ ರೀತಿಯ ವೀರಕೃತ್ಯದಲ್ಲಿ ಮಡಿದ ಎಂಬುದನ್ನು ವಿವಿಧ ಪ್ರಕಾರಗಳಾಗಿ ವಿಂಗಡಿಸಿಕೊಂಡು ವಿವರಿಸುವ ಪ್ರಯತ್ನ ಮಾಡಲಾಗಿದೆ. ಇದಕ್ಕೆ ಪೂರಕವಾಗಿ ಆ ಕೃತ್ಯದ ಘಟನೆಯ ಸಂಪೂರ್ಣ ಚಿತ್ರಣವನ್ನು ಪುನರ್‌ರಚಿಸಲು ತಾಲೂಕಿನ ಎಲ್ಲಾ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ಕಂಡಬಂದ ವೀರಗಲ್ಲುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಯುದ್ಧದಲ್ಲಿ ಮಡಿದ ವೀರರ ಸ್ಮಾರಕ ಶಿಲ್ಪಗಳು

ರಾಜ್ಯ ವಿಸ್ತರನಣೆಗಾಗಿಯೋ, ವ್ಯಕ್ತಿ ಮಾತ್ಸರ್ಯದಿಂದಲೋ ಅರಸರಲ್ಲಿ ಯುದ್ಧಗಳು ನೆಡೆಯುತ್ತಿದ್ದವು. ಇಂಥ ಹೋರಾಟಗಳಲ್ಲಿ ಸೈನಿಕರದೇ ಮಹತ್ವದ ಪಾತ್ರವಾಗಿತ್ತು. ಒಂದು ರೀತಿಯಲ್ಲಿ ಹೇಳುವುದಾದರೆ ಎರಡು ಕಡೆಯ ಸೈನಿಕರ ಹೋರಾಡಿ ಮಡಿದ ವೀರನ ಸೇವೆಯನ್ನು ಮೆಚ್ಚಿ ಅವನ ವೀರತನವನ್ನು ಹೊಗಳುವ ಸ್ಮಾರಕ ಶಿಲೆಗಳನ್ನು ಅರಸರೋ ಅಥವಾ ಅವನ ಕೈಕೆಳಗಿನ ಅಧಿಕಾರಿಗಳೋ ಹಾಕಿಸುತ್ತಿದ್ದರು. ಇದೇ ಸ್ಮಾರಕಗಳಲ್ಲಿ ವೀರನ ಮನೆಯವರಿಗೆ ದತ್ತಿ ಬಿಟ್ಟ ವಿಷಯವನ್ನು ಬರೆಯುಸುತ್ತಿದ್ದರು. ಆದ್ದರಿಂದ ವೀರಗಲ್ಲುಗಳು ಒಂದು ರೀತಿ ದಾನಶಾಸನಗಳೂ ಆಗುತ್ತವೆ. ಸ್ಮಾರಕ ಶಿಲೆಗಳೂ ಆಗುತ್ತವೆ. ಈ ರೀತಿಯ ಯುದ್ಧದಲ್ಲಿ ಮಡಿದ ಸ್ಮಾರಕ ಶಿಲ್ಪಗಳು ತಾಲೂಕಿನ ಬಹುತೇಕ ಕಡೆ ಕಂಡುಬರುವುದನ್ನು ಕಾಣಬಹುದು.[೫]

ಸಂಖ್ಯೆ : ೦೧

ಶಿಲ್ಪ : ತುರುಗೋಳ್

ಗ್ರಾಮ : ಬೂದಗುಂಪಾ

ಸ್ಥಳ : ಕೊಪ್ಪಳ–ಗಂಗಾವತಿ ರಸ್ತೆ ನಡುವೆ

ವಿಸ್ತೀರ್ಣ : ೩.೧೦ ಅಡಿ, ಉದ್ದ, ಮತ್ತು ೨,೮ ಅಡಿ ಅಗಲ.

ಕಾಲಮಾನ : ಕ್ರಿ. ಶ. ಸು. ೯ನೇ ಶತಮಾನ

ಬಿಳೆಬಾವಿಯು ಕೊಪ್ಪಳ – ಗಂಗಾವತಿ ರಸ್ತೆಯಲ್ಲಿ ಬೂದಗುಂಪದಿಂದ ಈಶ್ಯಾನಕ್ಕೆ ಸುಮಾರು ೨ ಕಿ. ಮೀ. ದೂರದಲ್ಲಿದೆ. ಗ್ರಾಮದ ಆಂಜನೇಯ ದೇವಾಲಯದ ಹತ್ತಿರ ಈ ಶಿಲ್ಪವಿದೆ. ಈ ಸ್ಮಾರಕದಲ್ಲಿ ವೀರನು ತನ್ನ ಎರಡು ಕೈಗಳನ್ನು ಮೇಲೆ ಎತ್ತಿಕೊಂಡು ಭುಜದ ಮೇಲೆ ಅಡ್ಡವಾಗಿ ಕೊಲನ್ನು ಹಿಡಿದುಕೊಂಡಿದ್ದಾನೆ. ಈ ಕೋಲಿನ ಎರಡು ತುದಿಯಲ್ಲಿ ಬಿಂದಿಗೆಗಳನ್ನು ಹೋಲುವ ವಸ್ತುಗಳಿವೆ (ದಂಡೆ). ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಿದ್ದಾನೆ. ವೀರನ ಕೊರಳಲ್ಲಿ ವೈವಿದ್ಯಮಯ ಆಭರಣಗಳಿವೆ. ಕಿವಿಯಲ್ಲಿ ಕಿವಿಯೋಲೆ, ಕೈ ಮತ್ತು ಕಾಲುಗಳಲ್ಲಿ ಕಡಗಗಳಿವೆ. ವಿಶಿಷ್ಠವಾದ ಉಡುಪುಗಳಿವೆ. ವೀರನ ಬಲಭಾಗದಲ್ಲಿ ವೀರನ ಪತ್ನಿಯ ಶಿಲ್ಪವಿದೆ. ಇಲ್ಲಿ ಮಹಾಸತಿಯು ಕೈಮುಗಿದು ನಿಂತಿದ್ದಾಳೆ. ಮಾಸ್ತಿಯ ಕಿವಿಯಲ್ಲಿ ದೊಡ್ಡದಾದ ಕಿವಿಯೋಲೆ ಮತ್ತು ಕೈ ಕಾಲುಗಳಲ್ಲಿ ಕಡಗಗಳಿವೆ. ಈ ಶಿಲ್ಪದ ಮೇಲ್ಭಾಗದಲ್ಲಿ ಎರಡು ತುರುಗಳು ಮತ್ತು ಸೂರ್ಯ ಚಂದ್ರರನ್ನು ಚಿತ್ರಿಸಲಾಗಿದೆ.[೬]

ಸಂಖ್ಯೆ : ೦೨
ಶಿಲ್ಪ : ತುರುಗೋಳ್
ಗ್ರಾಮ : ಬೂದುಗುಂಪ
ಸ್ಥಳ : ಊರಿನ ಹೊರಭಾಗದಲ್ಲಿ
ವಿಸ್ತೀರ್ಣ : ೪.೨ ಅಡಿ ಉದ್ದ, ಮತ್ತು ೨.೫ ಅಡಿ ಅಗಲ
ಕಾಲಮಾನ : ಕ್ರಿ. ಶ. ಸು. ೯ನೇ ಶತಮಾನ

ಬೂದುಗುಂಪ ಗ್ರಾಮದ ಹೊರಭಾಗದಲ್ಲಿ ಈ ಸ್ಮಾರಕ ಶಿಲ್ಪವಿದೆ. ಇದು ರಾಷ್ಟ್ರಕೂಟರ ಕಾಲದೆಂದು ಗುರುತಿಸಿಬಹುದು ಆದರೆ ಈ ಶಿಲ್ಪವನ್ನು ಸಂಶೋಧಕರಾದ ವಾಸುದೇವ ಬಡಿಗೇರ ಅವರು ವಿಜಯನಗರ ಕಾಲಕ್ಕೆ ಸೇರಿದ್ದು, ಇದು ಅಪರೂಪದ ವೀರಗಲ್ಲು ಎಂದು ಗುರುತಿಸುತ್ತಾರೆ. ಈ ಸ್ಮಾರಕದಲ್ಲಿ ಆರು ಜನ ವೀರರು ಮತ್ತು ಮೂರು ಎಮ್ಮೆ (ಕೋಣ), ಒಂದು ಎತ್ತು. ಒಂದು ನೇಗಿಲಿನ ಚಿತ್ರಣವಿದೆ. ಆರು ಜನ ವೀರರಲ್ಲಿ ಒಬ್ಬ ವೀರನನ್ನು ಪ್ರಧಾನವಾಗಿ ತೋರಿಸಲಾಗಿದೆ. ವೀರನು ಬಲಗೈಯಲ್ಲಿ ಚೂರಿ, ಎಡಗೈಯಲ್ಲಿ ಬಿಲ್ಲು, ಹಿಡಿದು. ಸೊಂಟದಲ್ಲಿ ಚಾಕುವನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನು ಚಲಿಸುವ ಯುದ್ದಸನ್ನದ್ದ ಭಂಗಿಯಲ್ಲಿದ್ದು, ಎದುರಾಗಿರುವ ನಾಲ್ಕು ಜನ ಶತ್ರುಗಳಲ್ಲಿ ಇಬ್ಬರು ವೀರರು ಬಿಲ್ಲು ಬಾಣವನ್ನು ಪ್ರಯೋಗಿಸುತ್ತಿದ್ದಾರೆ. ಈ ಶತ್ರುಗಳ ಕೆಳಭಾಗದಲ್ಲಿ ಒಬ್ಬ ವೀರನು ಮಡಿದು ಬಿದ್ದಿದ್ದಾನೆ. ಮೇಲ್ಭಾಗದಲ್ಲಿ ತುರುಗೋಳ್ ನೇಗಿಲಿನ ದೃಶ್ಯಗಳಿವೆ.[೭]

ಸಂಖ್ಯೆ : ೦೩
ಶಿಲ್ಪ : ತುರುಗೋಳ

ಗ್ರಾಮ : ವಿಠಲಾಪುರ

ವಿಸ್ತೀರ್ಣ : ೩.೫ ಅಡಿ ಉದ್ದ, ಮತ್ತು ೨ ಅಡಿ ಅಗಲ

ಕಾಲ : ಕ್ರಿ.ಶ.ಸು. ೧೧ನೇ ಶತಮಾನ

ವಿಠಲಾಪುರದಿಂದ ಕರಡಿಗುಡ್ಡಕ್ಕೆ ಹೋಗುವ ಮಾರ್ಗದ ಮಧ್ಯ ಗ್ರಾಮವಾದ ಗೊಲ್ಲಪನ ಮಟ್ಟಿಯಲ್ಲಿ ಈ ತುರುಗೋಳ ಶಿಲ್ಪ ದೊರೆಯುತ್ತದೆ. ಈ ಶಿಲ್ಪದಲ್ಲಿ ವೀರನು ಕೈಯಲ್ಲಿ ಕೋಲು ಹಿಡಿದಿದ್ದಾನೆ. ಈ ಶಿಲ್ಪದಲ್ಲಿ ಎತ್ತು, ಹಸು, ಒಂದು ಕರುವಿನ ಚಿತ್ರಣವಿದೆ. ವೀರನ ಸೊಂಟದಲ್ಲಿ ಬಾಕುವಿದೆ. ದನಗಳನ್ನು ವಿಶೇಷವಾಗಿ ಅಲಂಕರಿಸಿ ಚಿತ್ರಿಸಲಾಗಿದೆ. ಈ ಪದ್ಧತಿ ಇಂದಿಗೂ ಇಲ್ಲಿ ಮುಂದುವರೆದಿದೆ. ವಿಶೇಷ ಸಂದರ್ಭಗಳಲ್ಲಿ ಹಸುಗಳಿಗೆ ಕೊರಳಲ್ಲಿ ಗಂಟೆ, ಗೊಂಡೇವು, ಕೋಡಂಚು, ಗೆಜ್ಜೆಸರ ಮುಂತಾದವುಗಳಿಂದ ಸಿಂಗರಿಸುವುದನ್ನು ಕಾಣುತ್ತೇವೆ. ಕರವು ಹಸುವಿನ ಹಾಲನ್ನು ಕುಡಿಯುತ್ತಿರುವುದರ ದೃಶ್ಯವನ್ನು ಚಿತ್ರಿಸಲಾಗಿದೆ. ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರರನ್ನು ಕಂಡಿರಿಸಲಾಗಿದೆ. ಈ ಭಾಗದಲ್ಲಿ ಸಂಚರಿಸಿ ದನಗಳನ್ನು ಮತ್ತು ಕುರಿಗಳನ್ನು ಮೇಯಿಸುವವರು ಈ ಸ್ಮಾರಕವನ್ನು ಆರಾಧಿಸುತ್ತಾರೆ. ವಿಶೇಷವಾಗಿ ಇದನ್ನು ಆರಾಧಿಸುವುದರಿಂದ ಕುರಿಗಳಿಗೆ, ದನಗಳಿಗೆ ಯಾವುದೇ ಪೀಡೆಗಳು ರೋಗ ರುಜಿನೆಗಳು ಬರುವುದಿಲ್ಲವೆಂಬ ಬಲವಾದ ನಂಬಿಕೆ ಇಲ್ಲಿಯ ಜನರದ್ದು.[೮]

ಸಂಖ್ಯೆ : ೦೪

ಸ್ಥಳ : ನಾಗಮ್ಮ ವಾಲೇಕಾರ್ ಹೊಲದಲ್ಲಿ

ಶಿಲ್ಪ : ವೀರಗಲ್ಲು

ಗ್ರಾಮ : ಮುಕ್ಕುಂಪಿ

ವಿಸ್ತೀರ್ಣ : ಉದ್ದ ೫.೧ ಅಡಿ, ಮತ್ತು ಅಗಲ ೨.೩ ಅಡಿ

ಕಾಲಮಾನ : ಕ್ರಿ.ಶ.ಸು. ೧೨ನೇ ಶತಮಾನ

ಈ ಸ್ಮಾರಕ ಶಿಲ್ಪವನ್ನು ಬಿಳಿ ಬಳಪದ ಶಿಲೆಯಲ್ಲಿ ಮೂರು ಹಂತಗಳಲ್ಲಿ ಕಂಡಿರಿಸಲಾಗಿದೆ. ಮೊದಲ ಹಂತದಲ್ಲಿ ಅಶ್ವರೂಢರಾಗಿರುವ ವೀರರಿಬ್ಬರೂ ಭರ್ಚಿಗಳನ್ನು ಹಿಡಿದು ಪರಸ್ಪರ ಅಭಿಮುಖವಾಗಿರುವಂತೆ ಚಿತ್ರಿಸಲಾಗಿದೆ. ವೀರರಿಬ್ಬರೂ ಕೇಶವನ್ನು ನೆತ್ತಿಯ ಮೇಲಿರುವಂತೆ ಕಟ್ಟಿರುವರು. ಕುದುರೆಯ ಹೋರಾಟಕ್ಕೆ ಬಲಿಯಾಗಿರುವ ಒರ್ವನನ್ನು ಶಿಲ್ಪಿಯು ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಎರಡನೇ ಹಂತದಲ್ಲಿ ಮಂಟಪದೊಳಗೆ ಕೈ ಮುಗಿದುಕೊಂಡು ಪದ್ಮಾಸನದಲ್ಲಿ ಕುಳಿತಿರುವ ವೀರನನ್ನು ಅಪ್ಸರೆಯರಿಬ್ಬರೂ ಚಾಮರಸೇವೆಯೊಂದಿಗೆ ಸ್ವರ್ಗಕ್ಕೆ ಕರೆದೊಯ್ಯುವ ಚಿತ್ರಣವಿದೆ. ಕೊನೆಯ ಹಂತದಲ್ಲಿ ಶಿವಲಿಂಗ ಹಾಗೂ ಲಿಂಗವನ್ನು ಪೂಜಿಸುತ್ತಿರುವ ಯತಿ ಮತ್ತು ನಂದಿಯನ್ನು ಕೆತ್ತಲಾಗಿದೆ. ಈತನ ಬಲಭಾಗದಲ್ಲಿ ವೀರರಿಬ್ಬರೂ ಪೀಠದ ಮೇಲೆ ಕೈ ಮುಗಿದುಕೊಂಡು ಕುಳಿತಿರುವ ದೃಶ್ಯವಿದೆ. ಈ ಸ್ಮಾರಕದ ವಿಶೇಷವೆಂದರೆ ಹೋರಾಟವೊಂದರಲ್ಲಿ

ವೀರರಿಬ್ಬರೂ ಮಡಿದಿದ್ದಾರೆ, ಆದರೆ ಸ್ವರ್ಗದ ಹಂತದಲ್ಲಿ ಒಬ್ಬ ವೀರನು ಮಾತ್ರವೇ ಸ್ವರ್ಗ ಪ್ರಯಾಣ ಮಾಡುತ್ತಿರುವಂತೆ ಕಂಡರಿಸಿರುವುದು.[೯]

ಸಂಖ್ಯೆ : ೦೫

ಸ್ಥಳ : ನಾಗಮ್ಮ ವಾಲೇಕಾರ್ ಹೊಲದಲ್ಲಿ

ಶಿಲ್ಪ : ವೀರಗಲ್ಲು

ವಿಸ್ತೀರ್ಣ: ४.೫ ಉದ್ದ ಅಡಿ, ೨.೩ ಅಗಲ ಅಡಿ

ಗ್ರಾಮ : ಮುಕ್ಕುಂಪಿ

ಕಾಲಮಾನ : ಕ್ರಿಶ ಸುಮಾರು ೧೨ನೇ ಶತಮಾನ

ಈ ಸ್ಮಾರಕವು ಕ್ರಿಶ. ಸುಮಾರು ೧೨ನೇ ಶತಮಾನಕ್ಕೆ ಸಂಬಂಧಿಸಿದೆ. ಬಳಪದ ಶಿಲೆಯಲ್ಲಿ ಮೂರು ಹಂತಗಳಲ್ಲಿ ಕೆತ್ತಲಾಗಿದೆ. ದೃಶ್ಯ ಒಂದರಲ್ಲಿ ಯುದ್ದಸನ್ನದ್ದನಾಗಿರುವ ವೀರನು ಎಡಗೈಯಲ್ಲಿ ಕುದುರೆಯ ಲಗಾಮುನ್ನು ಹಿಡಿದು, ಬಲಗೈಯಲ್ಲಿರುವ ಬಾಕುವಿನಿಂದ ಮತ್ತೊಂಬ್ಬ ಶತ್ರುವಿನ ಕುದುರೆಗೆ ಹಿರಿಯಲು ಮುಂದಾಗಿರುವನು. ಅಶ್ವರೂಢರಾಗಿರುವ ಇಬ್ಬರು ಶತ್ರುಗಳು ಬಲಗೈಯಲ್ಲಿ ಭರ್ಚಿಗಳನ್ನು ಹಿಡಿದು ವೀರನ ಕಡೆ ಎಸೆಯಲು ಮುಂದಾಗಿರುವಂತೆ ಕಂಡರಿಸಲಾಗಿದೆ. ವೀರನ ಉಡುಪು ಗಮನ ಸೆಳೆಯುತ್ತದೆ. ದೃಶ್ಯ ಎರಡರಲ್ಲಿ ವೀರನು ಇಬ್ಬರು ಅಪ್ಸರೆಯರ ಹೆಗಲ ಮೇಲೆ ತನ್ನೆರಡು ಕೈಗಳನ್ನು ಹಾಕಿ ಸ್ವರ್ಗಕ್ಕೆ ತೆರಳುವ ಚಿತ್ರಣವಿದೆ. ಕೊನೆಯ ಹಂತದಲ್ಲಿ ಶಿವಲಿಂಗ ಹಾಗೂ ನಂದಿ, ಇದ್ದು, ಬಲಭಾಗದಲ್ಲಿ ವೀರನು ನಿಂತ ಭಂಗಿಯಲ್ಲಿರುವಂತೆ ಕಂಡರಿಸಲಾಗಿದೆ. ಈ ಹಂತದ ಕೊನೆ ತುದಿಯಲ್ಲಿ ಸೂರ್ಯ ಚಂದ್ರರ ಚಿತ್ರಣವಿದೆ.[೧೦]

ಸಂಖ್ಯೆ : ೦೬

ಶಿಲ್ಪ : ವೀರಗಲ್ಲು

ಗ್ರಾಮ : ಮುಕ್ಕುಂಪಿ

ಸ್ಥಳ : ನಾಗಮ್ಮ ವಾಲೇಕಾರ್ ಹೊಲದಲ್ಲಿ

ವಿಸ್ತೀರ್ಣ : ३.४ ಅಡಿ ಉದ್ದ, ೧.೭ ಅಡಿ ಅಗಲ

ಕಾಲಮಾನ : ಕ್ರಿಶ ಸುಮಾರು ೧೨ನೇ ಶತಮಾನ

ಈ ಸ್ಮಾರಕವನ್ನು ಮೂರು ಹಂತದಲ್ಲಿ ಕೆತ್ತಲಾಗಿದೆ. ಮೊದಲನೇ ಹಂತದ ಎರಡು ಕೈಯಲ್ಲಿ ವೀರ ಮಹಿಳೆ ತಲೆಯಲ್ಲಿ ತುರುಬು ಮುಡಿಕಟ್ಟಿ ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಕಂಠಹಾರ, ಭುಜದಲ್ಲಿ ಭುಜಬಂದಿ, ತೋಳಲ್ಲಿ ಬಾಹುಹೊಳೆಯ, ಕೈಯಲ್ಲಿ ಕೈಕಡಗ, ಕಾಲ್ಗಡಗ ಧರಿಸಿದ್ದಾಳೆ. ಮತ್ತು ಸತಿಯು ತನ್ನ ಎರಡು ಕೈಯಲ್ಲಿ, ಭರ್ಚಿಯನ್ನು ಹಿಡಿದು ಶತ್ರುವಿಗೆ ತಿವಿಯುತ್ತಿರುವ ದೃಶವಿದೆ. ಎರಡನೇ ಹಂತದಲ್ಲಿ ಅಪ್ಸರೆಯರು ವೀರಸತಿಯನ್ನು ಸ್ವರ್ಗಕ್ಕೆ ಕೊಡೊಯ್ಯುತ್ತಿರುವ ಸನ್ನಿವೇಶವನ್ನು ಕಂಡರಿಸಲಾಗಿದೆ. ಮೂರನೇ ಹಂತದಲ್ಲಿ ಶಿವಲಿಂಗದ

ಹತ್ತಿರ ವೀರಸತಿಯನ್ನು ಕೂರಿಸಿದ್ದು ಆತ್ಮಸಾಕ್ಷಾತ್ಕಾರ ಮಾಡುತ್ತಿರುವಳು. ಮಹಿಳೆಯೊಬ್ಬಳು ಹೋರಾಡಿ ಮಡಿದ ನಿದರ್ಶನವಿರುವ ತಾಲೂಕಿನ ಏಕೈಕ ಸ್ಮಾರಕ ಶಿಲ್ಪ ಇದಾಗಿದೆ.[೧೧]

ಸಂಖ್ಯೆ : ೦೭

ಶಿಲ್ಪ : ವೀರಗಲ್ಲು

ಗ್ರಾಮ : ಮುಕ್ಕುಂಪಿ

ಸ್ಥಳ : ನಾಗಮ್ಮ ವಾಲೇಕಾರ ಹೊಲದಲ್ಲಿ

ವಿಸ್ತೀರ್ಣ : ೨.೫ ಅಡಿ ಉದ್ದ ಮತ್ತು ೧.೪ ಅಡಿ ಅಗಲ

ಕಾಲಮಾನ : ಕ್ರಿ.ಶ.ಸು. ೧೩ ಮತ್ತು ೧೪ನೇಯ ಶತಮಾನ

ಈ ಗ್ರಾಮದ ಹೊಲವೊಂದರಲ್ಲಿರುವ ಸ್ಮಾರಕ ಶಿಲ್ಪವನ್ನು ಮೂರು ಹಂತಗಳಲ್ಲಿ ಚಿತ್ರಿಸಲಾಗಿದೆ. ಮೊದಲನೇ ಹಂತದಲ್ಲಿ ವೀರನು ಎಡಗೈಯಲ್ಲಿ ಬಾಕು ಆಯುಧವನ್ನು ಹಿಡಿದು ಯುದ್ದಸನ್ನಾದ್ದನಾಗಿರುವನು. ತಲೆಕೂದಲನ್ನು ತುರುಬು ಕಟ್ಟಿಕೊಂಡಿದ್ದಾನೆ, ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿರುವನು ಬಲಗೈಯಲ್ಲಿ ಕಠಾರಿಯನ್ನು ಹಿಡಿದು ಮೇಲಕ್ಕೆತ್ತಿರುವನು. ಆಯುಧವನ್ನು ಹಿಡಿದು ಕೈಮೇಲೆಕ್ಕೆ ಎತ್ತಿದಾನೆ. ಎರಡನೇ ಹಂತದಲ್ಲಿ ದೇವಲೋಕದ ಅಪ್ಸರೆಯರೊಂದಿಗೆ ಸ್ವರ್ಗರೋಣ ಮಾಡುತಿರುವ ಚಿತ್ರವಿದೆ. ಕೊನೆಯ ಹಂತದಲ್ಲಿ ಮಧ್ಯದಲ್ಲಿ ಲಿಂಗವಿದ್ದು, ಬಲಗಡೆ ಯತಿಯು ಪೂಜೆ ಮಾಡುತ್ತಿರುವ ಚಿತ್ರವಿದೆ.[೧೨]

ಸಂಖ್ಯೆ : ೦೮

ಶಿಲ್ಪ : ವೀರಗಲ್ಲು

ಗ್ರಾಮ : ಮುಕ್ಕುಂಪಿ

ಸ್ಥಳ : ಗೋಲ್ಲರ ಹೊಲದಲ್ಲಿ

ವಿಸ್ತೀರ್ಣ : ೪ ಅಡಿ ಉದ್ದ ಮತ್ತು ೧.೫ ಅಡಿ ಅಗಲ

ಕಾಲಮಾನ : ಕ್ರಿ.ಶ.ಸು. ೧೪ನೇ ಶತಮಾನ

ಇದೆ ಹೊಲದಲ್ಲಿನ ಮಧ್ಯದಲ್ಲಿ ಎರಡೂವರೆ ಅಡಿ ಎತ್ತರ, ಒಂದುವರೆ ಅಡಿ ಅಗಲವಾದ ಈ ಸ್ಮಾರಕವೊಂದನ್ನು ಬಿಳಿ ಶಿಲೆಯಲ್ಲಿ ಕೆತ್ತಲ್ಪಟ್ಟಿದೆ. ಒಂದು ಹಂತದ ಶಿಲೆಯಲ್ಲಿ ಬಲಭಾಗದಲ್ಲಿರುವ ವೀರನು ಕುದುರೆ ಮೇಲೆ ಕುಳಿತು ಶತ್ರುವಿನೊಂದಿಗೆ ಹೋರಾಡುವ ದೃಶ್ಯವು ಕಂಡು ಬರುತ್ತದೆ. ಈ ಶಿಲ್ಪದ ಮೇಲ್ಭಾಗವು ಭಗ್ನಗೊಂಡಿದೆ. ಬಲಭಾಗದಲ್ಲಿ ಮಾತ್ರ ಸೂರ್ಯ ಚಿತ್ರ ಕಂಡುಬರುತ್ತದೆ. ಎಡಗಡೆ ಭಾಗ ತ್ರುಟಿತಗೊಂಡಿದೆ.[೧೩]

ಸಂಖ್ಯೆ : ೦೯

ಶಿಲ್ಪ : ವೀರಗಲ್ಲು

ಗ್ರಾಮ : ಮುಕ್ಕುಂಪಿ

ಸ್ಥಳ : ಹನುಮಂತ ದೇವರಗುಡಿಯ ಮುಂಭಾಗದಲ್ಲಿ ಇದೆ.

ವಿಸ್ಥೀರ್ಣ : ೧.೫ ಅಡಿ ಉದ್ದ. ಮತ್ತು ೧ ಅಡಿ ಅಗಲ.

ಕಾಲಮಾನ : ಕ್ರಿ.ಶ.ಸು. ೧೪ ಮತ್ತು ೧೫ನೇ ಶತಮಾನ

ಇದು ಮುಕ್ಕುಂಪಿ ಗ್ರಾಮದಲ್ಲಿನ ಹನುಮಂತ ದೇವಸ್ಥಾನ ಆವರಣದಲ್ಲಿ ಬಲಭಾಗಕ್ಕೆ ಈ ಸ್ಮಾರಕ ಶಿಲ್ಪ ಕಂಡುಬರುತ್ತದೆ. ವೀರನು ಕುದುರೆಯ ಮೇಲೆ ಕುಳಿತಿದ್ದು, ತಲೆಯಲ್ಲಿ ತುರುಬು ಧರಿಸಿದ್ದು, ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಕಂಠಹಾರ, ಭಜದಲ್ಲಿ ಭುಜಬಂಧಿ ತೋಳಲ್ಲಿ ಬಾಹುಹೊಳೆಯ ಕೈಯಲ್ಲಿ ಕೈಗಡಗ ಮತ್ತು ಕಾಲ್ಗಡಗ ಧರಿಸಿದ್ದಾನೆ. ವೀರನು ಬಲಗೈಯಲ್ಲಿ ಕತ್ತಿ, ಹಿಡಿದಿರುವನು. ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದಿರುವನು. ವೀರನ ಸೊಂಟದಲ್ಲಿ ಪಟ್ಟಿಕೆ ಧರಿಸಿದ್ದು, ದೋತಿಯನ್ನು ಮೊಣಕಾಲಿನವರೆಗೆ ಧರಿಸಿರುವನು, ವೀರನು ಕುದುರೆಯ ಮೇಲೆ ಕುಳಿತು ಶತ್ರುಗಳೊಂದಿಗೆ ಹೋರಾಡುವ ಚಿತ್ರವಿದೆ.[೧೪]

ಸಂಖ್ಯೆ : ೧೦

ಶಿಲ್ಪ : ವೀರಗಲ್ಲು

ಗ್ರಾಮ : ಹಿರೇಬೆಣಕಲ್

ಸ್ಥಳ : ಪ್ರಾಥಮಿಕ ಶಾಲೆ ಹಿಂಬಾಗ

ವಿಸ್ತೀರ್ಣ : ಉದ್ದ ೪.೧ ಅಡಿ, ಅಗಲ ೩.೫ ಅಡಿ

ಕಾಲಮಾನ: ಕ್ರಿಶ ಸುಮಾರು ೯ನೇ ಶತಮಾನ

ಈ ಸ್ಮಾರಕ ಶಿಲ್ಪವನ್ನು ಬಳಪದ ಶಿಲೆಯಲ್ಲಿ ಮೂರು ಹಂತದಲ್ಲಿ ಕೆತ್ತಲಾಗಿದೆ. ಮೊದಲ ಭಾಗದ ಹೋರಾಟ ದೃಶ್ಯವು ಭೂಮಿಯಲ್ಲಿ ಊತು ಹೋಗಿದ್ದು ವೀರನ ದೇಹ ಮತ್ತು ತಲೆಯ ಭಾಗ ಅಷ್ಟೇ ಕಂಡುಬರುವುದು ಎರಡನೇ ಭಾಗದಲ್ಲಿ ವೀರನು ಅಪ್ಸರೆಯರೊಂದಿಗೆ ಸ್ವರ್ಗಕ್ಕೆ ತೆರುಳುತ್ತಿರುವುದನ್ನು ಆಕಾಶದಲ್ಲಿ ಹಾರುತ್ತಿರುವಂತೆ ಕಂಡರಿಸಲಾಗಿದೆ. ಕೊನೆಯ ಭಾಗದಲ್ಲಿ ವೀರನು ಪದ್ಮಾಸನಲ್ಲಿ ಕುಳಿತುಕೊಂಡಿದ್ದು, ಅವನ ಎರಡು ಬದಿಯಲ್ಲಿ ಇಬ್ಬರೂ ಅಪ್ಸರೆಯರು ನೃತ್ಯ ಭಂಗಿಯಲ್ಲಿ ನಿಂತಿರುವಂತೆ ಕಂಡರಿಸಲಾಗಿದೆ.[೧೫]

ಸಂಖ್ಯೆ : ೧೧

ಶಿಲ್ಪ : ತುರುಗೋಳ

ಗ್ರಾಮ : ಹಿರೇಮಾದಿನಾಳ

ವಿಸ್ಥೀರ್ಣ : ೩.೬ ಅಡಿ ಉದ್ದ, ೨.೩ ಅಗಲ.

ಕಾಲಮಾನ : ೧೩ನೇ ಶತಮಾನ

ಹಿರೇಮಾದಿನಾಳ ಗ್ರಾಮದ ಹತ್ತಿರ ಈ ಶಿಲ್ಪವು ದೊರೆಯುತ್ತದೆ. ಈ ಶಿಲ್ಪದಲ್ಲಿ ವೀರನು ಬಲಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದು, ಎಡಗೈಯನ್ನು ಸತಿಯ ಮೊಣಕೈಯನ್ನು ಹಿಡಿದುಕೊಂಡಿದ್ದಾನೆ. ಸತಿಯು ತಲೆಗೆ ತುರುಬು ಕಟ್ಟಿದ್ದಾಳೆ. ವೀರನ ಪಕ್ಕದಲ್ಲಿ ಸತಿಯು ಬಲಗೈಯನ್ನು ಸೊಂಟಕೆ ಇಟ್ಟುಕೊಂಡಿದ್ದು, ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಸತಿಯು ತಲೆಯ ತುರುಬುವನ್ನು ಎಡಕ್ಕೆ ಕಟ್ಟಿದ್ದಾಳೆ. ವೀರ ಮತ್ತು ಸತಿಯ ಬಲಗಡೆ ತುರುವನ್ನು ತೋರಿಸಿದ್ದು. ವೀರನನ್ನು ತುರು ಸಿಟ್ಟಿನಿಂದ ನೋಡುತ್ತಿರುವಂತೆ ಶಿಲ್ಪಿಯು ಚಿತ್ರಿಸಿದ್ದಾನೆ. ಇದ್ದರಿಂದ ಈ ತುರು ವೀರನ ತಿವಿದು ಸಾಯಿಸಿರಬಹುದು.[೧೬]

ಸಂಖ್ಯೆ : ೧೨

ಶಿಲ್ಪ : ವೀರಗಲ್ಲು

ಗ್ರಾಮ : ಗಡ್ಡಿ

ಸ್ಥಳ : ಆಗೋಲಿಗೆ ಹೋಗುವ ಮಾರ್ಗ ಬನ್ನಿಕಟ್ಟೆಯ ಮೇಲೆ

ವಿಸ್ತೀರ್ಣ : ೩ ಅಡಿ ಉದ್ದ, ೨.೪ ಅಡಿ ಅಗಲ.

ಕಾಲಮಾನ; ಕ್ರಿಶ. ಸು. ೧೪ನೇ ಶತಮಾನ

ಈ ಗ್ರಾಮದ ಪಶ್ಚಿಮಕ್ಕೆ ಆಗೋಲಿಗೆ ಹೋಗುವ ಮಾರ್ಗದ ಎಡ ಭಾಗದ ಬನ್ನಿಕಟ್ಟೆಮೇಲೆ ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿರುವ ವೀರಗಲ್ಲು ಇದೆ. ಈ ಶಿಲ್ಪವು ವಿಶಿಷ್ಟ ವೇಷಭೂಷಣಗಳಿಂದ ಕೂಡಿದೆ. ವೀರನು ಬಲಗೈಯಲ್ಲಿ ಖಡ್ಗದ ಹಿಡಿಕೆಯನ್ನು ಹಿಡಿದು ಎಡಗೈಯಲ್ಲಿ ಖಡ್ಗದ ಮಧ್ಯಭಾಗವನ್ನು ಹಿಡಿದು ಗಂಭೀರವಾಗಿ ನಿಂತಿರುವ ಚಿತ್ರಣವಿದೆ. ವೀರನು ತಲೆಗೆ ಬಟ್ಟೆಯನ್ನು ಸುತ್ತಿದ್ದಾನೆ. ಕಿವಿಯೋಲೆಗಳನ್ನು ಹಾಕಿದ್ದಾನೆ. ವೀರನ ಹಣೆಯ ಮೇಲೆ ಧಾರ್ಮಿಕ ಸಂಕೇತ ರೀತಿಯಲ್ಲಿ ತಿಲಕವನ್ನು ಅರ್ಧ ಚಂದ್ರಾಕೃತಿಯಲ್ಲಿ ಕೆತ್ತಲಾಗಿದೆ. ವೀರನ ತೋಳುಗಳಿಗೆ ತೋಳುಬಂಧಿ, ಕೈಗಳಲ್ಲಿ ಖಡ್ಗವನ್ನು, ಕೊರಳಲ್ಲಿ ಪದಕವಿರುವ ಸರವಿದೆ. ಕಾಲುಗಳಲ್ಲಿ ಕಡಗಗಳನ್ನು, ಹಾಗೂ ವೀರಗಚ್ಚೆ ಉಡುಪನ್ನು ಧರಿಸಿದ್ದಾನೆ. ಈ ಲಕ್ಷಣಗಳು ಅಂದಿನ ಸಮಾಜದಲ್ಲಿ ಪ್ರಚಲಿತವಿದ್ದ ಸಂಸ್ಕೃತಿಯನ್ನು ತಿಳಿಸಿ ಕೊಡುತ್ತದೆ. ಮತ್ತು ಪುರುಷರ ಅಲಂಕಾರ ಪ್ರಿಯತೆಯನ್ನು ತಿಳಿಸಿಕೊಡುತ್ತವೆ. ಸ್ಥಳೀಯರು ಇದನ್ನು ಪಿಡ್ಡಪ್ಪನ ಮೂರ್ತಿ ಎಂದು ಆರಾಧಿಸುವ ಸಂಪ್ರದಾಯ ಬೆಳೆದು ಬಂದಿದೆ.[೧೭]

ಸಂಖ್ಯೆ : ೧೩

ಶಿಲ್ಪ : ವೀರಗಲ್ಲು

ಗ್ರಾಮ : ಮೈಲಾಪುರ.

ಸ್ಥಳ : ಪಾಂಡವರ ಗುಡ್ಡದ ಪಕ್ಕದಲ್ಲಿ.

ವಿಸ್ತೀರ್ಣ : ೩ಅಡಿ ಉದ್ದ, ೨ ಅಡಿ ಅಗಲ

ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ.

ಮೈಲಾಪುರ ಗ್ರಾಮದ ಪಾಂಡವರ ಗುಡ್ಡದ ಪಕ್ಕದಲ್ಲಿ ವೀರಗಲ್ಲುಗಳಿವೆ. ಈ ಸ್ಮಾರಕ ಶಿಲ್ಪದಲ್ಲಿ ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಗುರಾಣಿಯನ್ನು ಹಿಡಿದ್ದಾನೆ. ತಲೆಗೆ ಪೇಟವನ್ನು ಹಾಕಿದ್ದಾನೆ. ಕಿವಿಗಳಲ್ಲಿ ಕಿವಿಯೋಲೆಗಳಿವೆ. ಕಾಲು ಮತ್ತು ಕೈಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಸೈನಿಕ ಮಾದರಿಯ ಉಡುಪನ್ನು ಧರಿಸಿ ಮೇಲ್ಭಾಗದಲ್ಲಿ ಸುರ್ಯ ಚಂದ್ರರನ್ನು ಕಂಡರಿಸಲಾಗಿದೆ. ಈ ವೀರನು ಬಲಗೈಯಲ್ಲಿ ಬಾಣ ಮತ್ತು ಎಡಗೈಯಲ್ಲಿ ಬಿಲ್ಲನ್ನು ಹಿಡಿದ್ದಾನೆ. ಸೊಂಟದಲ್ಲಿ ಚೂರಿಯನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನ ಬೆನ್ನಿಗೆ ಬಾಣಗಳ ಬತ್ತಳಿಕೆಯನ್ನು ಹಾಕಿಕೊಂಡಿದ್ದಾನೆ. ಈ ವೀರಗಲ್ಲುಗಳಲ್ಲಿರುವ ವೇಶಭೂಷಣದಿಂದ ಅಂದಿನ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಸಂಸ್ಕೃತಿಯನ್ನು ಅರಿಯಲು ಮತ್ತು ಶಿಲ್ಪದಲ್ಲಿ ವೀರನ ಅಲಂಕಾರ ಅವನ ಯುದ್ದ ಗಭೀರತೆಯನ್ನು ತೋರುಸುತ್ತದೆ.[೧೮]

ಸಂಖ್ಯೆ : ೧೪

ಶಿಲ್ಪ : ವೀರಗಲ್ಲು

ಗ್ರಾಮ : ನವಲಿ

ಸ್ಥಳ : ಮಸೂದಿ ಪಕ್ಕದಲ್ಲಿದೆ

ವಿಸ್ತೀರ್ಣ : ೨ ಅಡಿ ಉದ್ದ ಮತ್ತು ೧ ಅಡಿ ಅಗಲ.

ಕಾಲಮಾನ : ಕ್ರಿ.ಶ.ಸು. ೧೪ನೇ ಶತಮಾನ

ನವಲಿ ಗ್ರಾಮದ ಮಸೂದಿಯ ಬಲ ಭಾಗದಲ್ಲಿ ಕಂಡುಬರುವ ಈ ಸ್ಮಾರಕ ಕಪ್ಪು ಕಣಶಿಲೆಯಲ್ಲಿದೆ. ಈ ಶಿಲ್ಪದಲ್ಲಿ ವೀರನು ಎಡಗೈಯಲ್ಲಿ ಬಿಲ್ಲನ್ನು, ಬಲಗೈಯಲ್ಲಿ ಚೂರಿಯನ್ನು ಹಿಡಿದು ಕುದುರೆಯ ಕಾಲಿಗೆ ತಿವಿಯುತ್ತಿರುವಂತೆ ಶಿಲ್ಪಿಯು ತೋರಿಸಿದ್ದಾನೆ. ಕುದುರೆಯು ತನ್ನ ಎರಡು ಕಾಲುಗಳನ್ನ ಎತ್ತಿಕೊಂಡು ನಿಂತಿರುವಂತೆ ಚಿತ್ರಿಸಲಾಗಿದೆ. ಈ ಶಿಲ್ಪದಲ್ಲಿ ವೀರನನ್ನು ಪ್ರಧಾನವಾಗಿ, ಕುದುರೆಯನ್ನು ಚಿಕ್ಕದಾಗಿ ತೋರಿಸಿದ್ದಾರೆ. ಮೇಲಗಡೆ ಚಿಕ್ಕದಾಗಿ ನಂದಿ ಮತ್ತು ವೀರನ ಶಿಲ್ಪ ಇದೆ. ನವಲಿ ಗ್ರಾಮದಲ್ಲಿ ಮತ್ತೊಂದು ವೀರಗಲ್ಲು ನಮಗೆ ಕಂಡುಬಂದಿದ್ದು. ಶಿಲ್ಪದಲ್ಲಿ ಕುದುರೆಯನ್ನು ದೊಡ್ಡದಾಗಿ ತೋರಿಸಿದ್ದು, ವೀರನನ್ನು ಚಿಕ್ಕದಾಗಿ ತೋರಿಸಲಾಗಿದೆ. ಬಲಗೈಯಲ್ಲಿ ಕತ್ತಿಯನ್ನು ಮತ್ತು ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದ್ದಾನೆ. ಕುದುರೆಯು ಓಡುವ ಭಂಗಿಯುಲ್ಲಿದ್ದುದರಿಂದ ಇದು ಯುದ್ಧಕ್ಕೆ ಹೋಗುವ ಸಂಗತಿಯುನ್ನು ಸೂಚಿಸುತ್ತಿರಬಹುದು.[೧೯]

ಸಂಖ್ಯೆ : ೧೫

ಶಿಲ್ಪ : ವೀರಗಲ್ಲು

ಗ್ರಾಮ : ಕನಕಗಿರಿ

ಸ್ಥಳ : ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಮುಂದೆ.

ವಿಸ್ತೀರ್ಣ : ೩.೮ ಅಡಿ ಎತ್ತರ ಮತ್ತು ೨.೯ ಅಡಿ ಅಗಲ

ಕಾಲಮಾನ : ಕ್ರಿ.ಶ.ಸು. ೧೪ನೇ ಶತಮಾನ.

ಕನಕಗಿರಿಯ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಮುಂದೆ ಒಂದು ಸ್ಮಾರಕ ಶಿಲ್ಪವಿದೆ. ಫಲಕದಲ್ಲಿ ಸ್ತ್ರೀಯೊಬ್ಬಳು ಪೀಠದ ಮೇಲೆ ಕುಳಿತಿರುವ ದೃಶ್ಯವಿದೆ. ಅವಳ ಇಕ್ಕೆಲಗಳಲ್ಲಿ ಇರುವ ಇಬ್ಬರು ದಾಸಿಯರಲ್ಲಿ ಒಬ್ಬಳು ಚಾಮರಧಾರಿಣಿ, ಯಾಗಿದ್ದಾಳೆ ಪೀಠದ ಮುಂದೆ ಅಶ್ವಾರೋಹಿಯೊಬ್ಬ ಇದ್ದು ಬಲಗೈಯಲ್ಲಿ ಖಡ್ಗ ಹಿಡಿದಿದ್ದಾನೆ. ಕುದುರೆಯ ಹಿಂದೆ ಛತ್ರಿ ಹಿಡಿದಿದ್ದಾನೆ. ಮುಂದೆ ಖಡ್ಗ ಹಿಡಿದು ನಿಂತ ಸೇವಕರ ಶಿಲ್ಪಗಳಿವೆ. ಕುದುರೆಯ ಇನ್ನೊಂದು ಮೊಗ್ಗಲಿನಲ್ಲಿ ಇರುವ ವ್ಯಕ್ತಿ ಪತಾಕೆಯನ್ನು ಹಿಡಿದಿದ್ದಾನೆ. ಹೀಗೆ ಈ ಶಿಲ್ಪಫಲಕದಲ್ಲಿಯ ವ್ಯಕ್ತಿಗಳ ಕ್ರಿಯೆಯಿಂದ ಇಲ್ಲಿಯ ಘಟನೆಯನ್ನು ಹೀಗೆ ನಿರ್ಧರಿಸಬಹುದು. ಅಶ್ವರೂಢನಾಗಿ ಯುದ್ಧಕ್ಕೆ ಹೊರಟ ಅರಸನು ರಾಜಮಾತೆಯ ದರ್ಶನಕ್ಕೆ ಬಂದಂತೆ ತೋರುತ್ತದೆ. ಪೀಠದ ಮೇಲೆ ಕುಳಿತ ಸ್ತ್ರೀಯನ್ನು ರಾಜಮಾತೆ ಎಂದು ಗುರುತಿಸಲು ಮುಖ್ಯ ಕಾರಣ ವೃದ್ಯೆಯ ಲಕ್ಷಣಗಳಿರುವುದು ಮತ್ತು ತಲೆಗೆ ವೃತ್ತಾಕಾರದ ಮುಂಡಾಸನ್ನು ಸುತ್ತಿರುವುದು.[೨೦]

ಸಂಖ್ಯೆ : ೧೬

ಶಿಲ್ಪ : ವೀರಗಲ್ಲು

ಗ್ರಾಮ : ಚಿಕ್ಕ ಬೆನಕಲ್

ಸ್ಥಳ : ಈರಣ್ಣ ಅಳವಂಡಿಯವರ ಹೋಲದಲ್ಲಿನ ಟೋಕ್ಕಪ್ಪನ ದೇವಾಲಯದಲ್ಲಿ ಕಂಡು ಬರುತ್ತದೆ.

ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೪ ಅಡಿ ಅಗಲ

ಕಾಲಮಾನ : ಕ್ರಿ.ಶ.ಸು ೧೪ ಮತ್ತು ೧೫ನೇ ಶತಮಾನ

ಗಂಗಾವತಿಯಿಂದ ಹತ್ತು ಕೀ. ಮೀ. ದೂರದಲ್ಲಿರುವ ಚಿಕ್ಕ ಬೆಣಕಲ್ ಗ್ರಾಮದ ಈರಣ್ಣ ಅಳವಂಡಿಯವರ ಹೊಲದಲ್ಲಿರುವ ಗುಡಿಯಲ್ಲಿ ಈ ಸ್ಮಾರಕ ವಿದೆ. ಈ ಶಿಲ್ಪವನ್ನು ಅಲ್ಲಿನ ಜನ ಟೋಕ್ಕಪ್ಪ ಎಂದು ಸಂಭೋದಿಸುತ್ತಾರೆ. ಅರಸನ್ನು ಅಶ್ವರೂಢನಾಗಿ ಯುದ್ಧಕ್ಕೆ ಹೊರಟ ದೃಶ್ಯವನ್ನು ಇಲ್ಲಿ ಚಿತ್ರಿಸಲಾಗಿದೆ. ಕುದುರೆಯ ಹಿಂಭಾಗದಲ್ಲಿ ಪ್ರಾಯಶ ಅವನ ಮೂರು ಜನ ರಾಣಿಯರು ಮತ್ತು ಇಬ್ಬರ ಮಕ್ಕಳ ಶಿಲ್ಪ ಕಂಡುಬರುತ್ತವೆ. ಮಕ್ಕಳಲ್ಲಿ ಒಬ್ಬ ಬಾಲಕನಿಂತಿದ್ದು. ಇನ್ನೊಂದು ಶಿಶುವನ್ನು ಮಧ್ಯದ ಸ್ತ್ರೀ ಎತ್ತಿಕೊಂಡಿದ್ದಾಳೆ. ಕುದುರೆಯ ಮುಂಭಾಗದಲ್ಲಿ ರಾಜ ಛತ್ರಿವನ್ನು ಹಿಡಿದುಕೊಂಡು ಸೈನಿಕ ಮುಂದೆ ಹೋಗುತಿರುವ ದೃಶ್ಯ ಇದೆ. ಅಶ್ವರೂಢನಾದ ಅರಸನು ಎಡಗೈಯಿಂದ ಕುದುರೆಯ ಲಗಾಮು ಹಿಡಿದ್ದಾನೆ. ಬಲಗೈಯಲ್ಲಿ ಉದ್ದವಾದ ಭರ್ಚಿಯನ್ನು

ಹಿಡಿದ್ದಾನೆ. ಅರಸ ಮತ್ತು ರಾಣಿಯರ ವೇಶಭೂಷಣಗಳು ಸಮಕಾಲಿನ ಉಡುಗೆ ತೊಡುಗೆಗಳನ್ನು ಸ್ಪಷ್ಟವಾಗಿ ಬಿಂಬಿಸುತ್ತವೆ. ಅರಸ ಮತ್ತು ಬಾಲಕನ ತಲೆಯ ಮೇಲೆ ಪೇಟ (ಮುಂಡಾಸು) ಗಳನ್ನು ಸುತ್ತಲಾಗಿದೆ. ಅರಸನು ಉದ್ದವಾದ ನಿಲುವಂಗಿ ಧರಿಸಿದ್ದು. ಅದರಲ್ಲಿ ನೇರಿಗೆಗಳಿವೆ. ಅರಸನ ಸೊಂಟದಲ್ಲಿ ಗುರಾಣಿ ಮತ್ತು ಖಡ್ಗಗಳಿವೆ. ಕುದುರೆಗೆ ಮುಖವಾಡ ಮತ್ತು ಕಾಲು ಇಡಲು ರಿಕಾಪು ಇದೆ. ರಾಣಿಯರು ಕೇಶವನ್ನು ಹಿಂದಕ್ಕೆ ಬಾಚ್ಚಿ ತುರುಬು ಕಟ್ಟಲಾಗಿದೆ. ಕುಪ್ಪಸ ಮತ್ತು ಸೀರೆಯನ್ನು ಧರಿಸಿದ್ದು. ಕಿವಿಯಲ್ಲಿ ಕಿವಿಯೊಲೆಗಳು. ಕೊರಳಲ್ಲಿ ಮಣಿಸರಗಳಿವೆ. ಮುಂಗೈಯಲ್ಲಿ ಕಂಕಣಗಳಿವೆ. ಈ ಎಲ್ಲಾ ಶಿಲ್ಪಗಳು ಕನಕಗಿರಿಯ ಪಾಳೆಗಾರರಿಗೆ ಸಂಬಂಧಿಸಿದ ಶಿಲ್ಪವೆಂದು ಹೇಳಬಹುದು. ಇದರ ಮುಂದೆ ಮತ್ತೊಂದು ಕಪ್ಪು ಶಿಲೆಯ ಅಶ್ವರೂಢ ಅರಸನ ಶಿಲ್ಪ ಇದೆ. ಇಲ್ಲಿ ಅರಸನ ಅಶ್ವರೂಢನಗಿದ್ದು, ಬಲಗೈಯಲ್ಲಿ ಉದ್ದವಾದ ಭರ್ಚಿಯನ್ನು ಎಡಗೈಯಲ್ಲಿ ಕುದುರೆಯ ಮೂಗುಧಾರವನ್ನು ಹಿಡಿದ್ದಾನೆ. ಕುದುರೆಯ ಮುಗುಧಾರ, ತಡಿ. ರಿಕಾಪುಗಳನ್ನು ಹಾಕಲಾಗಿದೆ. ಕುದುರೆಯ ಮೇಲೆ ಹಾಕಿರುವ ಜೀನಿನ ಪೀಠದ ಮೇಲೆ ಅರಸ ಕುಳಿತಿದ್ದು, ಅವನ ಉದ್ದವಾದ ನೆರಿಗೆವುಳ್ಳ ನಿಲುವಂಗಿ ಧರಿಸಿದ್ದಾನೆ. ಅವನ ಸೊಂಟದಲ್ಲಿ ಗುರಾಣಿ ಇರುವುದನ್ನು ಕಾಣಬುಹುದು. ಕುದುರೆಯ ಮುಂಭಾಗದಲ್ಲಿ ಫತಾಕೆಯನ್ನು ಹಿಡಿದು ಸೇವಕ ನಿಂತಿದ್ದಾನೆ. ಕುದುರೆಯ ಸನ್ನದ್ದತೆ ಹಾಗೂ ಅರಸನ ಭಂಗಿಯಿಂದ ಇದು ಅರಸನು ಯುದ್ದಕ್ಕೆ ಹೊರಟ ಸಂಗತಿಯನ್ನು ಸೂಚಿಸುವ ಶಿಲ್ಪವೆಂದು ಹೇಳಬಹುದು.[೨೧]

ಸಂಖ್ಯೆ : ೧೭
ಶಿಲ್ಪ : ವೀರಗಲ್ಲು
ಗ್ರಾಮ : ಮಲಕನಮರಡಿ
ಸ್ಥಳ : ಊರಿನ ಪಕ್ಕದಲ್ಲಿನ ನಾರಾಯಣಪ್ಪನ ಗುಡ್ಡದಲ್ಲಿ.
ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೪ ಅಗಲ.
ಕಾಲಮಾನ : ಕ್ರಿ.ಶ.ಸು. ೧೪ ಮತ್ತು ೧೫ನೇ ಶತಮಾನ.

ಊರು ಪಕ್ಕದಲ್ಲಿನ ಗುಡ್ಡದ ಮೇಲಿರುವ ಚಿಕ್ಕ ಗುಡಿಯಲ್ಲಿ, ಈ ಸ್ಮಾರಕ ವಿದೆ. ಇದನ್ನು ಊರಿನ ಜನ ನಾರಾಯಣ್ಣಪ್ಪ ಎಂದು ಕರೆಯುತ್ತಾರೆ. ಈ ಶಿಲ್ಪವು ಹುಟ್ಟು ಬಂಡೆಗಲ್ಲುನಲ್ಲಿ ಚಿತ್ರಿಸಲಾಗಿದೆ. ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ವೀರ ತನ್ನ ಬಲಗೈಯಲ್ಲಿ ಭರ್ಚಿಯನ್ನು ಹಿಡಿದು ಹೋರಾಟ ಮಾಡುತ್ತಿರುವ ಚಿತ್ರಣವಿದೆ. ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದಿದ್ದಾನೆ.[೨೨]

ಸಂಖ್ಯೆ : ೧೮
ಶಿಲ್ಪ : ವೀರಗಲ್ಲು

ಗ್ರಾಮ : ಗುಡದೂರು

ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೨ ಅಡಿ ಅಗಲ

ಸ್ಥಳ : ಆಂಜನೇಯ ದೇವಾಲಯದ ಪಕ್ಕದಲ್ಲಿ

ಕಾಲಮಾನ : ಕ್ರಿ.ಶ.ಸು. ೧೪ ಮತ್ತು ೧೫ನೇ ಶತಮಾನ

ಈ ಸ್ಮಾರಕ ಶಿಲ್ಪವು ದೇವಾಲಯದ ಪಕ್ಕದಲ್ಲಿದೆ. ವೀರನು ಅಶ್ವದ ಮೇಲೆ ಕುಳಿತಿದ್ದಾನೆ. ಬಲಗೈಯಲ್ಲಿ ಕಠಾರಿ ಮತ್ತು ಎಡಗೈಯಲ್ಲಿ ಕುದುರೆಯ ಲಗಾಮನ್ನು ಹಿಡಿದ್ದಾನೆ. ಶಿಲ್ಪದ ಹಿಂದೆ ಸೇವಕ ಛತ್ರಿ ಹಾಗೂ ಚಾಮರವನ್ನು ಹಿಡಿದುಕೊಂಡಿದ್ದಾನೆ.[೨೩]

ಸಂಖ್ಯೆ : ೧೯

ಶಿಲ್ಪ : ವೀರಗಲ್ಲು

ಗ್ರಾಮ : ಚಿಕ್ಕ ರಾಂಪೂರ

ಸ್ಥಳ : ಸಿ. ಅಮರೇಶಪ್ಪನವರ ಹೊಲದಲ್ಲಿ.

ವಿಸ್ತೀರ್ಣ : ೩.೮ ಅಡಿ ಉದ್ದ, ೨.೧ ಅಡಿ ಅಗಲವಿದೆ.

ಕಾಲಮಾನ : ಕ್ರಿ.ಶ.ಸು. ೧೪ ಮತ್ತು ೧೫ನೇ ಶತಮಾನ

ಚಿಕ್ಕ ರಾಂಪೂರ ಗ್ರಾಮದ ಸಿ. ಅಮರೇಶಪ್ಪನವರ ಹೊಲದಲ್ಲಿ ಪೂರ್ವಾಭಿಮುಖವಾಗಿ ಈ ಶಿಲ್ಪವನ್ನು ನೆಡಲಾಗಿದೆ. ಈ ವೀರಗಲ್ಲು ಮೂರು ಹಂತಗಳಲ್ಲಿ ಶಿಲ್ಪಗಳನ್ನು ಬಿಡಿಸಲಾಗಿದೆ. ಮೊದಲನೆಯ ಹಂತದಲ್ಲಿ ನಾಲ್ಕು ಜನ ವೀರರು ತಮ್ಮ ಕೈಗಳಲ್ಲಿ ಕತ್ತಿಗಳನ್ನು ಹಿಡಿದು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯವಿದೆ, ಎರಡನೆಯ ಹಂತದಲ್ಲಿ ವೀರನು ಹೋರಾಟದಲ್ಲಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ಚಿತ್ರಣ ವಿದೆ. ಮೂರನೆಯ ಹಂತದಲ್ಲಿ ಶಿವಲಿಂಗವನ್ನು ಆರಾಧಿಸುತ್ತಿರುವ ವೀರನ ಚಿತ್ರಣವಿದೆ, ವೀರನ್ನು ಸ್ವರ್ಗದಲ್ಲಿ ಸ್ಥಾನವನ್ನು ಪಡೆದ ಸನ್ನಿವೇಶವನ್ನು ತಿಳಿಸಿಕೊಡುವ ಚಿತ್ರವಿದು. ಶಿಲ್ಪದ ಮೇಲೆ ಬಲಭಾಗಕ್ಕೆ ಸೂರ್ಯನನ್ನು ಎಡಭಾಗಕ್ಕೆ ಅರ್ಧಾಕೃತಿಯ ಚಂದ್ರನನ್ನು ಕಂಡರಿಸಲಾಗಿದೆ.[೨೪]

ಸಂಖ್ಯೆ : ೨೦

ಶಿಲ್ಪ : ವೀರಗಲ್ಲು

ಗ್ರಾಮ : ಸಂಗಾಪುರ

ಸ್ಥಳ : ಈಶ್ವರ ದೇವಸ್ಥಾನದ ಅಭಿಮುಖವಾಗಿ ಇದೆ.

ವಿಸ್ತೀರ್ಣ : ೩ ಅಡಿ ಉದ್ದ, ೨.೩ ಅಡಿ ಅಗಲ.

ಕಾಲಮಾನ : ಕ್ರಿ.ಶ.ಸು. ೧೪ ಮತ್ತು ೧೫ನೇ ಶತಮಾನ

ಸಂಗಾಪುರ ಗ್ರಾಮದ ಈಶ್ವರ ದೇವಸ್ಥಾನದ ಅಭಿಮುಖವಾಗಿ ನಿರ್ಮಿಸಲಾಗಿರುವ ಒಂದು ಗುಡಿಯಿದ್ದು, ಈ ಗುಡಿಯಲ್ಲಿನ ಸ್ಮಾರಕ ಶಿಲ್ಪವನ್ನು, ಸ್ಥಳೀಯರು ಇದನ್ನು ಈರಣ್ಣ ಎಂದು ಆರಾಧಿಸುತ್ತಿರುವ ವೀರಗಲ್ಲು ಶಿಲ್ಪವಿದೆ. ಈ ಶಿಲ್ಪದಲ್ಲಿ ವೀರ ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದು ಹಿರಿಯುತ್ತಿದ್ದಾನೆ. ಆತನ ಸೊಂಟದಲ್ಲಿ ಕಿರುಗತ್ತಿಯಿಂದ ವೀರನ ವೇಷಭೂಷಣಗಳನ್ನು ಗಮನಿಸಿದರೆ ರಾಜ ಪ್ರಮುಖನೆಂಬುದು ತಿಳಿಯುತ್ತದೆ. ಕಿವಿಯಲ್ಲಿ ಓಲೆಗಳನ್ನು ಧರಿಸಿದ್ದಾನೆ. ತಲೆಗೂದಲುಗಳನ್ನು ತಿರುವಿಸಿ ಬಲಕ್ಕೆ ಜಡೆ ಕಟ್ಟಿದ್ದಾನೆ. ಸಾಮಾನ್ಯವಾಗಿ ಸ್ತ್ರೀಯರಂತೆ ಪುರುಷರು ತುರುಬು ಕಟ್ಟುವ ಸಂಪ್ರದಾಯ ಇಂದಿಗೂ ಕೂಡ ಪ್ರಚಲಿತವಾಗಿದೆ. ಪುರುಷರು ಕಿವಿಯಲ್ಲಿ ಓಲೆಗಳನ್ನು ಧರಿಸಿರುವುದು, ಪುರುಷರು ಆಭರಣ ಪ್ರಿಯರಾಗಿದ್ದರು ಎಂಬ ಅಂಶವನ್ನು ಸೂಚಿಸುತ್ತದೆ.[೨೫]

ಸಂಖ್ಯೆ : ೨೧
ಶಿಲ್ಪ : ವೀರಗಲ್ಲು
ಗ್ರಾಮ : ಉಳೇನೂರು
ಸ್ಥಳ : ಗ್ರಾಮ ಪಂಚಾಯಿತಿ ಹತ್ತಿರ
ವಿಸ್ತೀರ್ಣ : ೨.೫ ಅಡಿ ಉದ್ದ, ಮತ್ತು ೧.೮ ಅಡಿ ಅಗಲ
ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಈ ಶಿಲ್ಪದಲ್ಲಿ ವೀರನು ತಲೆಯಲ್ಲಿ ತುರುಬು ಕಟ್ಟಿದ್ದು, ಕಿವಿಯಲ್ಲಿ ಪತ್ರಕುಂಡಲ, ಕೊರಳಲ್ಲಿ ಕಂಠಹಾರ, ಸೊಂಟದಲ್ಲಿ ಪಟ್ಟಿಕೆ, ತೋಳಲ್ಲಿ ಬಾಹುಹೊಳೆಯ, ಕೈಗಡಗ ಕಾಲ್ಗಡಗಳನ್ನು ಧರಿಸಿರುವನು, ವೀರನು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿರುವನು. ಹಾಗೂ ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ, ಸೊಂಟದಿಂದ ಮೊಣಕಾಲೀನವರೆಗೂ ವೀರಗಚ್ಚೆಯನ್ನು ಹಾಕಿದ್ದು, ಅದು ನೆರೆಗೆಯಾಕಾರದಲ್ಲಿ ಮೂಡಿಬಂದಿದೆ. ಇದು ಒಂದು ಯುದ್ಧ ಸನ್ನಿವೇಶದ ವೀರಗಲ್ಲಾಗಿದೆ. ಇದಕ್ಕೆ ಸ್ಥಳಿಯರು ಕಾಸ್ಯಪ್ಪ ಎಂದು ಕರೆಯುವರು.[೨೬]

ಸಂಖ್ಯೆ : ೨೨
ಶಿಲ್ಪ : ವೀರಗಲ್ಲು
ಗ್ರಾಮ : ಕೊಕ್ಕರಗೋಳ
ಸ್ಥಳ : ಬೆನ್ನೂರುಗೆ ಹೋಗುವ ರಸ್ತೆಯ ಬಲಭಾಗದಲ್ಲಿ. ಗುಡ್ಡದ ಮೇಲ ಭಾಗದಲ್ಲಿ ಇದೆ
ವಿಸ್ತೀರ್ಣ : ೪ಅಡಿ ಉದ್ದ, ಮತ್ತು ೫.೧ ಅಡಿ ಅಗಲ
ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಇದನ್ನು ಸ್ಥಳಿಯರು ಸೋಲ್ ಬೀರಪ್ಪ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಶಿಲ್ಪದಲ್ಲಿ ವೀರನು ಅಶ್ವರೂಢನಾಗಿದ್ದು. ಬಲಗೈಯಲ್ಲಿ ಖಡ್ಗವನ್ನು ಮತ್ತು ಎಡಗೈಯಲ್ಲಿ ಕುದುರೆಯ ಲಗಾಮವನ್ನು ಹಿಡಿದಿರುವನು. ಕುದುರೆಯ ಬಾಯಿಗೆ ಥಡಿ, ರಿಕಾಪುಗಳನ್ನು ಹಾಕಲಾಗಿದೆ. ವೀರನ ಮುಂದೆ ನಾಲ್ಕು ವೀರರು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ನಾಲ್ಕು ಜನ ವೀರರು ಗುರಾಣಿಯನ್ನು ಹಿಡಿದ್ದಾರೆ. ಒಬ್ಬ ಮಾತ್ರ ಬಲಗೈಯಲ್ಲಿ ಚಾಕು ಹಿಡಿದಿದ್ದಾನೆ. ಎಡಗೈಯನ್ನು ಇಳಿ ಬಿಟ್ಟಿದ್ದಾನೆ. ಮುಂದೆ ನಿಂತ ಐದು ಜನ ವೀರರು ಸಮಾನ ರೀತಿಯ ಉಡುಗೆಯನ್ನು ಧರಿಸಿದ್ದಾರೆ, ಅವರು ಕೈ ಮತ್ತು ಕಾಲುಗಳಲ್ಲಿ ಕಡಗಳನ್ನು ಧರಿಸಿರುವರು. ತೋಳಬಂದಿಯನ್ನು ಸಹ ಕಾಣಬುಹುದು ಮೇಲೆ ಸೂರ್ಯ ಚಂದ್ರರರನ್ನು ಕಂಡರಿಸಲಾಗಿದೆ. ಈ ದೃಶ್ಯ ಯುದ್ಧಕೆ ಹೊರಡುವ ದೃಶ್ಯವಾಗಿದೆ.[೨೭]

ಸಂಖ್ಯೆ : ೨೩
ಶಿಲ್ಪ : ವೀರಗಲು
ಗ್ರಾಮ : ಕೊಕ್ಕಗೋಳ
ಸ್ಥಳ : ಬೆನ್ನೂರಿಗೆ ಹೋಗುವ ರಸ್ತೆಯ ಎಡಭಾಗದಲ್ಲಿದೆ.
ವಿಸ್ತೀರ್ಣ : ೩ ಅಡಿ ಉದ್ದ. ಮತ್ತು ೪ ಅಡಿ ಅಗಲ
ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಈ ಗ್ರಾಮದಿಂದ ಬೆನ್ನೂರಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಈ ಸ್ಮಾರಕವಿದೆ. ಬಿಳಿ ಕಣಶಿಲೆಯಲ್ಲಿರುವ ಸ್ಮಾರಕವು ಸಮಭಂಗಿಯಲ್ಲಿ ನಿಂತಿರುವ ವೀರನು ಕಿವಿಯಲ್ಲಿ ಆಭರಣ, ಕೊರಳಲ್ಲಿ ಕೊರಳ ಹಾರವನ್ನು, ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿರುವನ್ನು. ವೀರನು ತಲೆಕೂದಲನ್ನು ತುರುಬಿನ ರೀತಿಯಲ್ಲಿ ಕಟ್ಟಿರುವನು, ಬಲಗೈಯಲ್ಲಿ ಕತ್ತಿಯನ್ನು ಹಿಡಿದು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ವೀರನು ಧರಿಸಿರುವ ಉಡುಪಿನಿಂದ ಸಾಮಾನ್ಯ ಯೋಧನೆಂದು ಗುರುತಿಸಬಹುದು. ಸ್ಥಳೀಯರು ಈತನನ್ನು 'ಈರಣ್ಣ' ಎಂದು ಕರೆಯುತ್ತಾರೆ. ಈ ಸ್ಮಾರಕವನ್ನು ಎಲ್ಲಾ ಸಮುದಾಯದವರು ಪೂಜಿಸುತ್ತಾರೆ.[೨೮]

ಸಂಖ್ಯೆ : ೨೪
ಶಿಲ್ಪ : ವೀರಗಲ್ಲು
ಗ್ರಾಮ : ತೊಂಡಿಹಾಳ
ಸ್ಥಳ : ಊರ ಮಧ್ಯದಲ್ಲಿ
ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೪.೫ ಅಡಿ ಅಗಲ
ಕಾಲಮಾನ : ಕ್ರಿ.ಶ.ಸು. ೧೪ ಮತ್ತು ೧೫ನೇ ಶತಮಾನ

ಈ ಗ್ರಾಮ ಮಧ್ಯದಲ್ಲಿ ಸ್ಮಾರಕ ಶಿಲ್ಪವಿದೆ. ಈ ಶಿಲ್ಪದಲ್ಲಿ ವೀರನು ಅಶ್ವರೂಢನಾಗಿದ್ದು, ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಕುದುರೆಯ ಲಗಾಮವನ್ನು ಹಿಡಿದಿರುವನು. ಕುದುರೆಯ ಬಾಯಿಗೆ, ಥಡಿ, ರಿಕಾಪುಗಳನ್ನು ಹಾಕಲಾಗಿದೆ. ವೀರನು ಯುದ್ಧಕ್ಕೆ ಹೋಗುವ ದೃಶ್ಯವನ್ನು ಚಿತ್ರಿಸಲಾಗಿದೆ.[೨೯]

ಸಂಖ್ಯೆ : ೨೫
ಶಿಲ್ಪ : ವೀರಗಲ್ಲು
ಗ್ರಾಮ : ತೊಂಡಿಹಾಳ
ಸ್ಥಳ : ದ್ಯಾಮಮ್ಮ ಕಲ್ಗುಡಿ ಅವರ ಮನೆಮುಂದೆ.
ವಿಸ್ತೀರ್ಣ : ೩ ಅಡಿ ಉದ್ದ ೨ ಅಡಿ ಅಗಲ
ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಈ ಗ್ರಾಮದ ಕಲ್ಗುಡಿ ದ್ಯಾಮಮ್ಮನವರ ಮನೆ ಮುಂದೆ ಇರುವ ಈ ಸ್ಮಾರಕವನ್ನು ಬಿಳಿ ಕಣಶಿಲೆಯಿಂದ ಕೆತ್ತಲ್ಪಟ್ಟಿದೆ. ಒಂದೇ ಹಂತದಲ್ಲಿರುವ ಈ ಸ್ಮಾರಕದಲ್ಲಿ ವೀರನು ಸಮಭಂಗಿಯಲ್ಲಿ ನಿಂತಿರುವಂತೆ ಕೆತ್ತಲಾಗಿದೆ. ತಲೆಗೂದಲನ್ನು ಜುಟ್ಟಿನೊಪಾದಿಯಲ್ಲಿ ಕಟ್ಟಿಕೊಂಡು. ಕಿವಿ, ಕೊರಳಲ್ಲಿ ಆಭರಣಗಳನ್ನು, ಕೈಕಾಲುಗಳಲ್ಲಿ ಕಡಗಗಳು ಮತ್ತು ತೋಳಬಂಧಿನ್ನು ಧರಿಸಿರುವನು. ವೀರನು ಸೊಂಟದಲ್ಲಿ ಚಿಕ್ಕ ಚೂರಿಯನ್ನು ಸಿಕ್ಕಿಸಿಕೊಂಡು, ತನ್ನ ಬಲಗೈಯಲ್ಲಿ ಉದ್ದನೆಯ ಕತ್ತಿಯನ್ನು ಬಲಭುಜದ ಮೇಲೆ ಇಟ್ಟುಕೊಂಡು ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿದ್ದಾನೆ.

ಸಂಖ್ಯೆ : ೨೬
ಶಿಲ್ಪ : ವೀರಗಲ್ಲು
ಗ್ರಾಮ : ನಂದಿಹಳ್ಳಿ
ಸ್ಥಳ : ಹಳೇ ಊರಿನ ಗ್ರಾಮ ದೇವತೆ ದೇವಾಲಯದ ಮುಂದೆ.
ವಿಸ್ತೀರ್ಣ : ೨.೫ ಅಡಿ ಉದ್ದ ೧.೬ ಅಡಿ ಅಗಲ
ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಈ ಸ್ಮಾರಕ ಗ್ರಾಮ ದೇವಾಲಯದ ಮುಂದೆ ಇದೆ. ಕಪ್ಪು ಕಣಶಿಲೆಯಲ್ಲಿರುವ ಈ ಶಿಲ್ಪವನ್ನು ಒಂದೇ ಅಂಕಣದಲ್ಲಿ ವೀರರನ್ನು ಕಂಡರಿಸಲಾಗಿದೆ. ವೀರನು ತಲೆಕೂದಲನ್ನು ತುರುಬಿನಾಕಾರದಲ್ಲಿ ಕಟ್ಟಿಕೊಂಡು, ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿರುವನು ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಎಡಗೈಯಲ್ಲಿ ಕಠಾರಿಯನ್ನು ಹಿಡಿದುಕೊಂಡು ನಿಂತಿರುವಂತೆ ಕಂಡರಿಸಲಾಗಿದೆ.

ಸಂಖ್ಯೆ : ೨೭
ಶಿಲ್ಪ : ವೀರಗಲ್ಲು

ಹೋಗುವ ಮುಖ್ಯ ರಸ್ತೆಯ ಬಲ ಭಾಗಕ್ಕೆ ಪೂರ್ವಾಭಿಮುಖವಾಗಿ ನಿಂತಿರುವ ಚಿರತೆ ಬೇಟೆ ಶಿಲ್ಪವಿದೆ. ಈ ಶಿಲ್ಪವನ್ನು ವಿದ್ವಾಂಸರಾದ ಡಿ. ವಿ. ಪರಮಶಿವಮೂರ್ತಿಯವರು ಬಹಳ ಸುಂದರವಾದ ಹುಲಿ ಹೋರಾಟದ ವೀರಗಲ್ಲುನ್ನು ಹಾಗೂ ಬರಹವಿಲ್ಲದ ಈ ವೀರಗಲ್ಲಿನಲ್ಲಿ ಹುಲಿಯನ್ನು ಪ್ರಧಾನವಾಗಿ ಚಿತ್ರಿಸಲಾಗಿದೆ ಎಂದು ಗುರುತಿಸಿದ್ದಾರೆ. ಆದರೆ ಈ ಶಿಲ್ಪವನ್ನು ಗಮನಿಸಿದಾಗ ಅದು ಹುಲಿಯಾಗಿರದೆ ಚಿರತೆಯಂತೆ ಕಂಡುಬರುವುದು, ಸ್ಥಳೀಯರು ಕೂಡ ಚಿರತೆ ಎಂದು ಕರೆಯುತ್ತಾರೆ. ಸ್ಥಳೀಯ ಭಾಗದಲ್ಲಿ ಚಿರತೆಗಳ ಹಾವಳಿ ಇಂದಿಗೂ ಕೂಡ ಇದೆ. ಇದು ವೀರ ಮತ್ತು ಮಾಸ್ತಿಕಲ್ಲಾಗಿದೆ. ಇದು ಸುಮಾರು ೪.೨ ಅಡಿ ಉದ್ದ ಮತ್ತು ೫ ಅಡಿ ಅಗಲ ಇದೆ. ಇಲ್ಲಿ ವೀರ ಹಾಗೂ ಮಾಸ್ತಿ ಉಬ್ಬು ಶಿಲ್ಪಗಳು ಸುಂದರವಾಗಿ ಮೂಡಿಬಂದಿವೆ. ವೀರನು ತನ್ನ ಬಲಗೈಯಿಂದ ಚಿರತೆಯೊಂದರ ತಲೆಗೆ ತಿವಿಯುತ್ತಿರುವ ದೃಶ್ಯವಿದೆ. ವೀರನ ಸೊಂಟದಲ್ಲಿ ಒಂದು ಕಿರುಗತ್ತಿಯೂ ಇದ್ದು, ಕೊರಳಲ್ಲಿ ವೈವಿಧ್ಯಮಯ ಆಭರಣಗಳಿವೆ. ಕಿವಿಯಲ್ಲಿ ಓಲೆ, ಕಾಲುಗಳಲ್ಲಿ ಕಡಗಳನ್ನು ಧರಿಸಿದ್ದಾನೆ.

ಸಂಖ್ಯೆ : ೦೧

ಶಿಲ್ಪ : ಹಂದಿ ಬೇಟೆ ಶಿಲ್ಪ

ಗ್ರಾಮ : ಕನಕಗಿರಿ

ಸ್ಥಳ : ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಹತ್ತಿರ

ವಿಸ್ತೀರ್ಣ : ೪ ಅಡಿ ಅಗಲ ಮತ್ತು ೫ ಅಡಿ ಉದ್ದ

ಕಾಲಮಾನ : ಕ್ರಿ.ಶ.ಸು. ೧೪ನೇ ಶತಮಾನ

ಕನಕಗಿರಿ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಪ್ರಕಾರ ಗೋಡೆಯ ಹತ್ತಿರ ಬಿಡಿಯಾದ ಹಂದಿಬೇಟೆಯ ಶಿಲ್ಪವನ್ನು ಇಟ್ಟಿದ್ದಾರೆ. ಆ ಶಿಲ್ಪದಲ್ಲಿ ಒಂದು ಹಂದಿ, ನಾಲ್ಕು ನಾಯಿಗಳನ್ನು ಚಿತ್ರಿಸಲಾಗಿದೆ. ಹಂದಿಯ ಬೆನ್ನಿನ ಮೇಲೆ ದಾಳಿಮಾಡಿ ನಾಯಿಯೊಂದು ಅದರ ತಲೆಯನ್ನು ಕಚ್ಚುತ್ತಿರುವ ದೃಶ್ಯ ಮತ್ತೊಂದು ನಾಯಿ ಹಂದಿಯ ಹಿಂಗಾಲಿನ ತೊಡೆಯನ್ನು ಕಚ್ಚಿ ಎಳೆಯುತ್ತಿರುವುದನ್ನು ಚಿತ್ರಿಸಿದ್ದಾರೆ. ಹಂದಿಯ ಮುಂಭಾಗದಲ್ಲಿರುವ ನಾಯಿ ಬೊಗುಳುವುದರ ಮೂಲಕ ಅದನ್ನು ತಡೆದಿದೆ. ಇದರ ಪಕ್ಕದಲ್ಲಿ ವೀರನೊಬ್ಬ ಉದ್ದವಾದ ಬೆತ್ತದಿಂದ ಹಂದಿಯನ್ನು ಹೊಡೆಯಲು ಹೋಗುತ್ತಿದ್ದಾನೆ. ಶಿಲ್ಪದಲ್ಲಿ ಹಂದಿಯ ದೇಹವನ್ನು ಬಹಳ ವಾಸ್ತವ ರೀತಿಯಲ್ಲಿ ಚಿತ್ರಿಸಲಾಗಿದೆ.[೨೨] ಇಲ್ಲಿ ವೀರನೊಬ್ಬ ತನ್ನ ಸಾಕು ನಾಯಿಗಳೊಂದಿಗೆ ಬೇಟೆಯಾಡಿ ಮಡಿದಿರುವುದು ಕಂಡುಬರುತ್ತದೆ.

ಸಂಖ್ಯೆ : ೦೨

ಶಿಲ್ಪ : ಹುಲಿಬೇಟೆ ಸ್ಮಾರಕ ಶಿಲ್ಪ

ಗ್ರಾಮ : ನಂದಿಹಳ್ಳಿ

ಸ್ಥಳ : ಗ್ರಾಮ ದೇವತೆ ದೇವಾಲಯದ ಮುಂದೆ.

ವಿಸ್ತೀರ್ಣ : ೨.೫ ಅಡಿ ಉದ್ದ ಮತ್ತು ೧.೬ ಅಡಿ ಅಗಲ

ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಇದೇ ಗ್ರಾಮದಲ್ಲಿ ಮತ್ತೊಂದು ವೀರಗಲ್ಲು ಇದೆ. ಕಪ್ಪು ಕಣಶಿಲೆಯಲ್ಲಿರುವ ಈ ಸ್ಮಾರಕದಲ್ಲಿ ವೀರನು ಸಮಭಂಗಿಯಲ್ಲಿ ನಿಂತಿರುವಂತೆ ವೀರನನ್ನು ಕೆತ್ತಲಾಗಿದೆ. ರಾಜು ಉಡುಪಿನಲ್ಲಿರುವ ವೀರನು ತಲೆಕೂದಲನ್ನು ತುರುಬಿನ ರೀತಿ ಕಟ್ಟಿಕೊಂಡು, ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಬಲಗೈಯಲ್ಲಿ ಉದ್ದನೆಯ ಕತ್ತಿಯನ್ನು ಹಿಡಿದು ಬಲಭುಜದ ಮೇಲೆ ಇಟ್ಟುಕೊಂಡು ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ಕೆಳಗೆ ಕೈಯನ್ನು ಇಳಿಬಿಟ್ಟಿದ್ದಾನೆ. ಇದೊಂದು ಯುದ್ಧಕ್ಕೆ ಹೊರಡುವ ಸಿದ್ಧತೆ ಈ ಸ್ಮಾರಕ ಶಿಲ್ಪದಲ್ಲಿ ಕಾಣುತ್ತೇವೆ ಮೇಲ್ಭಾಗದಲ್ಲಿ ಸೂರ್ಯ ಚಂದ್ರನ್ನು ಕಂಡರಿಸಲಾಗಿದೆ.

ಸಂಖ್ಯೆ : ೨೮

ಶಿಲ್ಪ : ವೀರಗಲ್ಲು

ಗ್ರಾಮ : ವಡಕಿ

ಸ್ಥಳ : ಲಕ್ಷ್ಮೀದೇವಾಲಯದ ಹಿಂದೆ

ವಿಸ್ತೀರ್ಣ : ೪ ಅಡಿ ಉದ್ದ ಮತ್ತು ೩ ಅಡಿ ಅಗಲ

ಕಾಲಮಾನ : ೧೪ ಮತ್ತು ೧೫ನೇ ಶತಮಾನ

ಈ ಸ್ಮಾರಕವನ್ನು ಒಂದು ಅಂಕಣದಲ್ಲಿ ರೂಪಿಸಲಾಗಿದೆ. ಸಮಭಂಗಿಯಲ್ಲಿ ನಿಂತಿರುವ ವೀರನು ಕಿವಿಯಲ್ಲಿ ಆಭರಣ, ಕೊರಳಲ್ಲಿ ಕೊರಳ ಹಾರವನ್ನು, ಕೈಕಾಲುಗಳಲ್ಲಿ ಕಡಗಗಳನ್ನು ಧರಿಸಿರುವನು. ಎಡಗೈಯಲ್ಲಿ ಕೋವಿಯನ್ನು ಹಿಡಿದು, ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ವೀರನು ಧರಿಸಿರುವ ಉಡುಪಿನಿಂದ ಸಾಮಾನ್ಯ ಯೋಧನೆಂದು ಗುರುತಿಸಬಹುದು. ಸ್ಥಳೀಯರು ಈತನನ್ನು 'ಈರಣ್ಣ' ಎಂದು ಕರೆಯುತ್ತಾರೆ. ಅಲ್ಲದೆ ಊರಿನ ಎಲ್ಲಾ ಸಮುದಾಯದವರು ಈ ಸ್ಮಾರಕವನ್ನು ಪೂಜಿಸಿಕೊಂಡು ಬರುತ್ತಿರುವುದು ಕ್ಷೇತ್ರ ಕಾರ್ಯ ಕೈಗೊಂಡ ಸಂದರ್ಭದಲ್ಲಿ ತಿಳಿದುಬಂದಿದೆ.

ತುರುಗಾಳಗದಲ್ಲಿ ಮಡಿದ ವೀರರ ಸ್ಮಾರಕ ಶಿಲ್ಪಗಳು

ದನಗಳು ಪ್ರಾಚೀನ ಭಾರತದ ಆರ್ಥಿಕ ಸಂಪತ್ತೇ ಆಗಿದ್ದವು. ಒಬ್ಬ ವ್ಯಕ್ತಿಯ ಶ್ರೀಮಂತಿಕೆ ಅವನು ಹೊಂದಿರುವ ದನಗಳ ಸಂಖ್ಯೆಯನ್ನು ಅವಲಂಬಿಸಿತ್ತು. ಪೌಷ್ಠಿಕ ಆಹಾರವಾದ ಹಾಲು, ತುಪ್ಪ, ಮೊಸರು ಮುಂತಾದವುಗಳನ್ನು ಮತ್ತು ವ್ಯವಸಾಯಕ್ಕೆ ಅಗತ್ಯವಾದ ಗೊಬ್ಬರವನ್ನೂ

ನೀಡುವ ಇವು ವ್ಯವಸಾಯ ಮಾಡಲು ಒಂದು ಶಕ್ತಿಯಾಗಿ ಮಾನವನ ನೆರವಿಗೆ ನಿಂತವು. ಆದ್ದರಿಂದ ದನಗಳನ್ನು ಹಣದ ಆಸೆಯಿಂದ ಕದಿಯಲು ಆರಂಭ ಮಾಡಿದರು. ಈ ರೀತಿ ದನಗಳನ್ನು ಅಪಹರಿಸಿದವರನ್ನು ಹಾಗಿಯೇ ಬಿಡುವುದು ಹೇಡಿತನದ ಪರಮಾವಧಿ ಎಂಬ ಒಂದು ಭಾವನೆ ಮೂಡಿತು. ಯಾವಾಗ ಇದು ಒಂದು ಮೌಲ್ಯವಾಗಿ ಪರಿಣಮಿಸಿತೋ ಆಗ ಶತ್ರುಗಳನ್ನು ಕೆಣಕಿ ಅವಮಾನ ಮಾಡುವುದಕ್ಕೆ ಆ ಅರಸನ ಪ್ರದೇಶದ ದನಗಳನ್ನು ಅಪಹರಿಸುವ ಯತ್ನಗಳು ನಡೆದವು. ಪಾಂಡವರನ್ನು ಹೊರಗೆ ಹಾಕಲು ಕೌರವರು ಈ ಮೌಲ್ಯವನ್ನೇ ಗಮನದಲ್ಲಿಟ್ಟುಕೊಂಡು ವಿರಾಟನ ದನಗಳನ್ನು ಅಪಹರಿಸಿದ್ದು, ಪಂಪನ ವಿಕ್ರಮಾರ್ಜುನ ವಿಜಯ ಮತ್ತು ರನ್ನನ ಗದಾಯುದ್ಧ ಈ ಎರಡು ಕಾವ್ಯಗಳಲ್ಲಿ ತುರುಗಾಳಗದ ಬಗ್ಗೆ ಕನ್ನಡನಾಡಿನ ವೀರರ ನಿಲುವು ಯಾವ ರೀತಿಯದಾಗಿತ್ತು ಎಂಬುದು ವ್ಯಕ್ತವಾಗಿದೆ. ಪಂಪ ಭಾರತದಲ್ಲಿ ವಿರಾಟನ ಕಡೆಯವರು ಹೇಳುವ ನಾವು ಬದುಕಿರುವವರೆಗೆ ದನಗಳನ್ನು ಅಪಹರಿಸಲು ಬಿಡುವುದಿಲ್ಲ. ನಾವು ಸತ್ತ ಮೇಲೆ ಅವು ನಮ್ಮ ಹೆಣಗಳನ್ನು ತುಳಿದು ಹೋಗಬೇಕು. ತುರುಗಾಳದಲ್ಲಿಯೇ ನಮ್ಮ ಉಳಿವು ಅಳಿವುಗಳು ಇರುವುದು ಎಂಬ ಮಾತುಗಳು ಪಂಪನ ಕಾಲದ ವೀರರ ಉದ್ಘರ್ಷವಾಗಿರುವುದನ್ನು ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು.[೩೦]

ಬೇಟೆಯಲ್ಲಿ ಮಡಿದ ವೀರರ ಸ್ಮಾರಕಗಳು

ಯಾವುದಾದರೂ ಕಾಡು ಮೃಗವೊಂದು ಬಂದು ಜನರಿಗೂ ಪಶುಗಳಿಗೂ ಅಥವಾ ಮಾನವ ಬೆಳೆದ ಬೆಳೆಗಳಿಗೂ ಹಾನಿಯನ್ನುಂಟು ಮಾಡುತ್ತಿದ್ದರೆ ಅಂತಹ ದುಷ್ಟ ಮೃಗಗಳನ್ನು ಬೇಟೆಯಾಡಲು ಹೋಗಿ ಮಡಿದ ವೀರರ ಸ್ಮಾರಕಗಳು ನಮಗೆ ದೊರೆತಿವೆ, ಕಾಡು ಮೃಗಗಳೆಂದರೆ ಹುಲಿ, ಚಿರತೆ ಕಾಡು ಹಂದಿಗಳು. ಸಾಮಾನ್ಯವಾಗಿ ಬೆಳೆಗಳನ್ನು ನಾಶಪಡಿಸುತ್ತಿದ್ದ ಪ್ರಾಣಿಯೆಂದರೆ ಕಾಡುಹಂದಿ, ಈ ಕಾಡು ಹಂದಿ ಬೇಟೆಯಾಡಲು ಹೋಗಿ ಮಡಿದ ವೀರರ ಸ್ಮಾರಕ ಶಿಲ್ಪಗಳು ಹೆಚ್ಚು ಕಾಣಬಹುದು. ಬೇಟೆಯಲ್ಲಿ ವೀರನಿಗೆ ನೆರವಾಗಿ ನಿಂತ ಪ್ರಾಣಿ ಎಂದರೆ ನಾಯಿ. ಯುದ್ಧದಲ್ಲಿ ಕುದುರೆಯ ಅವಶ್ಯಕತೆ ಎಷ್ಟರ ಮಟ್ಟಿಗೆ ಇತ್ತೋ ಅದಕ್ಕಿಂತಲೂ ಮಿಗಿಲಾಗಿ ಬೇಟೆಯಲ್ಲಿ ನಾಯಿಯ ಅವಶ್ಯಕತೆ ಇತ್ತು. ನಾಯಿ ಮಡಿದಾಗ ಅದರ ಸ್ಮಾರಕವಾಗಿ ವೀರಗಲ್ಲನ್ನು ಹಾಕಿಸಿರುವ ನಿದರ್ಶನಗಳಿವೆ.[೩೧]

ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿಯೇ ಪ್ರಾಣಿಗಳೊಂದಿಗೆ ಹೋರಾಡಿ ಮಡಿದ ವೀರರ ಸ್ಮಾರಕ ಶಿಲ್ಪಗಳು ಕಂಡುಬಂದಿವೆ. ಗಂಗಾವತಿ ತಾಲೂಕಿನ ಕಡೇ ಬಾಗಿಲಿನಿಂದ ಆನೆಗೊಂದಿಗೆ ಹೋಗುವ ಮುಖ್ಯ ರಸ್ತೆಯ ಬಲ ಭಾಗಕ್ಕೆ ಪೂರ್ವಭಿಮುಖವಾಗಿ ನಿಂತಿರುವ ಚಿರತೆ ಬೇಟೆ ಶಿಲ್ಪವಿದೆ. ಈ ಶಿಲ್ಪವನ್ನು ವಿದ್ವಾಂಸರಾದ ಡಿ. ವಿ. ಪರಮಶಿವಮೂರ್ತಿಯವರು ಬಹಳ ಸುಂದರವಾದ ಹುಲಿ ಹೋರಾಟದ ವೀರಗಲ್ಲುನ್ನು ಹಾಗೂ ಬರಹವಿಲ್ಲದ ಈ ವೀರಗಲ್ಲಿನಲ್ಲಿ ಹುಲಿಯನ್ನು ಪ್ರಧಾನವಾಗಿ ಚಿತ್ರಿಸಲಾಗಿದೆ ಎಂದು ಗುರುತಿಸಿದ್ದಾರೆ. ಆದರೆ ಈ ಶಿಲ್ಪವನ್ನು

ಗಮನಿಸಿದಾಗ ಅದು ಹುಲಿಯಾಗಿರದೆ ಚಿರತೆಯಂತೆ ಕಂಡುಬರುವುದು, ಸ್ಥಳೀಯರು ಕೂಡ ಚಿರತೆ ಎಂದು ಕರೆಯುತ್ತಾರೆ. ಸ್ಥಳೀಯ ಭಾಗದಲ್ಲಿ ಚಿರತೆಗಳ ಹಾವಳಿ ಇಂದಿಗೂ ಕೂಡ ಇದೆ. ಇದು ವೀರ ಮತ್ತು ಮಾಸ್ತಿಕಲ್ಲಾಗಿದೆ. ಇದು ಸುಮಾರು ೪.೨ ಅಡಿ ಉದ್ದ ಮತ್ತು ೫ ಅಡಿ ಅಗಲ ಇದೆ. ಇಲ್ಲಿ ವೀರ ಹಾಗೂ ಮಾಸ್ತಿ ಉಬ್ಬು ಶಿಲ್ಪಗಳು ಸುಂದರವಾಗಿ ಮೂಡಿಬಂದಿವೆ. ವೀರನು ತನ್ನ ಬಲಗೈಯಿಂದ ಚಿರತೆಯೊಂದರ ತಲೆಗೆ ತಿವಿಯುತ್ತಿರುವ ದೃಶ್ಯವಿದೆ. ವೀರನ ಸೊಂಟದಲ್ಲಿ ಒಂದು ಕಿರುಗತ್ತಿಯೂ ಇದ್ದು, ಕೊರಳಲ್ಲಿ ವೈವಿಧ್ಯಮಯ ಆಭರಣಗಳಿವೆ. ಕಿವಿಯಲ್ಲಿ ಓಲೆ, ಕಾಲುಗಳಲ್ಲಿ ಕಡಗಳನ್ನು ಧರಿಸಿದ್ದಾನೆ.

ಸಂಖ್ಯೆ : ೦೧

ಶಿಲ್ಪ : ಹಂದಿ ಬೇಟೆ ಶಿಲ್ಪ

ಗ್ರಾಮ : ಕನಕಗಿರಿ

ಸ್ಥಳ : ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಹತ್ತಿರ

ವಿಸ್ತೀರ್ಣ : ೪ ಅಡಿ ಅಗಲ ಮತ್ತು ೫ ಅಡಿ ಉದ್ದ

ಕಾಲಮಾನ : ಕ್ರಿ.ಶ.ಸು. ೧೪ನೇ ಶತಮಾನ

ಕನಕಗಿರಿ ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಪ್ರಕಾರ ಗೋಡೆಯ ಹತ್ತಿರ ಬಿಡಿಯಾದ ಹಂದಿಬೇಟೆಯ ಶಿಲ್ಪವನ್ನು ಇಟ್ಟಿದ್ದಾರೆ. ಆ ಶಿಲ್ಪದಲ್ಲಿ ಒಂದು ಹಂದಿ, ನಾಲ್ಕು ನಾಯಿಗಳನ್ನು ಚಿತ್ರಿಸಲಾಗಿದೆ. ಹಂದಿಯ ಬೆನ್ನಿನ ಮೇಲೆ ದಾಳಿಮಾಡಿ ನಾಯಿಯೊಂದು ಅದರ ತಲೆಯನ್ನು ಕಚ್ಚುತ್ತಿರುವ ದೃಶ್ಯ ಮತ್ತೊಂದು ನಾಯಿ ಹಂದಿಯ ಹಿಂಗಾಲಿನ ತೊಡೆಯನ್ನು ಕಚ್ಚಿ ಎಳೆಯುತ್ತಿರುವುದನ್ನು ಚಿತ್ರಿಸಿದ್ದಾರೆ. ಹಂದಿಯ ಮುಂಭಾಗದಲ್ಲಿರುವ ನಾಯಿ ಬೊಗುಳುವುದರ ಮೂಲಕ ಅದನ್ನು ತಡೆದಿದೆ. ಇದರ ಪಕ್ಕದಲ್ಲಿ ವೀರನೊಬ್ಬ ಉದ್ದವಾದ ಬೆತ್ತದಿಂದ ಹಂದಿಯನ್ನು ಹೊಡೆಯಲು ಹೋಗುತ್ತಿದ್ದಾನೆ. ಶಿಲ್ಪದಲ್ಲಿ ಹಂದಿಯ ದೇಹವನ್ನು ಬಹಳ ವಾಸ್ತವ ರೀತಿಯಲ್ಲಿ ಚಿತ್ರಿಸಲಾಗಿದೆ.[೨] ಇಲ್ಲಿ ವೀರನ್ನೊಬ್ಬ ತನ್ನ ಸಾಕು ನಾಯಿಗಳೊಂದಿಗೆ ಬೇಟೆಯಾಡಿ ಮಡಿದಿರುವುದು ಕಂಡುಬರುತ್ತದೆ.

ಸಂಖ್ಯೆ : ೦೩

ಶಿಲ್ಪ : ಹುಲಿಬೇಟೆ ಸ್ಮಾರಕ ಶಿಲ್ಪ

ಗ್ರಾಮ : ಹೊಸರಾಮದುರ್ಗ

ಸ್ಥಳ : ಸೋಮಣ್ಣ ಗಡ್ಡಿಯವರ ಹೊಲದಲ್ಲಿ

ವಿಸ್ತೀರ್ಣ : ೫ ಅಡಿ ಉದ್ದ ಮತ್ತು ೮ ಅಡಿ ಅಗಲ

ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಹೊಸರಾಮದುರ್ಗದ ಗ್ರಾಮದಲ್ಲಿರುವ ಹುಲಿಬೇಟೆಯ ಸ್ಮಾರಕ ಶಿಲ್ಪವು ಬಹಳ ಅಪರೂಪದ್ದಾಗಿದೆ. ಈ ಸ್ಮಾರಕದ ವಿಶೇಷವೆಂದರೆ ಹುಲಿಯೊಂದಿಗೆ ಹೋರಾಡಿದ ದೃಶ್ಯವನ್ನು ಏಕಶಿಲೆಯಲ್ಲಿ ಚಿತ್ರಿಸಲಾಗಿದೆ. ಬೃಹತ್ ಬಂಡೆಯ ಮೇಲೆ ಚಿತ್ರಿಸಿರುವುದರಿಂದ ನಮ್ಮ ಗಮನ ಸೆಳೆಯುತ್ತದೆ. ಪ್ರಾಯಶಃ ಈ ರೀತಿಯ ಬಂಡೆಯ ಮೇಲೆ ಚಿತ್ರಿಸಿರುವ ಸ್ಮಾರಕವೂ ರಾಜ್ಯದ ಇತರೆ ಯಾವುದೇ ಜಿಲ್ಲೆಯಲ್ಲಿ ಕಂಡುಬರುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ.ಇಲ್ಲಿ ವೀರರಿಬ್ಬರೂ ಹುಲಿಬೇಟೆಯಯಾಡುವ ದೃಶ್ಯವಿದೆ, ಒಬ್ಬ ವೀರನು ತನ್ನ ಎರಡು ಕೈಗಳಿಂದ ಬಂದೂಕನ್ನು. ಹಿಡಿದು ಯುದ್ದ ಸನ್ನದ್ಧ ರೀತಿಯಲ್ಲಿ ನಿಂತಿದ್ದರೆ, ಮತ್ತೊಬ್ಬ ವೀರನು ಬಲಗೈಯಲ್ಲಿರುವ ಕತ್ತಿಯನ್ನು ತನ್ನ ಬಲಭುಜದ ಮೇಲಿಟ್ಟುಕೊಂಡು ನಿಂತಿರುವ ಚಿತ್ರಣವಿದೆ. ಈ ವೀರರಿಬ್ಬರೂ ಧರಿಸಿರುವ ಕಿವಿ ಮತ್ತು ಕೊರಳ ಆಭರಣಗಳು ಹಾಗೂ ಉಡುಪುಗಳು ವಿಶೇಷ ಗಮನ ಸೆಳೆಯುತ್ತವೆ. ವೀರರು ಹಿಂಬದಿಯಲ್ಲಿ ಒಬ್ಬಳು ಎಡಗೈಯಲ್ಲಿ ಗಿಂಡಿಯನ್ನು ಹಿಡಿದು ನಿಂತಿರುವಳು ಆಕೆಯ ಹಿಂಬದಿಯಲ್ಲಿ ಮತ್ತೊಬ್ಬ ವೀರನು ಆಯುಧಗಳನ್ನು ಹಿಡಿದು ನಿಂತಿರುವ ಚಿತ್ರಣವಿದೆ. ಇಲ್ಲಿ ಮೂವರು ವೀರರು ಹುಲಿಯೊಂದಿಗೆ ಹೋರಾಡಿ ಮಡಿದಿರುವುದು ಕಂಡುಬರುತ್ತದೆ. ಇವರಲ್ಲಿ ಪ್ರಮುಖನಾದ ವ್ಯಕ್ತಿಯ ಹೆಂಡತಿಯೊಬ್ಬಳೇ ಸತಿಯಾಗಿರುವುದು ಇಲ್ಲಿ ವಿಶೇಷವಾಗಿದೆ. ಪ್ರಾಯಶಃ ಇನ್ನುಳಿದ ಇಬ್ಬರು ವೀರರು ವಿವಾಹವಾಗದೆ ಇರಬಹುದೆಂದು ತೋರುತ್ತದೆ. ಈ ದೃಶ್ಯದ ಮೇಲ್ಭಾಗದ ಬಲ ತುದಿಯಲ್ಲಿ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.[೩೩]

ನೀರಿನಲ್ಲಿ ಮಡಿದ ವೀರರ ಸ್ಮಾರಕ ಶಿಲ್ಪಗಳು

ಜನರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸಾಗಿಸುವಲ್ಲಿ ತಮ್ಮ ಸಾಹಸವನ್ನು ತೋರಿಸಿ ನೀರಿನಲ್ಲಿ ಮಡಿದಿರಬಹುದಾದ ವೀರರ ವೀರಗಲ್ಲುಗಳು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ದೊರೆಯುತ್ತವೆ. ಹಂಪಿಯಿಂದ ತುಂಗಾಭದ್ರ ನದಿಯನ್ನು ದಾಟಿ ಆನೆಗೊಂದಿಗೆ ಹೋಗುವ ದಾರಿಯಲ್ಲಿ ಇಂತಹ ಸ್ಮಾರಕ ಶಿಲ್ಪಗಳನ್ನು ಕಾಣಬಹುದು. ಇಂದಿಗೂ ಅಂಬಿಗರು ಅವುಗಳನ್ನು ವಿಶೇಷ ಸಂದರ್ಭಗಳಲ್ಲಿ ಆರಾಧಿಸುತ್ತಾರೆ. ಮತ್ತು ಅವುಗಳನ್ನು ವೀರಗಾರರು ಎಂಬುದಾಗಿ ಕರೆಯುತ್ತಾರೆ. ನಿಂತ ಇಬ್ಬರು ವೀರರು ತಮ್ಮ ಉಟ್ಟಬಟ್ಟೆಗಳನ್ನು ಕೈಯಲ್ಲಿ ಹಿಡಿದಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಈ ರೀತಿಯ ವೀರಗಲ್ಲುಗಳು ಅಪರೂಪವೆಂದೇ ವಿದ್ವಾಂಸರು ಅಭಿಪ್ರಾಯಿಸಿದ್ದಾರೆ.[೩೪]

ಸಂಖ್ಯೆ : ೦೧

ಶಿಲ್ಪ : ವೀರಗಲ್ಲು

ಗ್ರಾಮ : ಆನೆಗೊಂದಿ,

ಸ್ಥಳ : ಕೋಟೆಯ ಬಾಗಿಲ ಬಳಿ

ವಿಸ್ತೀರ್ಣ : ೩ ಅಡಿ ಉದ್ದ, ಮತ್ತು ೨.೫ ಅಡಿ ಅಗಲ.

ಕಾಲಮಾನ : ಕ್ರಿ.ಶ.ಸು. ೧೪ನೇ ಶತಮಾನ.

ತಳವಾರ ಘಟ್ಟದಿಂದ ತುಂಗಭದ್ರಾ ನದಿಯನ್ನು ಹುಟ್ಟಿನಲ್ಲಿ ದಾಟಿ ಆನೆಗೊಂದಿಗೆ ಹೋಗಲು ಇಳಿಯುವ ದಡದಲ್ಲಿ ಅಂದರೆ ಆನೆಗೊಂದಿ ಕೋಟೆಯ ಬಾಗಿಲ ಬಳಿ ಮತ್ತು ಹುಚ್ಚಪ್ಪಯ್ಯ ಮಠದ ಮುಂಭಾಗದಲ್ಲಿ ಸ್ಮಾರಕ ಶಿಲ್ಪಗಳು ಕಂಡುಬರುತ್ತವೆ. ಆ ವೀರಗಲ್ಲಿನಲ್ಲಿ ಇಬ್ಬರು ವೀರರು ಇದ್ದಾರೆ. ವೀರರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸಾಗಿಸುವಲ್ಲಿ ತಮ್ಮ ಸಾಹಸವನ್ನು ತೋರಿಸಿ, ನೀರಿನಲ್ಲಿ ಮಡಿದಿರಬಹುದಾದ ವೀರರ ಶಿಲ್ಪವಿದೆ. ಆದರೆ ಅವುಗಳ ಮೇಲೆ ಇಲ್ಲವಾದ್ದರಿಂದ ಆ ಬಗ್ಗೆ ಖಚಿತವಾಗಿ ಏನನ್ನು ಹೇಳಲಾಗುವುದಲ್ಲ. ಇಂದಿಗೂ ಅಂಬಿಗರ ಅವುಗಳನ್ನು ವಿಶೇಷ ಸಂದರ್ಭಗಳಲ್ಲಿ ಆರಾಧಿಸುತ್ತಾರೆ. ಈ ವೀರಗಲ್ಲುಗಳನ್ನು ವೀರಗಾರರು ಎಂಬುದಾಗಿ ಕರೆಯುತ್ತಾರೆ. ನಿಂತ ಇಬ್ಬರು ವೀರರು ತಮ್ಮ ಹುಟ್ಟುಗಳನ್ನು ಕೈಯಲ್ಲಿ ಹಿಡಿದಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಈ ರೀತಿಯ ವೀರಗಲ್ಲುಗಳು ಅಪರೂಪವೆಂದು ಹೇಳಬಹುದು ತಳವಾರಘಟ್ಟದಿಂದ ಆನೆಗೊಂದಿಗೆ ಹೋಗುವ ದಡದ ಬಳಿಯಲ್ಲಿಯ ವೀರಗಲ್ಲಿನಲ್ಲಿ ಮೊದಲನೆಯ ಹಂತದಲ್ಲಿ ವೀರನು ಬಲಗೈಯಲ್ಲಿ ಹುಟ್ಟನ್ನು ಹಿಡಿದುಕೊಂಡು ಮೇಲೆ ಎತ್ತಿದ್ದು, ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾನೆ. ಎರಡನೆಯ ವೀರನು ಬಲಗೈಯನ್ನು ಮೇಲೆ ಎತ್ತಿದ್ದು. ಎಡಗೈಯಲ್ಲಿ ಹುಟ್ಟನ್ನು ಹಿಡಿದುಕೊಂಡು ಎದೆಯವರೆಗೆ ಕೈಯನ್ನು ಇಟ್ಟುಕೊಂಡು ಕೆಳಗಡೆ ಹುಟ್ಟುನ್ನು ಇಳಿಬಿಟ್ಟಿದ್ದಾನೆ. ಇಬ್ಬರು ವೀರರು ಎಡಗಡೆ ತುರುಬುವನ್ನು ಕಟ್ಟಿದ್ದಾರೆ. ಸೊಂಟಕ್ಕೆ ವಸ್ತ್ರವನ್ನು ಸುತ್ತಿಕೊಂಡಿದ್ದಾರೆ. ಆನೆಗೊಂದಿಯ ಹುಚ್ಚಪ್ಪಯ್ಯನ ಮಠದ ಮುಂಭಾಗದಲ್ಲಿ ಈ ವೀರಗಲ್ಲು ಇದ್ದು, ಅದರಲ್ಲಿ ಇಬ್ಬರು ವೀರರು ಹುಟ್ಟುನ್ನು ಹಿಡಿದುಕೊಂಡು ನಿಂತಿದ್ದಾರೆ. ಮೊದಲನೆಯ ವೀರನು ಬಲಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡು ಕೆಳಭಾಗದಲ್ಲಿ ಹುಟ್ಟುನ್ನು ಇಳಿಬಿಟ್ಟಿದ್ದಾನೆ. ಎಡಗೈಯನ್ನು ಮೇಲೆ ಎತ್ತಿದ್ದಾನೆ. ಇಬ್ಬರು ವೀರರು ತಲೆಗೆ ರುಮಾಲು ಕಟ್ಟಿದ್ದು, ಸೊಂಟಕ್ಕೆ ವಸ್ತ್ರಗಳನ್ನು ಕಟ್ಟಿಕೊಂಡಿದ್ದಾರೆ. ಎರಡನೆಯ ವೀರನು ಬಲಗೈಯನ್ನು ಇಳಿಬಿಟ್ಟಿದ್ದು ಎಡಗೈಯಲ್ಲಿ ಹುಟ್ಟನ್ನು ಹಿಡ್ಡಿದುಕೊಂಡು ಎದೆಯ ಭಾಗದ ಮೇಲೆ ಇಟ್ಟುಕೊಂಡಿದ್ದಾನೆ ವೀರನು ಬಲಗಡೆಯಲ್ಲಿ ತುರುಬು ಕಟ್ಟಿದ್ದಾನೆ.[೩೫]

ಸಂಖ್ಯೆ : ೦೨

ಶಿಲ್ಪ : ಅಂಬಿಗರಿಗೆ ಸಂಬಂಧಿಸಿದ ವೀರಗಲ್ಲು

ಗ್ರಾಮ : ಹೇರೂರು

ಸ್ಥಳ : ಈ ವೀರಗಲ್ಲು ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಬಟ್ಟರ ಅಂಗಡಿಯ ಮುಂಭಾಗದಲ್ಲಿದೆ.

ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೨.೫ ಅಡಿ ಅಗಲ
ಕಾಲಮಾನ : ಕ್ರಿ. ಶ. ಸು. ೧೪ನೇ ಶತಮಾನ

ಅಂಬಿಗರಿಗೆ ಸಂಬಂಧಿಸಿದ ವೀರಗಲ್ಲುಗಳು ದೊರಕುವುದು ಅಪರೂಪ, ಹೇರೂರು ಗ್ರಾಮದಲ್ಲಿ ಅಂಬಿಗ ಸಮುದಾಯದವರು ಕಂಡುಬರುತ್ತಾರೆ ಎಂಬುದನ್ನು ಗಮನಿಸಬಹುದು. ಈ ವೀರಗಲ್ಲನ್ನು ಕೆಂಪು ಕಲ್ಲಿನಲ್ಲಿ ಕೆತ್ತಲಾಗಿದೆ. ಇದು ೨೨ ಇಂಚು, ಅಗಲ ಮತ್ತು ೩೦ ಇಂಚು ಉದ್ದವನ್ನು ಒಳಗೊಂಡಿದೆ. ಈ ಕಲ್ಲು ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಬಟ್ಟರ ಅಂಗಡಿಯ ಮುಂಭಾಗದಲ್ಲಿ ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿದೆ. ಒಬ್ಬ ವೀರನ ಚಿತ್ರವಿದ್ದು ಕೈಯಲ್ಲಿ ಹುಟ್ಟನ್ನು ಹಿಡಿದು ಕೈ ಮೇಲೆ ಎತ್ತಿ ಒಂದು ಕೈಯಲ್ಲಿ ನಿಂಬೆಹಣ್ಣು ಹಿಡಿದುಕೊಂಡು ನಿಂತಿದ್ದಾನೆ. ತಲೆಗೆ ವಸ್ತ್ರವನ್ನು ಸುತ್ತಿಕೊಂಡಿರುವುದನ್ನು ಕಾಣುತ್ತೇವೆ. ಅಂಬಿಗರ ಸಮುದಾಯವನ್ನು ಈ ವೀರಗಲ್ಲುಗೆ 'ಕಂತೆಪ್ಪ ತಾತ' ಎಂದು ಸಂಬೋಧಿಸುತ್ತಾರೆ. ಮತ್ತು ಅದಕ್ಕೆ ವಿಶೇಷ ಸಂದರ್ಭದಲ್ಲಿ ಪೂಜೆ ಮಾಡುತ್ತಾರೆ.[೩೬]

ಬಂದೂಕು ವೀರಗಲ್ಲುಗಳು

ಭಾರತೀಯರು ಪ್ರಾಚೀನ ಕಾಲದಲ್ಲಿಯೇ ಸಿಡಿಮದ್ದನ್ನು ಬಳಸಿದ್ದರು, ಅದನ್ನು ಮಹಾಭಾರತದ ಮುದ್ರಾರಾಕ್ಷಸ ಹಾಗೂ ಅಗ್ನಿ ಪುರಾಣ ಮೊದಲಾದ ಸಂಸ್ಕೃತಿ ಕಾವ್ಯಗಳಲ್ಲಿ ಕಾಣಬಹುದೆಂಬ ಅಭಿಪ್ರಾಯವಿದೆ. ಈ ವಾದವನ್ನು ಮಂಡಿಸಿದ ವಿದ್ವಾಂಸರು ಒಪರ್ಟ್, ವಿಲ್ಸನ್, ರಾಮಾದಾಸ್ ಸೇನ್, ವಿ. ಆರ್. ದೀಕ್ಷಿತರ್ ಸಂಸ್ಕೃತ ಕಾವ್ಯಗಳಲ್ಲಿ ಉಲ್ಲೇಖಗೊಂಡಿರುವ ಶತಘ್ನಿ, ಕನಪ, ಆಯುರ್ವಘ್ನಿ, ನರಚ, ಲೋಹಯಂತ್ರ, ಕಾಲಚಕ್ರ, ಸರ್ವಘಾಟಿ, ದಿದಿತಿ, ಸ್ಪುಲಿಂಗ, ಕದಿನಿ ಹಾಗೂ ಕೌಟಿಲ್ಯನು ಹೇಳುವ 'ಅಗ್ನಿಬಾಣ' ಕಾಮಾಂದಕ ಮತ್ತು ಶುಕ್ರನೀತಿಯಲ್ಲಿ ಬರುವ 'ನಲಿಕ' ಗಳನ್ನು ಸಿಡಿಮದ್ದು ಆಯುಧಗಳೆಂದು ಹೇಳಲಾಗಿದೆ. ಕನ್ನಡ ಕಾವ್ಯಗಳಲ್ಲೂ ಸಿಡಿಮದ್ದು, ಆಯುಧಗಳ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಅವುಗಳೆಲ್ಲವೂ ಕ್ರಿ.ಶ. ೧೫ನೇ ಶತಮಾನದ ಕಾಲದವು. ಈ ಕಾವ್ಯಗಳು ವ್ಯಕ್ತಪಡಿಸುವ ಫಿರಂಗಿ, ಗುಂಡುಗೋವಿ, ಮದ್ದಿನಪಟ್ಟಣ, ಶತಘ್ನಿ, ಉಪ್ಪಿನತಿತ್ತಿ, ಪೇಟಲು, ಕೈಗೋವಿ, ಬೋರಿ ಶತಾಗ್ನಿ, ತೋಮು ಇನ್ನೂ ಮುಂತಾದವುಗಳು ಸಿಡಿಮದ್ದಿನ ಸಮರ್ಥ ಬಳಕೆಯನ್ನು ಎತ್ತಿ ಹಿಡಿದಿವೆ.

ವಿಜಯನಗರ ಕಾಲವಧಿಯಲ್ಲಿ ಬಂದೂಕು ವೀರುಗಲ್ಲುಗಳಲ್ಲಿ ವಿಶೇಷ ಹಾಗೂ ಹೊಸಬಗೆಯ ಆಯುಧವಾದ ಬಂದೂಕು ಕಂಡುಬಂದಿರುವುದರಿಂದ ಕರ್ನಾಟಕದಲ್ಲಿ ಸಿಡಿಮದ್ದಿನ ಬಳಕೆ ಕ್ರಿ.ಶ.ಕ. ೧೪ನೇ ಶತಮಾನ ಅಂದರೆ ವಿಜಯನಗರ ಕಾಲದಿಂದ ಅದು ಬಳಕೆಗೆ ಬಂದಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಪ್ರಸ್ತುತ ಅಧ್ಯಯನ ಪ್ರದೇಶದ ಗಂಗಾವತಿ, ಆನೆಗೊಂದಿ, ಜಮ್ಮಾಪುರ, ಮತ್ತು ಕನಕಗಿರಿಯಲ್ಲಿ ಈ ಬಂದೂಕು ವೀರಗಲ್ಲುಗಳು ಕಂಡುಬರುವುದನ್ನು ಕ್ಷೇತ್ರಕಾರ್ಯದಲ್ಲಿ ಗುರುತಿಸಿರುತ್ತೇನೆ,

ಅವುಗಳ ಶಿಲ್ಪ ವೈಶಿಷ್ಟತ್ಯೆಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ.

ಸಂಖ್ಯೆ : ೦೧

ಶಿಲ್ಪ : ಬಂದೂಕು ವೀರಗಲ್ಲು

ಗ್ರಾಮ : ಹಳೇ ಮುಸ್ಟೂರು

ಸ್ಥಳ : ಚೆನ್ನಪ್ಪ ಬೂದುಗುಂಪ ಅವರ ಹೊಲದ ವಡ್ಡಿನ ಮೇಲಿರುವ ಮರದ ಕೆಳಗೆ

ವಿಸ್ತೀರ್ಣ : ೩.೫ ಅಡಿ ಉದ್ದ ಮತ್ತು ೨ ಅಡಿ ಅಗಲ.

ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಈ ಸ್ಮಾರಕ ಶಿಲ್ಪವನ್ನು ಕೆಂಪು ಕಣಶಿಲೆಯಲ್ಲಿ ಕಂಡರಿಸಲಾಗಿದೆ. ದಕ್ಷಿಣಾಭಿಮುಖವಾಗಿ ಈ ವೀರಗಲ್ಲನ್ನು ನೆಡಲಾಗಿದೆ. ವೀರನ ಬಲಗೈಯಲ್ಲಿ ಕತ್ತಿಯನ್ನು, ಎಡಗೈಯಲ್ಲಿ ಬಂದೂಕನ್ನು ಹಿಡಿದು ನಿಂತಿರುವ ಭಂಗಿಯಲ್ಲಿ ನಿಂತಿದ್ದಾನೆ. ವೀರನು ಮೀಸೆ ಬಿಟ್ಟು, ಕಿವಿ ಮತ್ತು ಕೊರಳಲ್ಲಿ ಆಭರಣಗಳು ಧರಿಸಿರುವುದನ್ನು ಕೆತ್ತಲಾಗಿದೆ. ಸ್ಮಾರಕದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಚಿತ್ರಗಳಿವೆ. ಇಲ್ಲಿ ವೀರನೊಬ್ಬ ಯಾವುದೋ ಒಂದು ಹೋರಾಟದಲ್ಲಿ ಮಡಿದಿರುವುದನ್ನು ಈ ಸ್ಮಾರಕ ನೆನಪಿಸುತ್ತದೆ.[೩೭]

ಸಂಖ್ಯೆ : ೦೨

ಶಿಲ್ಪ : ಬಂದೂಕು ವೀರಗಲ್ಲು

ಗ್ರಾಮ : ವಿಠಲಾಪುರ

ಸ್ಥಳ : ಶಾಲೆಯ ಆವರಣದಲ್ಲಿ

ವಿಸ್ತೀರ್ಣ : ೪ ಅಡಿ ಉದ್ದ ಮತ್ತು ೩ ಅಡಿ ಅಗಲ.

ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ.

ವಿಠಲಾಪುರ ಗ್ರಾಮದಲ್ಲಿರುವ ಈ ಸ್ಮಾರಕವನ್ನು ಕಣಶಿಲೆಯಲ್ಲಿ ಕಂಡರಿಸಲಾಗಿದೆ. ಒಂದು ಹಂತದಲ್ಲಿರುವ ಈ ಸ್ಮಾರಕದಲ್ಲಿ ವೀರನು ಎಡಗೈಯಲ್ಲಿ ಬಂದೂಕು, ಬಲಗೈಯಲ್ಲಿ ಚುರಿಯನ್ನು ಹಿಡಿದು ಯುದ್ದಕೆಸಿದ್ದನಾಗಿರುವಂತೆ ಕಂಡುಬರುವನು. ಊರಿ ಮೀಸೆ ಬಿಟ್ಟಿದ್ದಾನೆ, ಕೊರಳಲ್ಲಿ ಸರವನ್ನು ಕ್ಕೆ ಕಾಲುಗಳಲ್ಲಿ ಕಡಗಗಳಿವೆ. ಶಿಲ್ಪಿದ ಮೇಲ್ಭಾಗದಲ್ಲಿ. ಸೂರ್ಯ, ಚಂದ್ರರನ್ನು ಕಂಡಿರಿಸಲಾಗಿದೆ. ಶಿಲ್ಪವು ಬಹಳ ಸರಳತೆಯಿಂದ ಕೂಡಿದೆ.[೩೮]

ಸಂಖ್ಯೆ : ೦೩

ಶಿಲ್ಪ : ಬಂದೂಕು ವೀರಗಲ್ಲು

ಗ್ರಾಮ : ಗುಡದೂರು

ಸ್ಥಳ : ಸಿದ್ದಪ್ಪನವರ ಹೊಲದಲ್ಲಿ

ವಿಸ್ತೀರ್ಣ : ೩ ಉದ್ದ ಮತ್ತು ೨ ಅಗಲ ಅಡಿ

ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಈ ಗ್ರಾಮದ ಹೊಲವೊಂದರಲ್ಲಿರುವ ಸ್ಮಾರಕ ಶಿಲ್ಪವನ್ನು ಬೆಣಚುಕಲ್ಲಿನಲ್ಲಿ ಕಂಡರಿಸಲಾಗಿದೆ. ಒಂದು ಹಂತದಲ್ಲಿರುವ ಈ ಶಿಲ್ಪದಲ್ಲಿ ಒಬ್ಬ ವೀರನು ಬಲಗೈಯಲ್ಲಿ ಖಡ್ಗ ಹಾಗೂ ಎಡಗೈಯಲ್ಲಿ ದೊಡ್ಡದಾದ ಬಂದೂಕುವನ್ನು ಹಿಡಿದುಕೊಂಡಿದ್ದಾನೆ. ಮತ್ತೊಬ್ಬ ವೀರನು ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡಿದ್ದಾನೆ. ಇದೇ ಗ್ರಾಮದ ಹೊಲವೊಂದರಲ್ಲಿ ದೊಡ್ಡ ನೈಸರ್ಗಿಕ ಬಂಡೆಯ ಮೇಲೆ ಹನ್ನೆರಡು ಜನ ವೀರರನ್ನು ಚಿತ್ರಿಸಲಾಗಿದೆ. ಅವರಲ್ಲಿ ಎರಡನೇ ವೀರನು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಬಂದೂಕವನ್ನು ಹಿಡಿದುಕೊಂಡಿರುವಂತೆ ಕಂಡಿರಿಸಲಾಗಿದೆ.

ಸಂಖ್ಯೆ : ೦೪

ಶಿಲ್ಪ : ಬಂದೂಕು ವೀರಗಲ್ಲು

ಗ್ರಾಮ : ಹಿರೇ ಜಂತಗಲ್ಲು

ಸ್ಥಳ : ಶಾಲೆ ಮುಂಭಾಗದಲ್ಲಿ.

ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೨.೫ ಅಡಿ ಅಗಲ

ಕಾಲಮಾನ :ಕ್ರಿ.ಶ.ಸು. ೧೫ನೇ ಶತಮಾನ

ಈ ಸ್ಮಾರಕದಲ್ಲಿ ವೀರನು ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಬಂದೂಕನ್ನು ಹಿಡಿದು ಯುದ್ಧಕ್ಕೆ ಸನ್ನದ್ದನಾಗಿರುವನ್ನು, ವೀರಗಚ್ಚೇಯನ್ನು ತೊಟ್ಟು, ಕಿವಿ ಮತ್ತು ಕೊರಳಲ್ಲಿ ಆಭರಣಗಳನ್ನು ಧರಿಸಿ, ಸೊಂಟದಲ್ಲಿ ನಡು ಪಟ್ಟಿಯನ್ನು ಕಟ್ಟಿ ಕೊಂಡಿದ್ದಾನೆ. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.[೬]

ಸಂಖ್ಯೆ : ೦೫

ಶಿಲ್ಪ : ಬಂದೂಕು ವೀರಗಲ್ಲು

ಗ್ರಾಮ : ಕನಕಗಿರಿ

ಸ್ಥಳ : ದೇವಿಯ ಗುಡಿ ಮುಂದೆ.

ವಿಸ್ತೀರ್ಣ : ೩.೨ ಅಡಿ ಉದ್ದ ಮತ್ತು ೨ ಅಡಿ ಅಗಲ

ಕಾಲಮಾನ : ೧೫ನೇ ಶತಮಾನ

ಈ ಸ್ಮಾರಕ ಶಿಲ್ಪವನ್ನು ದೇವಿಯ ಗುಡಿಯ ಮುಂದೆ ನೆಡಲಾಗಿದೆ. ಈ ಇದನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಒಂದೇ ಹಂತದಲ್ಲಿರುವ ಈ ಸ್ಮಾರಕದಲ್ಲಿ ವೀರನು ಸಮಭಂಗಿಯಲ್ಲಿ ನಿಂತಿರುವನು ತಲೆಗೂದಲನ್ನು ಜುಟ್ಟಿನೋಪಾದಿಯಲ್ಲಿ ಕಟ್ಟಿಕೊಂಟು, ಕಿವಿ ಕೊರಳಲ್ಲಿ

ಆಭರಣಗಳನ್ನು, ಕೈಕಾಲುಗಳಲ್ಲಿ ಕಡಗಗಳು ಮತ್ತು ತೋಳಬಂಧಿಯನ್ನು ಧರಿಸಿರುವನು. ವೀರನು ಬಲಗೈಯಲ್ಲಿ ಚಿಕ್ಕ ಚೂರಿಯನ್ನು ಹಿಡಿದುಕೊಂಡು, ಎಡಗೈಯಲ್ಲಿ ಬಂದೂಕು ಹಿಡಿದುಕೊಂಡಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರ ಕಂಡರಿಸಲಾಗಿದೆ.[೪೦]

ಸಂಖ್ಯೆ : ೦೬

ಶಿಲ್ಪ : ಬಂದೂಕು ವೀರಗಲ್ಲು

ಗ್ರಾಮ : ಜಮ್ಮಾಪುರ

ಸ್ಥಳ : ಊರ ಹೊರಗಡೆ

ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೪.೩ ಅಗಲ

ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ಈ ಸ್ಮಾರಕದಲ್ಲಿ ನಾಲ್ಕು ಜನ ವೀರರು ಬಂದೂಕು ಹಿಡಿದುನಿಂತಿರುವಂತೆ ಚಿತ್ರಿಸಲಾಗಿದೆ. ಅವರು ಮುಂದೆ ನಾಯಿಯೊಂದನ್ನು ಚಿತ್ರಿಸಲಾಗಿದೆ. ವೀರರು ಧರಿಸಿಕೊಂಡಿರುವ ಉಡುಪು ಮತ್ತು ಆಭರಣಗಳಿಂದ ಶಿಲ್ಪವನ್ನು ವಿಶೇಷವಾಗಿ ಅಲಂಕರಿಸಲಾಗಿದೆ. ಈ ಸ್ಮಾರಕದಲ್ಲಿ ನಾಯಿ ಇರುವುದರಿಂದ ಪ್ರಾಯಶಃ ನಾಲ್ವರು ವೀರರು ಬೇಟೆಯ ಸಂದರ್ಭದಲ್ಲಿ ಮಡಿದಿರಬಹುದೆಂದು ತೋರುತ್ತದೆ.[೪೧]

ಸಂಖ್ಯೆ : ೦೭

ಶಿಲ್ಪ : ಬಂದೂಕು ವೀರಗಲ್ಲು

ಗ್ರಾಮ : ಕಾರಟಗಿ

ಸ್ಥಳ : ಸಾಲೋಣಿಯವರ ವಠರದಲ್ಲಿ

ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೨.೫ ಅಡಿ ಅಗಲ

ಕಾಲಮಾನ : ಕ್ರಿ.ಶ.ಸು. ೧೪ ಮತ್ತು ೧೫ನೇ ಶತಮಾನ

ಗ್ರಾಮದಲ್ಲಿ ಎರಡು ಬಂದೂಕು ವೀರಗಲ್ಲುಗಳಿವೆ. ಒಂದು ಶಿಲ್ಪದಲ್ಲಿ ವೀರನೊಬ್ಬ ಅಶ್ವರೂಢನಾಗಿ ಒಂದು ಕೈಯಲ್ಲಿ ಖಡ್ಗ, ಮತ್ತು ಎಡಗೈಯಲ್ಲಿ ಗುರಾಣಿ ಹಿಡಿದಿದ್ದಾನೆ, ಗುರಾಣಿಯ ಮೇಲ್ಭಾಗದಲ್ಲಿ ಬಂದೂಕನ್ನು ಹಿಡಿದಿರುವ ಶಿಲ್ಪವನ್ನು ಚಿತ್ರಿಸಿದ್ದಾನೆ.[೪೨]

ಗಂಗಾವತಿ ತಾಲೂಕಿನಲ್ಲಿ ಬಂದೂಕು ವೀರಗಲ್ಲು ಯಥೇಚ್ಛವಾಗಿರುವುದನ್ನು ಗಮನಿಸಿದರೆ ವಿಜಯನಗರ ಕಾಲದಲ್ಲಿ ಬಹುತೇಕ ಯುದ್ಧಗಳು ಜರುಗಿದುದು ಈ ಪರಿಸರದಲ್ಲಿಯೇ ಎಂಬುದು ದೃಢವಾಗುತ್ತದೆ. ಒಟ್ಟಾರೆಯಾಗಿ ಹೇಳಬಹುದಾದರೆ, ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಗಂಗಾವತಿ ತಾಲೂಕು ಪರಿಸರ ಅವರ ಕಾಲದಲ್ಲಿ ಒಂದು ರೀತಿಯಲ್ಲಿ ಯುದ್ಧ

ಭೂಮಿಯಾಗಿತ್ತೆಂಬುದನ್ನು ಇಲ್ಲಿ ಕಂಡುಬರುವ ಬಂದೂಕು ಸ್ಮಾರಕ ಶಿಲ್ಪಗಳಿಂದ ಗೋಚರವಾಗುತ್ತದೆ.[೪೩]

ಮಾಸ್ತಿಗಲ್ಲು

ಪತಿಯು ಕಾರಣಾಂತರಗಳಿಂದ ಮಡಿದಾಗ ಅವನ ಸತಿಯು ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುತ್ತಿದ್ದ ವಿಧಾನವೇ ಸತಿ ಪದ್ಧತಿಯಾಗಿದೆ. ಅದು ಅವಳ ಪತಿಭಕ್ತಿಯನ್ನು ತೋರಿಸುವ ಆಚರಣೆಯಾದರೂ ಇದರ ಹಿಂದೆ ಸಾಮಾಜಿಕ ಕಟ್ಟಳೆಗಳು, ಸಂಪ್ರದಾಯಗಳು, ಶೋಷಣೆಯ ಅಂಶಗಳು ಬಲವಾದ ಪ್ರೇರಣೆಯನ್ನು ನೀಡುತ್ತಿದ್ದವು. ಗಂಡನ ಹಿಂದೆಯೇ ಸತಿ ಹೊಗದವಳಿಗೆ ಸಮಾಜದಲ್ಲಿ ಅಷ್ಟಾಗಿ ಗೌರವ ಇರಲಿಲ್ಲ. ಅಲ್ಲದೇ ಪ್ರಾಚೀನ ಕಾಲದಲ್ಲಿ ಪತಿ ಇಲ್ಲದೇ ಸತಿಗೆ ಬದುಕುವ ಹಾಗೂ ರಕ್ಷಣೆಗೆ ಅನ್ಯ ಮಾರ್ಗವಿಲ್ಲದೇ ಈ ರೀತಿಯ ಆಚರಣೆಯನ್ನು ಅನಿವಾರ್ಯವಾಗಿಯಾದರೂ ಆಚರಿಸಬೇಕಾಗಿತ್ತು. ಮಡಿದ ಗಂಡನೊಂದಿಗೆ ಚಿತೆಯನ್ನು ಪ್ರವೇಶ ಮಾಡುವುದರ ಮೂಲಕ ಸಾಯುವ ವಿಧಿಯನ್ನು 'ಸಹಗಮನ' ಅಥವಾ 'ಸತಿ' ಹೋಗುವುದು ಎಂಬುವುದಾಗಿ ಕರೆಯುತ್ತಾರೆ. ಈ ರೀತಿ ಅಗ್ನಿ ಪ್ರವೇಶವನ್ನು ಮಾಡಿ ಮಡಿದ ಮಹಿಳೆಯರ ಸ್ಮಾರಕಗಳೇ ಮಹಾಸತಿಗಲ್ಲುಗಳು. ಅವುಗಳನ್ನು 'ಮಾಸ್ತಿಗಲ್ಲು' 'ಮಾಸ್ತಮ್ಮ' 'ವ್ಯಾಸನತೋಳು' ಎಂಬುವುದಾಗಿ ಜನ ಹಲವಾರು ಕಡೆ ಇಂದಿಗೂ ಕರೆಯುತ್ತಾರೆ.

ಗಂಡನೊಂದಿಗೆ ಹೀಗೆ ಸಹಗಮನದ ಮಾಡುವ ಸ್ತ್ರೀಯರು ದೈವತ್ವಕ್ಕೇರಿ ಎಲ್ಲರಿಂದಲೂ ಪೂಜಿಸಲ್ಪಡುತ್ತಿದ್ದಳು ಆದ್ದರಿಂದ ಆಕೆ ಸಹಗಮನ ಮಾಡಿದ ಸ್ಥಳದಲ್ಲಿ ಸ್ಮಾರಕಗಳನ್ನು ಸ್ಥಾಪಿಸುತ್ತಿದ್ದರು. ಈ ಸತಿ ಪದ್ದತಿ ಎರಡು ವಿಧಾನದಲ್ಲಿ ನಡೆದುಕೊಂಡು ಬಂದಿದೆ, ಒಂದು ಸಹಗಮನ, ಎರಡನೆಯದು ಅನುಗಮನ ಸಹಗಮನವೆಂದರೆ ಗಂಡನ ಶವದೊಂದಿಗೆ ಸತಿಯಾಗುವವಳು ಚಿತೆಗೆ ಹೋಗುವ ವಿಧಾನವಾಗಿದ್ದರೆ, ಗಂಡನ ಶವವಿಲ್ಲದೆ ಆತನ್ನು ಬಳುಸುತ್ತಿದ್ದ ಯಾವುದಾದರೊಂದು ವಸ್ತುವನ್ನು ಹಿಡಿದು ಅಗ್ನಿ ಪ್ರವೇಶಮಾಡಿ ಸತಿ ಹೋಗುವ ಪದ್ಧತಿಯನ್ನು ಅನುಗಮನ ಎನ್ನಲಾಗುತ್ತದೆ. ಸಹಗಮನ ಶಿಲ್ಪದಲ್ಲಿ ಸತಿ–ಪತಿಗಳಿಬ್ಬರನ್ನು ಚಿತ್ರಿಸಿದ್ದರೆ ಅನುಗಮನ ಸ್ಮಾರಕದಲ್ಲಿ ಕೇವಲ ಸತಿಗೊಂಡವಳನ್ನು ಮಾತ್ರವೇ ಚಿತ್ರಿಸಲಾಗಿರುತ್ತದೆ. ಕರ್ನಾಟಕದಾದ್ಯಂತ ಇಂತಹ ಮಾಸ್ತಿಕಲ್ಲುಗಳು ಹೇರಳವಾಗಿ ದೊರೆಯುತ್ತವೆ.. ಮಾಸ್ತಿಕಲ್ಲುಗಳು ಸಾಧಾರಣವಾಗಿ ಶಾಸನ ರಹಿತವಾದ ಶಿಲ್ಪವು ಹೆಚ್ಚಾಗಿ ಕಂಡುಬರುತ್ತವೆ. ಕೆಲವೊಮ್ಮೆ ಶಿಲ್ಪದ ಜೊತೆಗೆ ಸಹಗಮನ ಮಾಡಿದ ಮಾಸ್ತಿ ಬಗ್ಗೆ, ಆಕೆಯ ಕುಟುಂಬದ ಬಗ್ಗೆ ಹಾಗೂ ಆಕೆಯು ಸಹಗಮನ ಮಾಡಿದ ರೀತಿಯ ಬಗ್ಗೆ ವಿವರವಾದ ವರ್ಣನೆಯು ಶಾಸನರೂಪದಲ್ಲಿ ಇರುವುದನ್ನು ಗಮನಿಸಬಹುದು.೪೩

ಮಹಾಸತಿ ಆಚರಣೆ

ಪ್ರಾಚೀನ ಜನಾಂಗಗಳು ಈ ಲೋಕದಂತಹ ಇನ್ನೊಂದು ಲೋಕವಿದೆಯೆಂದು ನಂಬಿದ್ದರು. ವ್ಯಕ್ತಿ ಮಡಿದಾಗ ಅವನು ಪರಲೋಕಕ್ಕೆ ಹೋಗುವೆನೆಂದು, ಅಲ್ಲಿಯು ಅವನ ಭೋಗಕ್ಕೆ ಇಲ್ಲಿಂದ

ಅವನಿಗಿಷ್ಟವಾದ ವಸ್ತುಗಳನ್ನು ಕಳುಹಿಸಬೇಕೆಂದು ಭಾವಿಸಿದ್ದರು. ಗಂಡನು ಯುದ್ಧದಲ್ಲಿಯೋ, ಆತ್ಮಬಲಿ ಮಾಡಿಕೊಂಡೋ ಅಥವಾ ಸಹಜವಾದ ಮರಣವನ್ನೋ ಪಡೆದಿರಬಹುದು. ಗಂಡನು ಯಾವ ಕಾರಣಕ್ಕಾಗಿ ಸತ್ತಿರಬಹುದು ಎಂಬುದನ್ನು ತಿಳಿಯಲು ಸ್ಮಾರಕ ಶಿಲ್ಪವನ್ನು ನೋಡಿ ನಿರ್ಣಯಿಸುವುದು ಬಹಳ ಕಷ್ಟವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಸ್ಮಾರಕ ಶಿಲೆಗಳ ಪದಾರ್ಥವನ್ನಾಗಲಿ, ಶಿಲ್ಪವನ್ನಾಗಲಿ ಗಮನಿಸಿದಾಗ ಅವುಗಳನ್ನು ವೀರಗಲ್ಲು ಎಂಬುದಾಗಿ ಗುರುತಿಸಬೇಕೇ ಅಥವಾ ಮಹಾಸತಿ ಕಲ್ಲುಗಳೆಂದು ಗುರುತಿಸಬೇಕೆ ಅಥವಾ ವೀರನಿಗೂ, ಮಹಾಸತಿಗೂ ಇಬ್ಬರಿಗೂ ಸ್ಮಾರಕವಾಗಿದೆಯೇ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಾಗದೇ ಹೋಗಬಹುದು. ಆದುದರಿಂದ ಪತಿಯನ್ನು ಹಿಂಬಾಲಿಸಿದ ಮಹಾಸತಿಯರ ಸ್ಮರಣೆಗಾಗಿ ನೆಟ್ಟಂತಹ ಕಲ್ಲುಗಳೇ ಮಹಾಸತಿ ಕಲ್ಲುಗಳೆಂದು ನಿರ್ಧಾರಕ್ಕೆ ಬರಬಹುದು.[೪೪]

ಸತಿ ಅಥವಾ ಸಹಗಮನ ಪದ್ಧತಿ ಸಾರ್ವತ್ರಿಕವಾಗಿರಲಿಲ್ಲ, ಬಲಾತ್ಕಾರವೂ ಅಲ್ಲಿರಲಿಲ್ಲವೆಂಬುದನ್ನು ಗಮನೀಸಬೇಕಾದ ಸಂಗತಿ ಪತಿಯೇ ಪರದೈವವೆಂಬ ಭಾವನೆಯಲ್ಲಿ ಬೆಳೆದ ಹೆಣ್ಣು ಪತಿಯ ಮರಣವನ್ನು ಸಹಿಸಲಾಗದೆ ಏಕೈಕ ನಿಷ್ಠೆಯಿಂದ ಆತನ್ನು ಹಿಂಬಾಲಿಸಿ ಸಂತೋಷದಿಂದ ಅಥವಾ ಸ್ವಇಚ್ಛೆಯಿಂದ ಒಪ್ಪಿ ಸಹಗಮನವನ್ನು ಮಾಡುತ್ತಿದ್ದಳು.[೪೫] ಏಕೆಂದರೆ ಧರ್ಮಶಾಸ್ತ್ರಗಳಲ್ಲಿಯೂ ಬಲಾತ್ಕಾರದ ಸಹಗಮನಕ್ಕೆ ಒಪ್ಪಿಗೆಯನ್ನು ನೀಡಿಲ್ಲ. ಆದರೂ ಕೆಲವು ಕಡೆಗಳಲ್ಲಿ ಅಪರೂಪವಾಗಿ ಹೆಣ್ಣಿಗೆ ಇಷ್ಟವಿಲ್ಲದಿದ್ದರೂ ಆ ವಿಧಿ ನಡೆಯುತ್ತಿದ್ದಂತೆ ತೋರುತ್ತದೆ. ಕೆಲವು ಸಮಯದಲ್ಲಿ ಪತಿಯ ಸಾವನ್ನು ಕೇಳಿ ಸ್ತ್ರೀಯರು ಸಹಗಮನ ಮಾಡಿಕೊಳ್ಳುತ್ತಿದ್ದರು.[೪೬] ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಕತಡಾಳು ಗ್ರಾಮದ ಹಯ್ಯಾಲದೇವಿಯು ಕ್ರಿ.ಶ. ೧೧೭೪ರಲ್ಲಿ ಕೈಗೊಂಡ ಸಮಾದಿ, ಮರಣವು ಪೂರೈಸುತ್ತಿದ್ದ ಕ್ರಮಕ್ಕೊಂದು ಮಾದರಿಯಾಗಬಹುದು. ಹಯ್ಯಾ ದೇವಿಯನ್ನು ಮಹಾಸತಿ ಎಂದು ಕೊಂಡಾಡಲಾಗಿದೆ. ಸಾಮಾನ್ಯವಾಗಿ ಈ ಪದವನ್ನು ಪತಿಯೊಡನೆ ಸಹಗಮನ ಹೋಗುವ ಪತ್ನಿಗೆ ಅನ್ವಯಿಸುವುದು, ಆದರೆ ಸ್ವ-ಇಚ್ಚೆಯಿಂದ ಅಮರಣಾಂತ ಉಪವಾಸದ ದಾರಿ ಹಿಡಿದುದರಿಂದ ಈಕೆಯನ್ನು ಇಲ್ಲಿ ಮಹಾಸತಿ ಎನ್ನಲಾಗಿದೆ.[೪೭]

ಈ ರೀತಿ ಸತಿಹೋದ ಆಕೆಯ ಸಹಗಮನದ ವಿಷಯವೇ ಪ್ರಧಾನವಾಗುತ್ತದೆ. ಆಗ ಸ್ಮಾರಕ ಶಿಲ್ಪವು, ಆಕೆಯ ಸಹಗಮನದ, ಆಕೆಯ ಪಾತಿವ್ರತ್ಯವನ್ನು ಕೀರ್ತಿಸುವ ಸಂಕೇತಗಳನ್ನು ಪಡೆಯುತ್ತದೆ. ವೀರಗಲ್ಲುಗಳಲ್ಲಿ ವೀರನ ಚಿತ್ರಣಕ್ಕೆ ಪ್ರಧಾನ ಪಾತ್ರ ದೊರೆತಿದ್ದು ಸಹಗಮನದ ನಿರೂಪಣೆಗೆ ಎರಡನೇ ಸ್ಥಾನ ದೊರೆಯುವಂತೇ ಮಾಸ್ತಿಗಲ್ಲುಗಳು ಮಹಾಸತಿಯಾದವಳೂ ಪ್ರಧಾನ ಸ್ಥಾನ ಲಭಿಸಿ, ಆಕೆಯ ಗಂಡನಾದವನಿಗೆ ಎರಡನೇ ಸ್ಥಾನ ದೊರೆಯುತ್ತದೆ.[೪೮] ಹೀಗೆ ಪ್ರಾಶಸ್ತ್ಯ ದೊರೆತ ಸ್ಮಾರಕ ಶಿಲ್ಪಗಳೇ ಮಹಾಸತಿಗಲ್ಲುಗಳು. ಈ ಸತಿಪದ್ಧತಿಯ ಉಗಮವನ್ನು ಕುರಿತು ಹಲವು ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ವಿದ್ವಾಂಸರಾದ ಎಂ. ಚಿದಾನಂದಮೂರ್ತಿಯವರು 'ತಾನು ಸತ್ತ ಮೇಲೆ ತನ್ನ ಹೆಂಡತಿಯು ಇನ್ನೊಬ್ಬನ

ವಶವಾಗುವ ಸಾಧ್ಯತೆಯನ್ನು ಕಲ್ಪಿಸಿಕೊಂಡ ಪುರುಷನ ಅಸೂಯೆಯೇ ಕಾರಣವಿರಬಹುದು'[೪೯]. ಎಂದಿದ್ದಾರೆ. ಹೆಚ್. ತಿಪ್ಪೇರುದ್ರಸ್ವಾಮಿ ಅವರು ಅಭಿಪ್ರಾಯದಂತೆ 'ಪತಿಯೇ ಪರದೈವವೆಂಬ ಭಾವನೆಯಲ್ಲಿ ಬೆಳೆದ ಹೆಣ್ಣು ಪತಿಯ ಮರಣವನ್ನು ಸಹಿಸಲಾಗದೇ ಏಕೈಕ ನಿಷ್ಠೆಯಿಂದ ಆತನನ್ನು ಹಿಂಬಾಲಿಸಿ ಸಂತೋಷದ ಸ್ವ ನಿರ್ಧಾರವೇ ಮಹಾಸತಿಯಾಗಲು ಕಾರಣವಾಗಿರಬಹುದು'[೫೦] ಎಂ. ಎಂ. ಕಲಬುರ್ಗಿ ಅವರ ಪ್ರಕಾರ 'ಸತ್ತ ವ್ಯಕ್ತಿಯೊಂದಿಗೆ ಅವನ ಪ್ರಿಯವಸ್ತುಗಳನ್ನು ಹೂಳಬೇಕೆಂಬ ಇಲ್ಲವೇ ಸುಡಬೇಕೆಂಬ ಭಾವನೆ ಈ ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟಿರಬಹುದು'[೫೧] ಎಂದಿದ್ದಾರೆ. ಈ ಅಂಶಗಳನ್ನು ಗಮನಿಸಿದಾಗ ಧರ್ಮ, ನೀತಿ ಮತ್ತು ಮಾನವನಿಗಿರುವ ಸಂಬಂಧ, ಸಾಮಾಜಿಕ, ಆರ್ಥಿಕ ಸಮಸ್ಯೆಗಳು, ಭಯದ ವಾತಾವರಣ ಹೀಗೆ ಹಲವಾರು ಮಜಲುಗಳಲ್ಲಿ ಇವುಗಳನ್ನು ಗುರುತಿಸಬಹುವುದು. ಪತಿಯ ಮೇಲಿನ ಉತ್ಕಟ ಪ್ರೀತಿ, ಪಾತಿವ್ರತ್ಯದ ವೈಭವೀಕರಣ, ವೈಯಕ್ತಿಕ ಪ್ರತಿಷ್ಠೆ, ಮಾನರಕ್ಷಣೆಯ ವ್ಯವಸ್ಥೆ, ವಿಧವೆಯ ನಿಕೃಷ್ಟ ಜೀವನ ಈ ಮಹಾಸತಿ ಪದ್ಧತಿಗೆ ವೈಯಕ್ತಿಕ ಕಾರಣಗಳಾಗಿರಬಹುದು. ಪತ್ನಿ ಇನ್ನೊಬ್ಬರ ವಶವಾಗಬಹುದೆಂಬ ಪುರುಷನ ಇಚ್ಛೆ, ಸಂಪತ್ತು ಪಡೆಯುವ ಸಂಚು, ಮನೆತನದ ಹಾಗೂ ಸಮಾಜ ಪ್ರತಿಷ್ಠೆ, ಅಲೌಕಿಕ ಕಾರಣಗಳಾದ ಪರಲೋಕದ ಕಲ್ಪನೆ, ಸತ್ತವನೊಂದಿಗೆ ಪ್ರಿಯ ವಸ್ತುಗಳನ್ನು ಕಳಿಸುವ ನಂಬಿಕೆ, ಸತಿ ಪತಿಗಳಿಬ್ಬರೂ ಸ್ವರ್ಗ ಪಡೆಯುವ ನಂಬಿಕೆ, ಪುನರ್‌ಜನ್ಮದ ನಂಬಿಕೆ, ಇಂತಹ ಸಾಮಾಜಿಕ ಕಾರಣಗಳು, ಸತಿಯಾಗಲು ಪ್ರೇರಕವಾಗಿದ್ದಿರಬಹುದು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕಂಡುಬಂದಿರುವ ಸತಿಗಲ್ಲುಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಸಂಖ್ಯೆ : ೦೧
ಶಿಲ್ಪ : ವೀರಮಾಸ್ತಿಗಲ್ಲು
ಗ್ರಾಮ : ಆನೆಗೊಂದಿ
ಸ್ಥಳ : ಚಿಂತಾಮಣಿ ಮಠದಲ್ಲಿ
ವಿಸ್ತೀರ್ಣ : ೪ ಅಡಿ ಅಗಲ ಮತ್ತು ೫ ಅಡಿ ಉದ್ದ
ಕಾಲಮಾನ : ಕ್ರಿ.ಶ.ಸು. ೧೫ನೇ ಶತಮಾನ

ತಾಲೂಕಿನ ಆನೆಗೊಂದಿ ಗ್ರಾಮದ ಚಿಂತಾಮಣಿ ಮಠದ ಆವರಣದಲ್ಲಿ ಸ್ಮಾರಕ ಶಿಲ್ಪವಿದೆ. ಶಿಲ್ಪದ ಬಲಭಾಗದಲ್ಲಿ ವೀರ ಎಡ ಭಾಗದಲ್ಲಿ ಸತಿ ಇಬ್ಬರನ್ನು ನಿಂತ ಭಂಗಿಯಲ್ಲಿ ಚಿತ್ರಿಸಲಾಗಿದೆ. ಸತಿಯು ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿದ್ದಾಳೆ, ಮತ್ತು ಎಡಗೈಯಲ್ಲಿ ನಿಂಬೆ ಹಣ್ಣು ಹಿಡಿದಿದ್ದಾಳೆ. ಕೊರಳಲ್ಲಿ ಕಂಠಿ ಹಾರ, ಕೈಕಾಲುಗಳಲ್ಲಿ, ಕಡಗಗಳನ್ನು ಧರಿಸಿರುವಳು. ತಲೆಯಲ್ಲಿ ತುರುಬು ಕಟ್ಟಿ, ಸತಿಯು ಸೀರೆಯನ್ನು ಧರಿಸಿದ್ದಾಳೆ. ಆಕೆಯ ಪಕ್ಕದಲ್ಲಿ ವೀರನು ಕೈಮುಗಿದು

ನಿಂತುಕೊಂಡಿದ್ದಾನೆ. ಅವನು ತೋಳ್ಬಂದಿ ಮುಂಗೈಕಡಗ, ಕಾಲಗಡಗ ಕಿವಿಯೋಲೆ ಮುಂತಾದ ಆಭರಣಗಳನ್ನು ಧರಿಸಿದ್ದಾನೆ. ಕೇಶದಿಂದ ಬಲಗಡೆ ತುರುಬು ಕಟ್ಟಿರುವನು ಈ ಶಿಲ್ಪದ ಶಾಸನದಲ್ಲಿ ಭಯರಿಸೆಟ್ಟಿಯ ಮಗ ನಾಗಿಸೆಟ್ಟಿಯ ಹೆಂಡತಿ ತಿಮ್ಮಾಯಿ ತನ್ನ ಗಂಡ ಸತ್ತಾಗ ಕಿಚ್ಚು ಹಾಯ್ದು ಸತ್ತಂತೆ ತಿಳಿಸುತ್ತದೆ.

ಸಂಖ್ಯೆ : ೦೨

ಶಿಲ್ಪ : ವೀರಮಾಸ್ತಿಗಲ್ಲು

ಗ್ರಾಮ : ಆನೆಗೊಂದಿ

ಸ್ಥಳ : ನವಬೃಂದಾವನಕ್ಕೆ ಹೋಗುವ ನದಿಯ ಪಕ್ಕದಲ್ಲಿ

ವಿಸ್ತೀರ್ಣ : ೨ ಅಡಿ ಅಗಲ ಮತ್ತು ೩ ಅಡಿ ಉದ್ದ

ಕಾಲಮಾನ : ಕ್ರಿ. ಶ. ಸು. ೧೬ನೇ ಶತಮಾನ

ಆನೆಗೊಂದಿಯ ನವಬೃಂದಾವನಕ್ಕೆ ಹೋಗುವ ದಾರಿ ನದಿಯ ಬಳಿಯಲ್ಲಿ ಕಟ್ಟೆಯ ಮೇಲೆ ವೀರಮಾಸ್ತಿಗಲ್ಲು ಕಂಡುಬರುವುದು, ಶಿಲ್ಪದಲ್ಲಿ ವೀರನು ಬಲಗೈಯಲ್ಲಿ ಚೂರಿಯನ್ನು ಹಿಡಿದುಕೊಂಡು ಎಡಗೈ ಇಳಿಬಿಟ್ಟಿದ್ದಾನೆ, ಮಲ್ಲಗಚ್ಚೆ ಉಡುಪು ಧರಿಸಿರುವ ವೀರನು, ಕೈ ಕಾಲುಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಮಲ್ಲಗಚ್ಚೆಯ ಕುಚ್ಚುಗಳು ಸುತ್ತಲೂ ಇಳಿಬಿಟ್ಟಿದ್ದಾವೆ, ವೀರನ ಪಕ್ಕದಲ್ಲಿ ಸತಿಯು ಬಲಗೈಯನ್ನು ಎತ್ತಿದ್ದಾಳೆ, ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಸತಿಯು ಎಡಕ್ಕೆ ತುರುಬು ಕಟ್ಟಿ, ನೆರಿಗೆವುಳ್ಳ ಸೀರೆಯನ್ನು ಧರಿಸಿದ್ದಾಳೆ.

ಇದೇ ಗ್ರಾಮದ ನವಬೃಂದಾವನಕ್ಕೆ ಹೋಗುವಲ್ಲಿ ದಾರಿಯ ಬಳಿ ಕೋಟೆ ಹತ್ತಿರ ಮತ್ತೊಂದು ವೀರಮಾಸ್ತಿಗಲ್ಲು ಇದೆ. ಈ ಶಿಲ್ಪವನ್ನು ಬಿಳಿಕಣಶಿಲೆಯಲ್ಲಿ ಕಂಡರಿಸಲಾಗಿದೆ. ವೀರನು ಬಲಗೈಯಲ್ಲಿ ಖಡ್ಗವನ್ನು, ಹಿಡಿದು ಮೇಲೆ ಎತ್ತಿದ್ದು ಎಡಗೈಯನ್ನು ಇಳಿಬಿಟ್ಟಿದ್ದಾನೆ. ಸತಿಯು ಬಲಗೈಯನ್ನು ಮೇಲೆತ್ತಿ ಸತಿಯು ನೆರೆಗೆಯ ಸೀರೆಯನ್ನು ಉಟ್ಟಿದ್ದಾಳೆ. ಇದೇ ಗ್ರಾಮದ ರಂಗನಾಥ ದೇವಾಲಯ ಪ್ರಾಕಾರಗೋಡೆಯಲ್ಲಿ ಒಂದು ಶಿಲ್ಪವನ್ನು ನಿಲ್ಲಿಸಿದ್ದಾರೆ. ಈ ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ಕಂಡರಿಸಲಾಗಿದೆ. ಒಬ್ಬ ವೀರ ಮತ್ತು ಮೂರು ಜನ ಸತಿಯರ ಶಿಲ್ಪವಿದ್ದು, ಮೊದಲನೆಯ ಸತಿಯು ತನ್ನ ಎರಡು ಕೈಗಳನ್ನು ಮೇಲೆ ಎತ್ತಿದ್ದಾಳೆ. ತುರುಬನ್ನು ಬಲಕ್ಕೆ ಕಟ್ಟಿದ್ದಾಳೆ. ಸತಿಯು ನೆರಿಗೆವುಳ್ಳ ಸೀರೆಯನ್ನು ಧರಿಸಿದ್ದಾಳೆ. ಸತಿಯ ಪಕ್ಕದಲ್ಲಿ ವೀರನು ಬಲಗೈಯಲ್ಲಿ ಚೂರಿಯನ್ನು ಹಿಡಿದು ನಿಂತಿದ್ದಾನೆ. ತಲೆಗೆ ರುಮಾಲು ಸುತ್ತಿದ್ದು, ಕೈ ಮತ್ತು ಕಾಲುಗಳಲ್ಲಿ ಕಡಗವನ್ನು ಧರಿಸಿದ್ದಾನೆ. ಉಳಿದ ವೀರನ ಪಕ್ಕದಲ್ಲಿ ಇಬ್ಬರು ಸತಿಯರು ಕೈಯನ್ನು ಇಳಿಬಿಟ್ಟು ಸಮಭಂಗಿಯಲ್ಲಿ ನಿಂತಿದ್ದಾರೆ. ಅವರು ತಲೆಯಲ್ಲಿ ತುರುಬುನ್ನು ಎಡಕ್ಕೆ ಕಟ್ಟಿದ್ದು, ಕೈ ಮತ್ತು ಕಾಲುಗಳಲ್ಲಿ ಕಡಗವನ್ನು ಧರಿಸಿದ್ದಾರೆ. ನೆರಿಗೆವುಳ್ಳ ಸೀರೆಯನ್ನು ಧರಿಸಿದ್ದಾರೆ. ಈ ಶಿಲ್ಪದ

ವಿಶೇಷವೆಂದರೆ ವೀರನೊಬ್ಬನ್ನು ಮೂವರು ಸತ್ತಿಯರು ಸಹಗಮನ ಗೊಂಡಿರುವುದನ್ನು, ಚಿತ್ರಿಸಿದ್ದಾರೆ.[೫೨]

ಸಂಖ್ಯೆ : ೦೩

ಶಿಲ್ಪ : ಮಾಸ್ತಿಗಲ್ಲು

ಗ್ರಾಮ : ಹೇರೂರು

ಸ್ಥಳ : ಸುಂಕಲಮ್ಮ ದೇವಿ ಗುಡಿಮುಂದೆ

ವಿಸ್ತೀರ್ಣ : ೩ ಅಡಿ ಉದ್ದ ಮತ್ತು ೨ ಅಡಿ ಅಗಲ

ಕಾಲಮಾನ : ಕ್ರಿ ಶ. ಸು. ೧೪ನೇ ಶತಮಾನ

ಈ ಮಾಸ್ತಿಗಲ್ಲನ್ನು ಕಪ್ಪು ಬಿಳಿ ಮಿಶ್ರಿತ ಕಲ್ಲಿನಲ್ಲಿ ಕೆತ್ತಲಾಗಿದೆ, ಸ್ಥಳೀಯವಾಗಿ ಸುಂಕಲಮ್ಮ ದೇವಿಕಲ್ಲು ಎಂದು ಕರೆಯುತ್ತಾರೆ. ಈ ಸ್ಮಾರಕ ಎರಡು ಹಂತದಲ್ಲಿದೆ. ಮೊದಲನೆ ಹಂತದಲ್ಲಿ ಸ್ತ್ರೀಯರು ಕೈ ಕೈ ಹಿಡಿದುಕೊಂಡು ಸ್ವರ್ಗಕ್ಕೆ ಹೋಗುತ್ತಿರುವ ಚಿತ್ರವಿದೆ. ಇದನ್ನು ಗಮನಿಸಿದರೆ, ಸ್ತ್ರೀಯರು ಸತಿ ಸಹಗಮನ ಅನುಸರಿಸುವ ಚಿತ್ರಣಕಂಡು ಬರುತ್ತದೆ. ಮೇಲಿನ ಭಾಗದಲ್ಲಿ ಒಬ್ಬ ವ್ಯಕ್ತಿ ಪದ್ಮಾಸನ ಹಾಕಿಕೊಂಡು ಚಿತ್ರವಿದೆ. ಮೇಲ್ಭಾಗದಲ್ಲಿ ಸೂರ್ಯ– ಚಂದ್ರ ಹಾಗೂ ಶಿವಲಿಂಗವನ್ನು ಕಂಡರಿಸಲಾಗಿದೆ.[೫೩]

ಸಂಖ್ಯೆ : ೦೪

ಶಿಲ್ಪ : ಮಾಸ್ತಿಗಲ್ಲು

ಗ್ರಾಮ : ಹಿರೇ ಜಂತಗಲ್ಲು

ಸ್ಥಳ : ಕನ್ನಿಕಾ ಪರಮೇಶ್ವರಿ ದೇವಾಲಯದ ಮುಂದೆ

ವಿಸ್ತೀರ್ಣ : ೩.೫ ಅಡಿ ಉದ್ದ, ೨ ಅಡಿ ಅಗಲ

ಕಾಲಮಾನ : ಕ್ರಿ ಶ. ಸು. ೧೫ನೇ ಶತಮಾನ

ಈ ಸ್ಮಾರಕದಲ್ಲಿ ಸತಿಪತಿಗಳಿಬ್ಬರನ್ನು ಸಮಭಂಗಿಯಲ್ಲಿ ಕಂಡರಿಸಲಾಗಿದೆ. ವೀರನು ಸ್ಥಾನಕ ಭಂಗಿಯಲ್ಲಿದ್ದು, ಕೈಗಳು ಅಂಜಲಿ ಮುದ್ರೆಯಲ್ಲಿವೆ. ತಲೆಗೂದಲನ್ನು ತುರುಬು ಕಟ್ಟಿದ್ದಾನೆ. ದೋತಿಯನ್ನು ಧರಿಸಿದ್ದು ಕಿವಿಯಲ್ಲಿ ಓಲೆ, ಕೈ ಮತ್ತು ಕಾಲುಗಳಲ್ಲಿ ಕಡಗಗಳು, ಮತ್ತು ತೋಳಭಂದಿಗಳಿವೆ. ವೀರನ ಎಡಭಾಗದಲ್ಲಿ ಚಿತ್ರಿಸಿರುವ ಸತಿಯ ಶಿಲ್ಪವಿದೆ, ಸತಿಯು ಬಲಗೈಯನ್ನು ಮೇಲೆ ಎತ್ತಿದ್ದಾಳೆ, ಸೀರೆಯನ್ನು ಧರಿಸಿದ್ದಾಳೆ, ತಲೆಗೂದಲನ್ನು ತುರುಬು ಕಟ್ಟಿ, ತಾಳಿ, ಮುತ್ತಿನ ಸರ, ಕಂಠಿಹಾರ ಮುಂತಾದ ಆಭರಣಗಳನ್ನು ಧರಿಸಿರುವಳು, ಕೈತುಂಬ ಬಳೆ ಹಾಗೂ ತೋಳಬಂಧಿಗಳನ್ನು ಧರಿಸಿರುವುದನ್ನು ಕಂಡರಿಸಲಾಗಿದೆ.೪೩

ಸಂಖ್ಯೆ : ೦೫

ಶಿಲ್ಪ : ವೀರಮಾಸ್ತಿಗಲ್ಲು

ಗ್ರಾಮ : ಹಿರೇಬೆಣಕಲ್

ಸ್ಥಳ : ಚಿಕ್ಕ ಬೆಣಕಲ್‌ಗೆ ಹೋಗುವ ರಸ್ತೆ.

ವಿಸ್ತೀರ್ಣ : ೨.೫ ಅಡಿ ಮತ್ತು ಉದ್ದ, ೩.೫ ಅಡಿ ಅಗಲ.

ಕಾಲಮಾನ : ಕ್ರಿ. ಶ. ಸು. ೧೫ನೇ ಶತಮಾನ

ಗ್ರಾಮದ ಕಟ್ಟೆಯ ಮೇಲೆ ಪೂರ್ವಾಭಿಮುಖವಾಗಿ ಇಟ್ಟಿದ್ದಾರೆ. ಈ ಶಿಲ್ಪದಲ್ಲಿ ವೀರನು ಬಲಗೈಯಲ್ಲಿ ಖಡ್ಗ ಮತ್ತು ಎಡಗೈಯಲ್ಲಿ ಚಾಕುವನ್ನು ಹಿಡಿದಿದ್ದಾನೆ. ತಲೆಗೂದಲುಗಳನ್ನು ತಿರುವಿ ಬಲಕ್ಕೆ ತುರುಬು ಕಟ್ಟಲಾಗಿದೆ. ಕಿವಿಯೋಲೆಗಳಿವೆ, ಕಾಲು ಮತ್ತು ಕೈಗಳಲ್ಲಿ ಕಡಗಗಳನ್ನು ಧರಿಸಿದ್ದಾನೆ. ಸೈನಿಕ ಮಾದರಿಯ ಉಡುಪು ಧರಿಸಿರುವುದು ಕಂಡುಬರುತ್ತದೆ. ಈ ಮಾಸ್ತಿಯು ಬಲಗೈಯಲ್ಲಿ ಕಿರುಗತ್ತಿ ಮತ್ತು ಎಡಗೈಯಲ್ಲಿ ನಿಂಬೆ ಹಣ್ಣು ಇಟ್ಟುಕೊಂಡಿದ್ದಾಳೆ. ಕಿವಿಗಳಲ್ಲಿ ಕಿವಿಯೋಲೆ. ತೋಳುಗಲ್ಲಿ ತೋಳುಬಂಧಿ. ಕಾಲು ಮತ್ತು ಕೈಗಳಲ್ಲಿ ಕಡಗಗಳಿದ್ದು. ಕೊರಳಲ್ಲಿ ಪದಕವಿರುವ ಸರವಿದೆ. ಶಿಲ್ಪದ ಮೇಲೆ ಸೂರ್ಯ ಚಂದ್ರರನ್ನು ಕಂಡರಿಸಲಾಗಿದೆ.[೫೫]

ಸಂಖ್ಯೆ : ೦೬

ಶಿಲ್ಪ : ಮಾಸ್ತಿಗಲ್ಲು

ಗ್ರಾಮ : ಕಡೇಬಾಗಿಲು

ಸ್ಥಳ : ಹನುಮಂತ ದೇವಾಲಯದ ಎದುರಿನ ಬೆಟ್ಟದ ಮೇಲೆ

ವಿಸ್ತೀರ್ಣ : ೫ ಅಡಿ ಉದ್ದ, ಮತ್ತು ೨ ಅಡಿ ಅಗಲ.

ಕಾಲಮಾನ : ಕ್ರಿ. ಶ. ಸು. ೧೪ನೇ ಶತಮಾನ.

ಈ ಸ್ಮಾರಕ ಶಿಲ್ಪವನ್ನು ಒರಟಾದ ಬಿಳಿಯ ಕಣಶಿಲೆಯಲ್ಲಿ ಕಂಡಿರಿಸಲಾಗಿದೆ. ಇದೊಂದು ಒಕ್ಕೈ ಮಾಸ್ತಿಗಲ್ಲು. ಇಲ್ಲಿ ಮಾಸ್ತಿಯು ನಿಂತಭಂಗಿಯಲ್ಲಿದ್ದಾಳೆ. ಕಿವಿ ಮತ್ತು ಕೊರಳಲ್ಲಿ ಆಭರಣವಿದೆ. ಕೊರಳಲ್ಲಿ ಕಂಠಿಹಾರವಿದ್ದು, ಈ ಸ್ಮಾರಕ ಸವೆದು ಹೋದ ಸ್ಥಿತಿಯಲ್ಲಿದೆ.[೫೬]

ಸಂಖ್ಯೆ : ೦೭

ಗ್ರಾಮ : ಆನೆಗೊಂದಿ

ಸ್ಥಳ : ಆನೆಗೊಂದಿ ಚಿಂತಮಣಿ ಮಠದ ಗವಿಯ ಹತ್ತಿರ

ಶಿಲ್ಪ : ಮಾಸ್ತಿಗಲ್ಲು

ವಿಸ್ತೀರ್ಣ : ೨ ಅಡಿ ಎತ್ತರ ೧.೫ ಅಡಿ ಅಗಲ

ಕಾಲಮಾನ : ಕ್ರಿ ಶ. ಸು. ೧೫ನೇ ಶತಮಾನ

ಈ ಸ್ಮಾರಕವನ್ನು ಕಣಶಿಲೆಯಲ್ಲಿ ಒಂದು ಹಂತದಲ್ಲಿ ಕಂಡರಿಸಿದ್ದು. ಸತಿ ತನ್ನ ಬಲಗೈಯನ್ನು ಎತ್ತಿದ್ದು, ಎಡಗೈಯನ್ನು ಇಳಿಬಿಟ್ಟಿದ್ದಾಳೆ. ತಲೆಯಲ್ಲಿನ ಮುಡಿಯನ್ನು ಎಡಕ್ಕೆ ತುರುಬಿನ ರೀತಿಯಲ್ಲಿ ಕಟ್ಟಿದ್ದಾಳೆ, ಕಿವಿಯಲ್ಲಿ ಓಲೆ, ಕೊರಳಲ್ಲಿ ಕಂಠಿಹಾರ, ಕೈ–ಕಾಲುಗಳಲ್ಲಿ ಕಡಗಗಳನ್ನು ಧರಿಸಿಕೊಂಡಿರುವಂತೆ ಚಿತ್ರಿಸಲಾಗಿದೆ. ಎದೆಭಾಗವನ್ನು ದೊಡ್ಡದಾಗಿ ತೋರಿಸಿ, ಸೊಂಟವನ್ನು ಅತಿ ಸಣ್ಣದಾಗಿ ಕಂಡರಿಸಲಾಗಿದೆ. ಈ ಶಿಲ್ಪದ ಕೆಳಭಾಗವು ಮಣ್ಣಿನಲ್ಲಿ ಉದುಗಿದೆ.[೫೭]

ಸಂಖ್ಯೆ : ೦೮

ಶಿಲ್ಪ : ವೀರ ಮಾಸ್ತಿಗಲ್ಲು

ಗ್ರಾಮ : ತೊಂಡಿಹಾಳ

ಸ್ಥಳ : ದ್ಯಾವಮ್ಮ ಕಲ್ಗುಡಿ ಅವರ ಮನೆಮುಂದೆ.

ವಿಸ್ತೀರ್ಣ : ೩ಅಡಿ ಉದ್ದ ಮತ್ತು ೨.೫ ಅಡಿ ಅಗಲ

ಕಾಲಮಾನ : ಕ್ರಿ ಶ. ಸು. ೧೫ನೇ ಶತಮಾನ

ಗ್ರಾಮದ ಕಲ್ಗುಡಿ ದ್ಯಾವಮ್ಮ ಅವರ ಮನೆಯ ಮುಂದೆ ಈ ಸ್ಮಾರಕವನ್ನು ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿದೆ. ಇದನ್ನು ಬಿಳಿ ಕಣಶಿಲೆಯಲ್ಲಿ ಚಿತ್ರಿಸಲಾಗಿದೆ. ಶಿಲ್ಪದಲ್ಲಿ ವೀರ ಮತ್ತು ಮಾಸ್ತಿಯನ್ನು ಚಿತ್ರಿಸಿದ್ದು ಬಲಭಾಗದಲ್ಲಿರುವ ವೀರನು ತಲೆಗೂದಲನ್ನು ತುರುಬಿನಾಕಾರದಲ್ಲಿ ಕಟ್ಟಿಕೊಂಡಿದ್ದಾನೆ. ಕೈ ಕಾಲುಗಳಲ್ಲಿ ಕಡಗಗಳನ್ನೂ ಹಾಗೂ ತೋಳಲ್ಲಿ ತೋಳಬಂಧಿಯನ್ನು ಧರಿಸಿರುವನು. ಮತ್ತು ಸೊಂಟದ ನಡು ಪಟ್ಟಿಯಲ್ಲಿ ಚೂರಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಬಲಗೈಯಲ್ಲಿ ಬಿಲ್ಲು ಆಯಧವನ್ನು ಹಿಡಿದಿರುವನು. ಎಡಭಾಗದಲ್ಲಿರುವ ಮಾಸ್ತಿಯು ತಲೆಕೂದಲನ್ನು ತುರುಬಿನಾಕಾರದಲ್ಲಿ ಎಡಕ್ಕೆ ಇರುವಂತೆ ಕಟ್ಟಿರುವಳು. ಕಿವಿಯ ಕೊರಳಲ್ಲಿ ಆಭರಣಗಳನ್ನೂ, ಕೈ ಕಾಲುಗಳಲ್ಲಿ ಕಡಗಗಳನ್ನು ಧರಿಸಿಕೊಂಡಿದ್ದಾಳೆ. ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿ, ಬಲಗೈಯನ್ನು ಹಸ್ತದಂತೆ ತೋರಿಸಿರುವುದ ವಿಶೇಷವಾಗಿದೆ. ಎಡಗೈಯಲ್ಲಿ ನಿಂಬೆಯ ಹಣ್ಣನ್ನು ಹಿಡಿದಿರುವಳು. ಆಭರಣಗಳನ್ನು ತೊಟ್ಟು ಕೊಂಡಿರುವ ಇವರು ಸಾಮ್ಯವರ್ಗದವರು ಎಂಬುದನ್ನು ಹೇಳುವಂತಿದೆ.

ಶಾಸನೋಕ್ತ ವೀರಗಲ್ಲುಗಳು

ಶಾಸನೋಕ್ತ ಸ್ಮಾರಕಗಳಾಗಿದ್ದರು ಇವು ಕೆಲವೇ ಸಂಕ್ಷಿಪ್ತ ವಿವರಗಳನ್ನು ನೀಡುತ್ತವೆ. ಅಧ್ಯಯನ ಪ್ರದೇಶದಲ್ಲಿ ಕಂಡುಬಂದ ಆ ಸ್ಮಾರಕ ಶಿಲ್ಪಗಳ ವಿವರಗಳನ್ನು ಮುಂದಿನಂತೆ ವಿಶ್ಲೇಷಿಸಲಾಗಿದೆ. ಆನೆಗೊಂದಿಯ ಚಿಂತಮಣಿ ಮಠದ ಬಳಿ ಇರುವ ದೊಡ್ಡ ಗುಹೆಯ

ಮುಂಭಾಗದ ಕ್ರಿ.ಶ. ೧೬ನೇ ಶತಮಾನದ ದಚಯಹೆರಾಯನ ಮಗ ಹಂಪಂಣನನ್ನು ಹೆಸರಿಸುತ್ತದೆ. ಅಲ್ಲೇ ಗರಡು ಗಂಭದ ಬಳಿಯಿರುವ ಮತ್ತೊಂದು ವೀರಗಲ್ಲು ಕ್ರಿ. ಶ. ಸು. ೧೬ನೇ ಶತಮಾನದ ಭುರುವದೇವನ ಮಗ ಗಂಗಣ್ಣನನ್ನು ಹೆಸರಿಸುತ್ತದೆ.[೫೯] ಕನ್ನೇರುಮಡು ಗ್ರಾಮದ ಪಶ್ಚಿಮಕ್ಕೆ ವೀರನ ಬಂಡೆಯ ಮೇಲಿರುವ ಕ್ರಿ. ಶ. ಸು. ೧೫ನೆಯ ಶತಮಾನದ ಖರೆಕುಲದ ಸಂಬಣ್ಣನ ಮಗ ಭರಮಣ್ಣ ಕುದುರೆ ದಳದೊಡನೆ ಹೋರಾಡಿ ಮಡಿದನೆಂದು ತಿಳಿಸುತ್ತದೆ.[೬೦]

ಕಲ್ಕೇರಿ ಗ್ರಾಮದ ಆಂಜನೇಯ ದೇವಾಲಯದ ಎದುರು ಇರುವ ವೀರಗಲ್ಲೊಂದು ಕ್ರಿ. ಶ. ಸು. ೧೦–೧೧ನೆಯ ಶತಮಾನದ್ದಾಗಿದ್ದು. ಇದರಲ್ಲಿ ಹೋರಾಡಿ ಮಡಿದನು ವೀರನ ಹೆಸರು ಉಲ್ಲೇಖವಿಲ್ಲ, ಆದರೆ ವೀರನಿಗೆ ನೀಡಿದ ದಾನವನ್ನು ನಾಶಪಡಿಸಿದವನಿಗೆ ೧೮ ಪಟ್ಟಣಗಳನ್ನು, ವಾರಣಾಸಿಯನ್ನು ನಾಶ ಮಾಡಿದ ಪಾಪಬರಲಿದೆ ಎಂಬ ಶಾಪಾಶಯವಿದೆ.[೬೧] ಹೇರೂರಿನ ಕಲ್ಲೇಶ್ವರ ದೇವಾಲಯದ ಮುಂದೆ ಕ್ರಿ. ಶ. ಸು. ೧೨ನೆಯ ಶತಮಾನದ ಎರಡು ವೀರಗಲ್ಲುಗಳಿವೆ. ಒಂದು ವೀರಗಲ್ಲು ಶಾಸನವು ದುಷ್ಟರು ಗೋವುಗಳನ್ನು ಅಪಹರಿಸುವಾಗ ಮಾದಿಗಾಮುಂಡನು ಅವುಗಳನ್ನು ರಕ್ಷಣೆಗಾಗಿ ಹೋರಾಡಿ ಮಡಿದನ್ನು. ಇದೇ ಶಾಸನದಲ್ಲಿ ಇಲ್ಲಿನ ಕರ್ತ್ತಮೇಶ್ವರ ದೇವರ ಆಚಾರ್ಯ ಅಮಿತರಾಶಿಯ ಹೆಸರನ್ನು ಉಲ್ಲೇಖಿಸಲಾಗಿದೆ. ಮತ್ತೊಂದರ ಮೇಲಿನ ಶಾಸನದಿಂದ ಪೆರ್ಗ್ಗಡೆ ಜೆನೆಯ್ಯ ಎಂಬುವನು ಯುದ್ದದಲ್ಲಿ ವೀರ ಮರಣ ಹೊಂದಿದಾಗ ಅನುಸರಿಸಿ ಆತನ ಮಡದಿ ಕಾವಬ್ಬೆ ಮಡಿದ ವಿಷಯವು ತಿಳಿಯುತ್ತದೆ.[೬೨]

ನಿಸಿದಿ ಶಾಸನಗಳು ಮತ್ತು ನಿಸಿದಿ ಗಲ್ಲುಗಳು

ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ಕಂಡುಬಂದಿರುವ ಕೆಲವು ವೀರಗಲ್ಲುಗಳಲ್ಲಿ ಹೋರಾಟದಲ್ಲಿ ಮಡಿದ ವೀರರ ಬಗ್ಗೆ ವಿವರಗಳನ್ನು ನೀಡುತ್ತವೆ. ಈ ಸ್ಮಾರಕಗಳು ಯುದ್ಧದ ಸಂಪೂರ್ಣ ಚಿತ್ರಣವನ್ನು ಲಿಪಿಯ ಮೂಲಕ ಉಲ್ಲೇಖಿಸದಿದ್ದರೂ, ಶಿಲ್ಪದ ಮೂಲಕ ಆ ವಿವರಗಳು ಧ್ವನಿಯಾಗುತ್ತವೆ. ಮತಾಚರಣೆಯಂತೆ ಆಹಾರವನ್ನು ಸೇವಿಸದೆ ದೇಹ ತ್ಯಾಗ ಮಾಡುವ ಪದ್ದತಿ ಜೈನರಲ್ಲಿ ವಿಶೇಷವಾಗಿದ್ದಿತ್ತು. ಈ ರೀತಿ ವ್ರತದಿಂದ ಮರಣ ಹೊಂದಿರುವವರ ಜ್ಞಾಪಕಾರ್ಥವಾಗಿ ನಿಲ್ಲಿಸುತ್ತಿದ್ದ ಕಲ್ಲುಗಳಿಗೆ ನಿಸಿದಿ ಕಲ್ಲುಗಳೆಂದು ಹೆಸರು. ಸಾಮಾನ್ಯವಾಗಿ ನಿಸಿದಿ ಕಲ್ಲುಗಳು ಜೈನ ಬಸದಿಗಳ ಮುಂದೆ ಕಂಡುಬರುತ್ತವೆ. ಶ್ರವಣಬೆಳಗೊಳದಲ್ಲಿ ಈ ರೀತಿಯ ಸ್ಮಾರಕಗಳು ಇವೆ. ಇವುಗಳಲ್ಲಿ ಎರಡು ಹಂತ ಇಲ್ಲವೇ ಮೂರು ಹಂತದಲ್ಲಿ ಚಿತ್ರಗಳು ಇರುತ್ತವೆ. ಅವುಗಳಲ್ಲಿ ಜಿನ ಗುರುವಿನ ಮುಂದೆ ಈ ವ್ರತವನ್ನು ಕೈಗೊಂಡಿರುವವನ ಚಿತ್ರ ಕಂಡುಬರುತ್ತವೆ.[೨] ಈ ರೀತಿಯ ಕೆಲವು ನಿಸಿದಿ ಶಾಸನಗಳನ್ನು ಗಂಗಾವತಿ ತಾಲೂಕಿನ ಒಂದು ಐತಿಹಾಸಿಕ ಗ್ರಾಮವಾದ ಆನೆಗೊಂದಿಯ ಜೈನ ಬಸದಿಯಲ್ಲಿಕಾಣಬಹುದು, ಅವುಗಳ ಮಾಹಿತಿಗಳನ್ನು ಈ ರೀತಿಯಾಗಿ ವಿವರಿಸಲಾಗಿದೆ.

ಶಾಸನೋಕ್ತ ನಿಸಿದಿಗಲ್ಲುಗಳು

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ನಿಸಿದಿಗಲ್ಲುಗಳು ಕಂಡು ಬಂದಿವೆ. ಅವುಗಳನ್ನು ಶಾಸನ ಸಹಿತ ಮತ್ತು ಶಾಸನ ರಹಿತ ನಿಸಿದಿಗಲ್ಲುಗಳೆಂದು ವಿಂಗಡಿಸಿಕೊಂಡು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ. ಆನೆಗೊಂದಿ ಗ್ರಾಮದ ಚಿಂತಾಮಣಿಮಠದ ಮುಂದೆ ನಸಿಯ ಮಧ್ಯದ ಗುಂಡಿನ ಮೇಲಿನ ಶಾಸನವು ಕ್ರಿ. ಶ. ಸು.೧೩೫೭ರ ಕಾಲದ್ದಾಗಿದೆ. ಇದು ಬುಳ್ಳರಾಜನ ಪತ್ನಿ ಕಾಳುಬಾಯಿಯ ಸಮ್ಯಕ್ತವುತ ಪೂರ್ವಕವಾಗಿ ಬಾಲಚಂದ್ರಯೋಗೀಂದ್ರನ ಪಾದಕಮಲಗಳಲ್ಲಿ ದೀಕ್ಷೆ ಸ್ವೀಕರಿಸಿ ಮುಡುಪಿದಂದನ್ನು ತಿಳಿಸುತ್ತದೆ.[೬೩] ಗವಿರಂಗನಾಥ ದೇವಾಲಯದ ಬಳಿ ರಸ್ತೆಯಲ್ಲಿ ಎಡಕ್ಕೆ ಗುಂಡಿನ ಮೇಲಿರುವ ಕ್ರಿ. ಶ. ಸು. ೧೩೭೧ರ ಶಾಸನವು ಮೂಲ ಸಂಘ ಬಲಾತ್ಕಾರಗಣದ ಧರ್ಮಭೊಷಣ ಭಟ್ಟಾರಕರ ಪ್ರಿಯ ಶಿಷ್ಯ ಬೂಚಣನು ನಿಷಧಿಯಾದ್ದದನ್ನು ತಿಳಿಸುತ್ತದೆ. ಗವಿರಂಗನಾಥ ಸ್ವಾಮಿ ದೇವಾಲಯಕ್ಕೆ ಹತ್ತುವ ಮೆಟ್ಟಿಲು ಬಲದಂಡೆಯಲ್ಲಿರುವ ಇರುವ ಮತ್ತೊಂದು ಶಾಸನವು ಕ್ರಿ. ಶ. ೧೪೯೦ರ ಕಾಲಮಾನದಾಗಿದ್ದುರೂ, ಉಳಿದ ವಿವರಗಳು ತೃಟಿತವಾಗಿವೆ. ಅಲ್ಲೇ ಎರಡನೆಯ ಶಾಸನವು ವ್ಯಕ್ತಿಯೊಬ್ಬನ ನಿಸಿಧಿಯನ್ನು ದಾಖಲಿಸುತ್ತದೆ.[೬೪]

ಅದೇ ಸ್ಥಳದಲ್ಲಿನ ಮೂರನೆಯ ಶಾಸನವು ಕ್ರಿ. ಶ. ೧೩೭೫ರ ಕಾಲದ್ದಾಗಿದೆ. ಈ ಶಾಸನ ಮೂಲಸಂಘ ಬಲಾತ್ಕಾರಗಣದ ಮದನ ಕೀರ್ತಿರವುಳನ ಪ್ರಿಯಶಿಷ್ಯ ಬ್ಯಯರ ಚಿಕ್ಕಣನ ಮಗ ನಾಗಪ್ಪ ನಿಸಿಧಿಯಾದದ್ದನ್ನು ತಿಳಿಸುತ್ತದೆ.[೬೫] ಅಲ್ಲಿಯೇ ಇರುವ ನಾಲ್ಕನೆಯ ಶಾಸನವು ಕ್ರಿ. ಶ. ೧೩೬೬ ಕಾಲದ್ದಾಗಿದ್ದು, ಇದು ಮೂಲಸಂಘ ದೇಸಿಗಣದ ನರೇಂದ್ರ ಸೇನನ ಪ್ರಿಯ ಶಿಷ್ಯ ಹಾನಿಯ ಲಖ್ಖಿಸೆಟ್ಟೆಯ ಮಗ ಗೇಸಿಸೆವು ನಿಸಿಧಿಯಾದದ್ದನ್ನು ತಿಳಿಸುತ್ತದೆ. ಹಾಗೆಯೇ ಇಲ್ಲಿನ ಮೊತ್ತೊಂದು ಶಾಸನವು ಕ್ರಿ. ಶ. ಸು. ೧೪೯೯ರ ಕಾಲಮಾನವನ್ನು ಮಾತ್ರ ಸೂಚಿಸುತ್ತದೆ. ಉಳಿದ ವಿವರಗಳು ಹಾಳಾಗಿವೆ. ಅಲ್ಲಿಯೇ ಇರುವ ಮತ್ತೊಂದು ಶಾಸನವು ಕ್ರಿ. ಶ. ೧೩೭೧ ಕಾಲದ್ದಾಗಿದ್ದು, ಇದು ಹೊನ್ನಹಟ್ಟಿಯ ಸಮಿತಿಯ ಮಗಳು ಸೊಯಿಸೆಟ್ಟೆಯ ನಿಸಿದಿಯನ್ನು ತಿಳಿಸುತ್ತದೆ. ಆನೆಗೊಂದಿಯ ಉತ್ತರಕ್ಕೆ ೬೪ ಕಂಬಗಳ ಮಂಟಪದ ಈಶ್ಯಾನಕ್ಕಿರುವ ಬಂಡೆಯ ಮೇಲಿರುವ ಕ್ರಿ. ಶ. ೧೩೨೫ರ ಒಂದು ಶಾಸನವು ಹುಂಗದ ಗೋವಿಸೆಟ್ಟಯ ಸೋವಿಯಕ್ಕನ ನಿಸಿದಿಯನ್ನು ತಿಳಿಸುತ್ತದೆ.[೬೬] ಈ ಮೇಲಿನ ಶಾಸನ ಆಧಾರಗಳಿಂದ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಜೈನರ ವ್ರತಚರಣೆಯು ವ್ಯಾಪಕವಾಗಿತ್ತೆಂಬುದನ್ನು ದೃಡಪಡಿಸುತ್ತವೆ.

ಶಾಸನರಹಿತ ನಿಸಿದಿಗಲ್ಲುಗಳು.

ಸಂಖ್ಯೆ : ೧

ಶಿಲ್ಪ : ನಿಸಿದಿಗಲ್ಲು

ಗ್ರಾಮ : ಹೇರೂರು

ಸ್ಥಳ : ಕಲ್ಲೇಶ್ವರ ದೇವಾಲಯದ ಮುಂದೆ.

ವಿಸ್ತೀರ್ಣ : ೨ ಅಡಿ ಉದ್ದ ಮತ್ತು ೨.೮ ಅಡಿ ಅಗಲ.

ಕಾಲಮಾನ : ಕ್ರಿ ಶ. ಸು. ೧೩ನೇ ಶತಮಾನ

ಈ ಸ್ಮಾರಕ ಶಿಲ್ಪವನ್ನು ಕಪ್ಪು ಕಲ್ಲಿನ ಮೇಲೆ ಕೆತ್ತಲಾಗಿದೆ. ಇದು ಈ ಗ್ರಾಮದಲ್ಲಿ ಕಂಡುಬರುವ ಅಪರೂಪದ ಸ್ಮಾರಕವಾಗಿದೆ. ಜೈನರ ಅನುಯಾಯಿಗಳು ಸಲ್ಲೇಖನ ವ್ರತಗಳ ಮೂಲಕ ದೇಹತ್ಯಾಗ ಮಾಡಿದುದನ್ನು ನೆನಪಿಸುತ್ತವೆ. ಎರಡು ಅಂಕಣಗಳಲ್ಲಿ ಕೆತ್ತಲ್ಪಟ್ಟಿರುವ ಈ ಶಿಲ್ಪದ ಕೆಳಹಂತದಲ್ಲಿ ನಿಸಿದಿಗೊಂಡಿರುವ ವ್ಯಕ್ತಿ ಕೈಮುಗಿದುಕೊಂಡು ಪದ್ಮಾಸನದಲ್ಲಿ ಧ್ಯಾನಕ್ತ ಸ್ಥಿತಿಯಲ್ಲಿ ಕುಳಿತಿರುವಂತೆ ಮತ್ತು ಮೇಲಿನ ಹಂತದಲ್ಲಿ ಆತನು ಜಿನಲೋಕವನ್ನು ಸೇರಿದ್ದನ್ನು ಚಿತ್ರಿಸಲಾಗಿದೆ.[೬೭]

ಸಂಖ್ಯೆ : ೨

ಶಿಲ್ಪ : ನಿಸಿದಿಗಲ್ಲು

ಗ್ರಾಮ : ಮುಕ್ಕುಂಪಿ

ಸ್ಥಳ : ದ್ಯಾಮಮ್ಮನ ಗುಡಿಯ ಹಿಂದೆ.

ವಿಸ್ತೀರ್ಣ : ೧.೫ ಅಡಿ ಮತ್ತು ಮತ್ತು ೧ ಅಡಿ ಅಗಲ

ಕಾಲಮಾನ : ಕ್ರಿ ಶ. ಸು. ೧೨ನೇ ಶತಮಾನ

ಈ ಸ್ಮಾರಕ ಶಿಲ್ಪವನ್ನು ಕಪ್ಪು ಕಣಶಿಲೆಯಲ್ಲಿ ಕೆತ್ತಲಾಗಿದ್ದು. ಇದು ಎರಡು ಹಂತವನ್ನು ಹೊಂದಿದೆ. ಮೊದಲನೇ ಹಂತದಲ್ಲಿ ವ್ಯಕ್ತಿಯು ಕೈಯನ್ನು ಮುಗಿದುಕೊಂಡು ಪದ್ಮಾಸದಲ್ಲಿ ಧ್ಯಾನಕ್ತ ಸ್ಥಿತಿಯಲ್ಲಿ ಕುಳಿತಿರುವನು. ಮೇಲ್ಬಾಗದ ಶಿಲ್ಪವು ಭಂಗ್ನಗೊಂಡಿದೆ. ಈ ಸ್ಮಾರಕ ಸರಳ ರಚನೆಯದ್ದು. ಅಲ್ಲದೇ ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಹೆಚ್ಚು ಸ್ಮಾರಕ ಶಿಲ್ಪಗಳು ದೊರತಿವೆ.[೬೮]

ಸಂಖ್ಯೆ : ೩

ಶಿಲ್ಪ : ನಿಸಿದಿಗಲ್ಲು

ಗ್ರಾಮ : ಜಬ್ಬಲ ಗುಡ್ಡ

ಸ್ಥಳ : ಕುಮಾರಾಮನ ಬೆಟ್ಟದಲ್ಲಿ.

ವಿಸ್ತೀರ್ಣ : ೨.೫ ಅಡಿ ಉದ್ದ ಮತ್ತು ೧.೫ ಅಡಿ ಅಗಲ

ಕಾಲಮಾನ : ಕ್ರಿ ಶ. ಸು. ೧೨ನೇ ಶತಮಾನ

ಈ ಸ್ಮಾರಕವನ್ನು ಕಪ್ಪು ಶಿಲೆಯಿಂದ ಮೂರು ಹಂತಗಳಲ್ಲಿ ಕಡೆಯಲ್ಪಟ್ಟಿದೆ. ಕೆಳಹಂತದಲ್ಲಿ ನಿಸಿದಿಗೊಂಡ ವ್ಯಕ್ತಿ ಕೈಮುಗಿದುಕೊಂಡು ಪದ್ಮಾಸನದಲ್ಲಿ ಕುಳಿತ್ತಿದ್ದಾನೆ. ಎರಡನೆಯ ಹಂತದಲ್ಲಿ ಜೈನ ಮುನಿಯನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಅವನ ಎಡ ಮತ್ತು ಬಲಬದಿಯಲ್ಲಿ ಇಬ್ಬರು ಸೇವಕರು ಚಾಮರಗಳನ್ನು ಹಿಡಿದಿದ್ದಾರೆ. ಮೇಲ್ಭಾಗದಲ್ಲಿ ಮುರೋಡೆಯನ್ನು ಚಿತ್ರಿಸಲಾಗಿದೆ.[೬೯]

ಕೊನೆಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ., ೧೯೬೬, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು-೧.

೨. ಶೇಷಶಾಸ್ತ್ರಿ, ಆರ್., ೨೦೦೪, ಕರ್ನಾಟಕದ ವೀರಗಲ್ಲುಗಳು, ಪು-೧೧.

೩. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನಶಿಲ್ಪ. ಪು-೧೨.

೪. ಷ. ಶೆಟ್ಟರ್., ಸಾವನ್ನು ಸ್ವಾಗತಿಸಿ-೧, ಪು-೧೪.

೫. ಶೇಷಶಾಸ್ತ್ರಿ ಆರ್., ೨೦೦೪, ಪೂರ್ವೋಕ್ತ, ಪು-೧೪೬.

೬. ಗೀತಾ ಸಿ. ಪೋಲಿಸ ಪಾಟೀಲ., ೨೦೧೮, ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು, ಪು-೧೯೩.

೭. ಅದೇ, ಪು-೧೯೪.

೮. ಅದೇ, ಪು-೧೯೪.

೯. ಕ್ಷೇತ್ರಕಾರ್ಯ.

೧೦. ಕ್ಷೇತ್ರಕಾರ್ಯ.

೧೧. ಕ್ಷೇತ್ರಕಾರ್ಯ.

೧೨. ಕ್ಷೇತ್ರಕಾರ್ಯ.

೧೩. ಕ್ಷೇತ್ರಕಾರ್ಯ.

೧೪. ಕ್ರೇತ್ರಕಾರ್ಯ.

೧೫. ಕ್ಷೇತ್ರಕಾರ್ಯ.

೧೬. ಗೀತಾ ಸಿ, ಪೋಲಿಸ ಪಾಟೀಲ. ೨೦೧೮, ಪೂರ್ವೋಕ್ತ, ಪು, ೧೭೪.

೧೭. ಅದೇ, ಪು-೧೭೨.

೧೮. ಅದೇ, ಪು-೧೭೩.

೧೯. ಅದೇ, ಪು-೧೭೮.

೨೦. ಅದೇ, ಪು-೧೭೪.

೨೧. ಅದೇ, ಪು-೧೭೫.

೨೨. ಅದೇ, ಪು-೧೭೫.

೨೩. ಅದೇ, ಪು-೧೭೬.

೨೪. ಅದೇ, ಪು-೧೬೮.

೨೫. ಅದೇ, ಪು-೧೬೮

೨೬. ಕ್ಷೇತ್ರ ಕಾರ್ಯ

೨೭. ಕ್ಷೇತ್ರ ಕಾರ್ಯ

೨೮. ಕ್ಷೇತ್ರ ಕಾರ್ಯ

೨೯. ಕ್ಷೇತ್ರ ಕಾರ್ಯ

೩೦. ಶೇಷಶಾಸ್ತ್ರಿ ಆರ್., ೨೦೦೫, ಶಾಸನ ಪರಿಚಯ, ಪು–೨೯.

೩೧. ಗೀತಾ ಸಿ, ಪೋಲಿಸ ಪಾಟೀಲ., ೨೦೧೮, ಪೂರ್ವೋಕ್ತ, ಪು–೧೯೪.

೩೨. ಕ್ಷೇತ್ರಕಾರ್ಯ.

೩೩. ಶೇಷಶಾಸ್ತ್ರಿ ಆರ್., ೨೦೦೪, ಪೂರ್ವೋಕ್ತ ಪು–೧೬೮.

೩೪. ಗೀತಾ ಸಿ, ಪೋಲಿಸ ಪಾಟೀಲ., ೨೦೧೭, ಕೊಪ್ಪಳ ಜಿಲ್ಲೆಯ ಬಂದೂಕು ವೀರಗಲ್ಲು, ಇತಿಹಾಸ ದರ್ಶನ ಸಂ, ೩೩, ಪು–೫೧೨.

೩೫. ಅದೇ, ಪು–೫೧೩.

೩೬. ಅದೇ, ಪು–೫೧೨,

೩೭. ಅದೇ, ಪು–೫೧೪.

೩೮. ಅದೇ, ಪು–೫೧೩.

೩೯. ಗೀತಾ ಸಿ, ಪೋಲಿಸ ಪಾಟೀಲ. ೨೦೧೮, ಪೂರ್ವೊಕ್ತೇ, ಪು–೧೭೯.

೪೦. ಅದೇ, ಪು–೧೭೯.

೪೧. ಅದೇ, ಪು–೧೮೦.

೪೨. ಅದೇ, ಪು–೧೮೧.

೪೩. ಷ. ಶೇಟ್ಟರ್., ೨೦೧೫, ಸಾವನ್ನು ಅರಸಿ–೨, ಪು–೧೨೮,೧೨೯.

೪೪. ಅದೇ, ಪು–೧೩೫.

೪೫. ಮಂಜುನಾಥ, ಎಂ, ಜಿ., ೨೦೧೧, ಮಾಸ್ತಿಕಲ್ಲು, ವೀರಗಲ್ಲು ಮತ್ತು ನಿಸಿಧಿ ಶಾಸನಗಳು, ಪು–೨.

೪೬. ಶೇಠೆ ಬಿ, ಎಸ್., ೧೯೯೧, ಕರ್ನಾಟಕದಲ್ಲಿ ಸತಿಪದ್ಧತಿ, ಪು–೧೧, ೨೩.

೪೭. ಷ, ಶಟ್ಟರ್., ೨೦೧೫, ಪೂರ್ವೋಕ್ತ, ಪು–೧೨೯.

೪೮. ಕಲಬುರ್ಗಿ, ಎಂ, ಎಂ., ೨೦೧೧, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು. ಪು–೧೩೨.

೪೯. ಚಿನಂದಾಮೂರ್ತಿ ಎಂ., ೧೯೮೨, ವೀರಗಲ್ಲು ಮತ್ತು ಮಾಸ್ತಿಗಲ್ಲು. ಪು–೪.

೫೦. ಚಿದಾನಂದಮೂರ್ತಿ ಎಂ., ೧೯೬೬, ಪೂರ್ವೋಕ್ತ, ಪು–೩೧೩.

೫೧. ತಿಪ್ಪೇರುದ್ರಸ್ವಾಮಿ ಎಚ್., ೧೯೯೪, ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ ಅಧ್ಯಯ, ಪು–
೩೧೩

೫೨. ಗೀತಾ ಸಿ, ಪೋಲಿಸ ಪಾಟೀಲ., ೨೦೧೮, ಪೂರ್ವೋಕ್ತ. ಪು–೧೮೩.

೫೩. ಕ್ಷೇತ್ರಕಾರ್ಯ.

೫೪. ಗೀತಾ ಸಿ ಪೋಲಿಸ ಪಾಟೀಲ,. ೨೦೧೮, ಪೂರ್ವೋಕ್ತ, ಪು-೧೮೭.

೫೫. ಅದೇ, ಪು-೧೮೫.

೫೬. ಅದೇ, ಪು-೧೮೩.

೫೭. ಅದೇ, ಪು-೧೮೪.

೫೮. ಕ್ಷೇತ್ರ ಕಾರ್ಯ.

೫೯. ದೇವರ ಕೊಂಡಾರೆಡ್ಡಿ, ಪರಮಶಿವಮೂರ್ತಿ ಡಿ. ವಿ; ಭಟ್‌ಸೂರಿ ಕೆ. ಜಿ. ಕಲವೀರ ಮನ್ವಾಚಾರ್., ಸಂ, ೧೯೯೯, ಕೊಪ್ಪಳ ಜಿಲ್ಲೆಯ ಶಾಸನ ಸಂಪುಟ-೨, ಪು-೩೪೩.

೬೦. ಅದೇ, ಪು-೩೪೩-೩೪೪.

೬೧. ಅದೇ, ಪು-೩೮೦.

೬೨ ಅದೇ, ಪು-೩೮೯-೯೦.

೬೩. ನರಸಿಂಹ ಮೂರ್ತಿ, ಎ. ವಿ., ೨೦೦೨, ಕರ್ನಾಟಕ ನಾಣ್ಯ ಪರಂಪರೆ-೧೨೪.

೬೪. ದೇವರ ಕೊಂಡಾರೆಡ್ಡಿ. ೧೯೯೯, ಪೂರ್ವೋಕ್ತ, ಪು-೩೪೪.

೬೫. ಅದೇ, ಪು-೩೫೭.

೬೬. ಅದೇ, ಪು-೩೫೪.

೬೭. ಕ್ಷೇತ್ರಕಾರ್ಯ.

೬೮. ಕ್ಷೇತ್ರಕಾರ್ಯ.

೬೯. ಕ್ಷೇತ್ರಕಾರ್ಯ.

ಅಧ್ಯಾಯ – ಐದು
ನಂಬಿಕೆ ಮತ್ತು ಆಚರಣೆಗಳು

ಅಧ್ಯಾಯ – ಐದು
ನಂಬಿಕೆ ಮತ್ತು ಆಚರಣೆಗಳು

ನಂಬಿಕೆಗಳು

ಪ್ರಕೃತಿಯ ಮಧ್ಯ ಜೀವಿಸುವ ಮಾನವ ಹಲವು ಶಕ್ತಿಗಳನ್ನು ದೈವಿಕ ಭಾವನೆಗಳಿಂದ ನೋಡುತ್ತಿದ್ದ ನಂತರ ಪೂಜಿಸಲು ಪ್ರಾರಂಭಿಸಿ ಒಲಿಸಿಕೊಳ್ಳಲು ಪ್ರಯತ್ನಿಸಿದನು. ಜೊತೆಗೆ ಭೂತ ದೆವ್ವಗಳಿಗೂ ಆತಂಕಗೊಳ್ಳಲು ಆರಂಭಿಸಿದನು. ಪೂಜೆ ಮತ್ತು ಭಯಗಳೆರಡೂ ಒಟ್ಟೊಟ್ಟಿಗೆ ಬೆಳೆಯಲು ಶುರುವಾದವು. ಇವುಗಳಿಂದ ರಕ್ಷಣೆ ಪಡೆಯಲು, ಜೀವನದಲ್ಲಿ ನೆಮ್ಮದಿಯನ್ನು ಕಂಡುಕೊಳ್ಳಲು ಕೆಲವು ನಂಬಿಕೆಗಳನ್ನು ರೂಢಿಸಿಕೊಂಡನು. ಹೀಗೆ ಭಯ ಮತ್ತು ಭಾವನಾತ್ಮಕತೆಯ ಹಿನ್ನಲೆಯಲ್ಲಿ ಬೆಳದು ನಂಬಿಕೆಯ ಪ್ರಪಂಚ ವಿಶಾಲವಾದದ್ದು ಮತ್ತು ಆಳವಾದುದ್ದಾಗಿದೆ. ಮಾನವನ ಜೀವನವನ್ನು ಸಕಲ ಮುಖಗಳಲ್ಲಿಯೂ ಇದರ ಇರುವಿಕೆಯಿ ಕಂಡುಬರುತ್ತದೆ. ಮಾನವ ಬದುಕಿನ ಮೂಲ ಪುಟಗಳನ್ನು ತೆರೆದಾಗ ನಂಬಿಕೆಗಳ ಸರಪಳಿಯ ಜೋಡಣೆಯ ಕಾರ್ಯವು ಅದರಿಂದಲೇ ಆರಂಭವಾಯಿತೆನ್ನಬಹುದು. ಹೀಗಾಗಿ ಮಾನವನ ಬದುಕಿಗೂ ನಂಬಿಕೆಗಳಿಗೂ ಬೇರ್ಪಡಿಸಲಾಗದ ಸಂಬಂಧವಿದೆ. ಅಲ್ಲದೆ ಪ್ರತಿಯೊಂದು ಸಮಾಜ ಜನಪದ ಬದುಕಿನ ನಂಬಿಕೆ ಹಾಸುಹೊಕ್ಕಾಗಿವೆ.ಇವು ಮಾನವನ ಜೀವನವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿ ಬೆಳೆದು ಉಳಿದುಕೊಂಡು ಬಂದಿವೆ. ಜನಪದ ಸೊಗಡು ನಿತ್ಯ ಬದುಕಿಗೂ ನಂಬಿಕೆಗಳಿಗೂ ನಿಕಟವಾದ ಸಂಬಂದ/ ನಂಟಿದೆ. ನಂಬಿಕೆಯು ಒಂದು ಮಾನಸಿಕ ಒಪ್ಪಿಗೆಯಾಗಿದ್ದು ಜನಪದರು ಅದನ್ನು ಪರಂಪರಾನುಗತವಾಗಿ ನಂಬಿ ಅದರಂತೆ ನಡೆದುಕೊಂಡು ಬಂದಿರುವ ಭಾವರೂಪಗಳಾಗಿವೆ. ಇದು ಸೂಚನೆ, ನಿಯಮ, ಅದೇಶ, ವಿಧಿ ನಿಷೇಧ ನಿರ್ದೇನ ಆಗ್ರಹ, ಆದೇಶ ಮತ್ತು ಆಜ್ಞೆಗಳ ರೂಪದ ಒಂದು ಹೇಳಿಕೆ.[೧]

ಹೀಗೆ ಮಾನವನ ಜೀವನದಲ್ಲಿ ನಂಬಿಕೆ ಪ್ರಬಲವಾದ ಪ್ರಾಬಲ್ಯ ಅನನ್ಯವಾದ್ದು. ಮಾನವ ಬದುಕಿನ ಭಾಗವಾದ ದೈವ ಸಂಸ್ಕೃತಿಯಲ್ಲಿ ನಂಬಿಕೆಯ ಪ್ರಪಂಚ ಅತ್ಯಂತ ವಿಸ್ತಾರವಾದದ್ದು. ಮುಖ್ಯವಾಗಿ ದೈವ ಸಂಸ್ಕೃತಿಯಲ್ಲಿ ಜನಪದರ ಮಾನಸಿಕ ರೋಗಚಿಕಿತ್ಸವಾಗಿ ಕೆಲಸ ಮಾಡುತ್ತ ಬಂದಿವೆ.೪೦ ಈ ಗ್ರಾಮವು ತಾಲೂಕಿನಿಂದ ೧೫ ಕಿ.ಮೀ. ದೂರದಲ್ಲಿದು. ಇಲ್ಲಿನ ಐತಿಹಾಸಿಕ ಕುರುಹು ಆದ ವಿಠಲಾಪುರದಿಂದ ಕರಡಿಗುಡ್ಡಕ್ಕೆ ಹೋಗುವ ಮಾರ್ಗದ ಮಧ್ಯ ಗ್ರಾಮವಾದ ಗೊಲ್ಲಪನ ಮಟ್ಟಿಯಲ್ಲಿ ಒಂದು ತುರುಗೋಳ ಶಿಲ್ಪ ಇದೆ. ಈ ಸ್ಮಾರಕ ಶಿಲ್ಪದಲ್ಲಿ ವೀರನ ಕೈಯಲ್ಲಿ ಕೋಲು ಇದೆ. ಈ ಶಿಲ್ಪದಲ್ಲಿ ಎತ್ತು, ಹಸು, ಒಂದು ಕರುವಿನ ಚಿತ್ರಣವಿದೆ. ವೀರನ ಸೊಂಟದಲ್ಲಿ ಬಾಕುವಿದೆ. ದನಗಳನ್ನು ವಿಶೇಷವಾಗಿ ಅಲಂಕರಿಸಿ ಚಿತ್ರಿಸಲಾಗಿದೆ. ಈ ಪದ್ಧತಿ ಇಂದಿಗೂ ಇಲ್ಲಿ ಮುಂದುವರೆದಿದೆ. ವಿಶೇಷ ಸಂದರ್ಭಗಳಲ್ಲಿ ಹಸುಗಳಿಗೆ ಕೊರಳಲ್ಲಿ ಗಂಟೆ, ಗೊಂಡೇವು, ಗೆಜ್ಜೆಸರ ಮುಂತಾವುಗಳಿಂದ ಸಿಂಗರಿಸುವುದನ್ನು ಕಾಣುತ್ತೇವೆ. ಈ ಭಾಗದಲ್ಲಿ ಸಂಚರಿಸಿ ದನಗಳನ್ನು ಕುರಿಗಳನ್ನು ಮೇಯಿಸುವವರು ಇದನ್ನು ಆರಾಧಿಸುತ್ತಾರೆ. ಇದರ ವಿಶೇಷತೆ ಏನಂದರೆ ಇದನ್ನು ಆರಾಧಿಸುವುದರಿಂದ ಕುರಿಗಳಿಗೆ ದನಗಳಿಗೆ ಯಾವುದೇ ಪೀಡೆಗಳು ರೋಗ ರುಜಿನೆಗಳು ಬರುವುದಿಲ್ಲವೆಂಬ ನಂಬಿಕೆ ಇಲ್ಲಿಯ ಜನರದ್ದು, ಆಗಾಗಿ ಈ ಪ್ರದೇಶದ ಜನರು ಇಂದಿಗೂ ಆರಾಧಿಸುತ್ತಾರೆ.[೨]

ಒಟ್ಟಾರೆ ಹೇಳುವುದಾದರೆ, ಸ್ಮಾರಕ ಶಿಲ್ಪಗಳ ಅಧ್ಯಯನವು ಈ ಭಾಗದ ಸ್ಥಳೀಯ ಐತಿಹಾಸಿಕ ಮಹತ್ವವನ್ನು ಬೀರುವಲ್ಲಿ ಯಶಸ್ವಿಯಾಗಿದೆ. ಕಡೇಬಾಗಿಲು ಗ್ರಾಮವು ತಾಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಇಲ್ಲಿನ ಐತಿಹಾಸಿಕ ಕುರುಹು ಆದ ಮಾಸ್ತಿಗಲ್ಲು ಕಂಡುಬರುತ್ತದೆ. ಈ ಮಾಸ್ತಿಗಲ್ಲನ್ನು ಸ್ಥಳೀಯರು ಹೊಟ್ಟೆಮುರುಕವ್ವ ಎಂದು ಕರೆಯುತ್ತಾರೆ. ಈ ಮಾಸ್ತಿಗಲ್ಲನ್ನು ಈ ಭಾಗದಲ್ಲಿ ಸಂಚರಿಸುವ ಯಾರೇ ಆಗಲಿ ಇದಕ್ಕೆ ಕಲ್ಲಿನಿಂದ ಹೋಡೇಯಬೇಕು. ಇಲ್ಲದಿದ್ದರೆ ಈ ಕಲ್ಲಿನಲ್ಲಿರುವ ಆತ್ಮ ಅಲ್ಲಿ ಸಂಚರಿಸುವ ಜನರ ಹೊಟ್ಟೆಯಲ್ಲಿ ಹೊಕ್ಕು ಅವರ ಹೊಟ್ಟೆ ಮುರಿಯಲಿಕ್ಕೆ ಆರಂಭವಾಗುತ್ತದೆ. ವಿಪರೀತವಾಗಿ ಹೊಟ್ಟೆ ಮುರಿತದಿಂದ ಸತ್ತೆ ಹೋಗುತ್ತಾರೆ ಎಂಬ ನಂಬಿಕೆ ಇದೆ. ಆದ್ದರಿಂದಾಗಿ ಈ ಭಾಗದಲ್ಲಿ ಸಂಚರಿಸುವ ಪ್ರತಿಯೊರ್ವರು ಅದಕ್ಕೆ ಕಲ್ಲಿನಿಂದ ಹೊಡೆದು ಅದರಲ್ಲಿರುವ ಆತ್ಮವನ್ನು ಹೋರ ಬರದಂತೆ ತಡೆಯಲಾಗುತ್ತದೆಂದು ಸ್ಥಳೀಯರು ಹೇಳುತಾರೆ. ಈ ಶಿಲ್ಪದ ಮಂಭಾಗದಲ್ಲಿ ಚಿಕ್ಕ ಕಲ್ಲುಗಳ ರಾಶಿ ಇದೆ.

ಆಚರಣೆಗಳು

ನಂಬಿಕೆ ಮತ್ತು ಆಚರಣೆಯು ಸಂಸ್ಕೃತಿಯ ಒಂದು ಮುಖದ ಎರಡು ನಾಣ್ಯಗಳು ಇದ್ದ ಹಾಗೆ. ಆಚರಣೆ ಎಂದರೆ ಪ್ರತಿಯೊಂದು ಸಮುದಾಯವು ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ ನಿರ್ಧಿಷ್ಟ ಸ್ಥಳದಲ್ಲಿ ಹಾಗೂ ಕಾಲದಲ್ಲಿ ನಡೆಯುವ ಕ್ರಿಯೆಯಾಗಿವೆ. ಮಾನವ ಉಗಮದೊಂದಿಗೆ ಆರಂಭಗೊಂಡಿರುವ ಆಚರಣೆಗಳು, ಆತನ ಬದುಕಿನಲ್ಲಿ ಇಂದಿಗೂ

ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ನಂಬಿಕೆಯ ಭೌತಿಕ ರೂಪ ಆಚರಣೆ. ಮಾನವನ ಬದುಕನ್ನು ರೂಪಿಸುವಲ್ಲಿ ಸಂಸ್ಕೃತಿಯ ಪೋಷಣೆಯಲ್ಲಿ ನಾಗರಿಕತೆಯನ್ನು ಬೆಳೆಸುವಲ್ಲಿ ಸಂಪ್ರದಾಯ, ಆಚರಣೆಗಳು ಮಹತ್ವದ ಪಾತ್ರವಹಿಸುತ್ತವೆ. ಆಚರಣೆ ಎಂಬುದು ಧಾರ್ಮಿಕ ಕ್ರಿಯೆಯ ಮುಂದುವರೆದ ರೂಪ. ಅತೀಂದ್ರಿಯ ಶಕ್ತಿ ಅಥವಾ ಶಕ್ತಿಗಳಿಂದ ಅನುಗ್ರಹ ಪಡೆಯಲು ಕೈಗೊಂಡ ಕ್ರಿಯೆ ಇದಾಗಿದೆ ಎಂದು ಮೋನಿಕಾ ವಿಲ್ಸನ್ ಹೇಳುತ್ತಾರೆ. ಕಾಡಿನಲ್ಲಿ ನೆಲೆಗೊಂಡಿದ್ದ ಮಾನವನಿಗೆ ಪ್ರಕೃತಿಯಲ್ಲಿನ ವೈಪರೀತ್ಯಗಳನ್ನು ಪವಾಡವೆನಿಸುತ್ತವೆ. ಅವುಗಳ ಹಿಂದೆ ಅಡಗಿರುವ ಅಗೋಚರ ಶಕ್ತಿಯನ್ನು ಸಂಪ್ರೀತಗೊಳಿಸಿದರೆ ಜೀವನ ನಿರಾಂತಕವಾಗುವುದು ಎಂದು ಭಾವಿಸಿದ್ದನು. ಹೀಗೆ ನಿಸರ್ಗದ ಮಡಿಲಲ್ಲಿ ಮಾನವನು ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತ ಸೋತು ಅದಕ್ಕೆ ಶರಣಾಗತನಾದ. ಈ ಹಿನ್ನಲೆಯಲ್ಲಿ ಆಶ್ಚರ್ಯ ಭಯಗಳನ್ನು ಕೆರಳಿಸಿದ ವಸ್ತುಗಳ ಮೇಲೆ ಪೂಜನೀಯವಾದ ಭಾವನೆಯನ್ನು ರೂಢಿಸಿಕೊಂಡು ಬಂದ. ಜೊತೆಗೆ ತನ್ನ ಬದುಕಿನ ಪ್ರಕೃತಿಯ ಪ್ರತಿಯೊಂದು ಘಟನೆಯ ಹಿಂದಿರುವ ಮಹತ್ತರವಾದದ್ದನ್ನು. ಹೀಗೆ ಮನುಷ್ಯನು ತನ್ನ ಕಲ್ಪನೆಯ ಆಳದಲ್ಲಿ ಅಡಗಿದ ದೈವಗಳಿಗೆ ಭಕ್ತಿ, ಗೌರವ, ಶ್ರದ್ಧೆಯಿಂದ ಆರಾಧಿಸುವುದರಲ್ಲಿ ತೊಡಗಿಕೊಂಡರು. ಇದರ ಪ್ರತಿಯಾಗಿ ಅನೇಕ ಆಚರಣೆಗಳನ್ನು ರೂಢಿಸಿಕೊಂಡು ಬಂದನು.

ಆಚರಣೆಗಳು ಮಾನವನ ಜೀವನದ ಅಂಗಗಳಾಗಿ ಬೆಳೆದು ಒಂದು ಸಂಪ್ರದಾಯವಾಗಿ ಮಾರ್ಪಡುತ್ತವೆ. ಹೀಗೆ ಅಸ್ತಿತ್ವಕ್ಕೆ ಬಂದ ಆಚರಣೆಗಳು ಜನಪದ ಜೀವನದ ಅವಿಭಾಜ್ಯ ಅಂಗವಾಗಿವೆ. ಲಿಖಿತ ಆಧಾರಗಳಿಲ್ಲದ ಸಂಸ್ಕೃತಿಯ ಅಧ್ಯಯನಕ್ಕೆ ಆಚರಣೆಗಳು ಮೂಲ ಆಧಾರವಾಗಿವೆ. ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಐತಿಹ್ಯ ಹಾಗೂ ನಂಬಿಕೆ, ಆಚರಣೆಗಳನ್ನು ಈ ಕೆಳಕಂಡಂತೆ ಕಾಣಬಹುದು. ವೀರನ ಪರಾಕ್ರಮ, ಸಚ್ಚಾರಿತ್ರ್ಯ, ಸಂಯಮ ಶೀಲತೆ, ಅವನಿಗೆ ಒದಗಿದ ಕಷ್ಟಗಳ ಪರಂಪರೆ, ಅವನ ಜೀವನದ ದುರಂತ ಇವುಗಳಿಂದ ಆಕರ್ಷಿತರಾದ ಸಮಾಜ ಅವನನ್ನು ಆರಾಧಿಸಲು ಮೊದಲಿಡುತ್ತದೆ. ಮೇಲೆ ಹೇಳಿದ ಅಂಶಗಳೇ ಪ್ರಮುಖವಾಗಿ ಅವನ ಕೆಲವಾರು ದೌರ್ಬಲ್ಯಗಳನ್ನು ಮರೆತು ಅವನನ್ನು ತಮ್ಮ ನಾಯಕನನ್ನಾಗಿಯೋ, ಕುಲದೇವತೆಯನ್ನಾಗಿಯೋ ಸ್ವೀಕರಿಸುವುದು ಪ್ರಾರಂಭವಾಗುತ್ತದೆ. ಹೆಸರಿಸುವಂತಹ ರಾಜವಂಶದಲ್ಲಿ ಹುಟ್ಟದಿದ್ದರೂ, ಗಮನಾರ್ಹವಾದ ರಾಜ್ಯವನ್ನು ನಿರ್ಮಾಣ ಮಾಡದಿದ್ದರೂ, ಜನರ ಗೌರವಕ್ಕೆ ಪಾತ್ರನಾದವನ್ನು ಒಂದು ಜನಾಂಗದವರ ಕುಲದೈವವಾದವನು ಎಂದರೆ ಕುಮಾರರಾಮ. ಇವನೊಡನೆ ಹೋಲಿಕೆಗೆ ಪಾತ್ರರಾಗುವವರು ಬೇರೆ ಯಾರೂ ಸಿಗುವುದಿಲ್ಲ. ತನ್ನ ಪರಾಕ್ರಮ, ಸಂಯಮ, ಸಚ್ಚಾರಿತ್ರ್ಯ ಮತ್ತು ಪರನಾರೀ ಸೋದರತ್ವ ಮುಂತಾದ ಗುಣ ವಿಶೇಷಗಳಿಂದ ಹೆಸರು ಪಡೆದವನು. ಅವನ ಬಗ್ಗೆ ಸಾಹಿತ್ಯ ಕೃತಿಗಳನ್ನು ರಚನೆ ಮಾಡಿದವರು, ಅವನ ಆಸ್ಥಾನ ಕವಿಗಳಲ್ಲ, ಕುಮಾರ ರಾಮನ ಆದರ್ಶ ಗುಣಗಳು ಐತಿಹ್ಯಗಳಾಗಿ, ಕಥೆಗಳಾಗಿ ಒಂದೊಂದು ರೀತಿಯಲ್ಲಿ ಬಾಯಿಂದ ಬಾಯಿಗೆ ಬಂದವು. ಜನಮನದ ಈ ಕಥೆಗಳನ್ನು ಕವಿಗಳು ಜೋಡಿಸಿ ಕಾವ್ಯ ಬರೆದರು. ಅವನ ಬಗ್ಗೆ ಕಾವ್ಯ ಬರೆದವರೆಲ್ಲ ಅವನನ್ನು ಅವತಾರ

ಪುರುಷನೆಂದೇ ಭಾವಿಸಿದ್ದಾರೆ. ಈ ಕಲ್ಪನೆ ನಂಜುಂಡನಲ್ಲಿ ಖಚಿತವಾಗಿಯೂ, ಪಾಂಚಾಳ ಗಂಗನಲ್ಲಿ ಸ್ಥೂಲವಾಗಿಯೂ, ಮಹಾಲಿಂಗಸ್ವಾಮಿಯಲ್ಲಿ ಹಲಕೆಲವು ಬದಲಾವಣೆಗಳ ಮೂಲಕವೂ ಪ್ರತಿಪಾದಿತವಾಗಿದೆ.[೩] ಕುಮಾರರಾಮನನ್ನು ಆರಾಧಿಸುವ ಸಂಪ್ರದಾಯ ಅವನು ಸತ್ತ ಕೂಡಲೇ ಆರಂಭವಾದಂತೆ ತೋರುತ್ತದೆ. "ಕುಮ್ಮಟದ ಕಾಳಗವನ್ನು ವರ್ಣಿಸುವ ನ್ಯೂನಿಜ್ಜನ್ ಈ ಮಾತು ಕಂಪಿಲನಿಗಿಂತಲೂ ಕುಮಾರರಾಮನಿಗೆ ಅನ್ವಯಿಸುವಂತಿದೆ." ಎಂಬ ವರದರಾಜಾರಾಯರ ಅಭಿಪ್ರಾಯ ಸಮಂಜಸವಾಗಿದೆ.೪ ಕುಮಾರರಾಮನು ಬೇಡರ ಕುಲಕ್ಕೆ ಹೇಗೆ ದೇವರಾದ ಎಂಬ ಅಂಶದ ವರ್ಣನೆ ಬಾಲರಾಮನ ಸಾಂಗತ್ಯದಲ್ಲಿ ಬರುತ್ತದೆ. ದೆಹಲಿಯಿಂದ ಮರಳಿಬಂದ ರಾಮನ ತಲೆಯನ್ನು ಅವನ ಸಂಬಂಧಿಗಳು ಸಂಸ್ಕಾರ ಮಾಡುತ್ತಾರೆ. ಆಗ ಅಲ್ಲಿಗೆ ಇಡೀ ಕುಮ್ಮಟ ನಗರವೇ ಬಂದಿರುತ್ತದೆ. ಆಗ ಹರಿಹರ ದೇವಿ "ಕುಲಕ್ಕೆಲ್ಲಾ ದೇವಾರಾಗು" ಎಂದು ಹರಿಸಿದಳು ಕಂಪಿಲ, ಬೈಚಪ್ಪ ಮೊದಲಾದವರು ತಲೆ ಬಾಗಿಸಿ ನಮಸ್ಕರಿಸಿದರು. ಉಟ್ಟು ಬಂಜೆಯರಿಗೆ ಸಂತಾನವನ್ನು ಕರುಣಿಸುವವನೆಂದು, ಬೇಡರ ಕುಲದವರು ಜಾತ್ರೆಯನ್ನು ನೆಡೆಸಬೇಕೆಂದು ರಾಮಯ್ಯನು ದೇವರಾದವನೆಂದು ಅವರು ಸಾರಿ ಹೇಳಿದರು. ಅಂದಿನಿಂದ ಇಂದಿನವರೆಗೂ ಬೇಡ ಸಮುದಾಯದವರು ಜಾತ್ರೆಯನ್ನು ನಡೆಸುವ ಸಂಪ್ರದಾಯ ಇಂದಿಗೂ ಕಾಣಬಹುದು. ಕಟ್ಟಡದ ಉತ್ತರಕ್ಕೆ ಸುಮಾರು ಐನೂರುಗಜ ದೂರದಲ್ಲಿರುವ ನೆಲಗಲ್ಲಿನಲ್ಲಿ ಹರಿಯಲಾಚಮ್ಮ ಬಚ್ಚಲೆಂಬ ಒಂದು ತೋಟವಿರುತ್ತದೆ. ಇದರ ಚದರ ಸುಮಾರು ೩ ಅಡಿ, ಆಳ ೨ಅಡಿ ಇದರ ಬಳಿಯಲ್ಲಿ ಇದಕ್ಕಿಂತ ವಿಸ್ತಾರವಾದ ಆದರೂ ಆಳವಿಲ್ಲದ ತೊಟ್ಟಿ ಇರುತ್ತದೆ. ಇದರ ಪಕ್ಕದಲ್ಲಿ ಹಸಿರು ಕಲ್ಲಿ ಒಂದು ಚಪ್ಪಡಿ ಇದೆ. ಇದರಲ್ಲಿ ಪದ್ಮಾಸನ ಹಾಕಿಕೊಂಡಿರುವ ಒಂದು ಜೈನ ವಿಗ್ರಹವಿದೆ. ಆದರೆ ಕೆಳಗೆ ಕಾಳಗದ ದೃಶ್ಯವನ್ನು ತೋರಿಸುವ ಒಂದು ಕೆತ್ತನೆ ಇದೆ. ಜಾತ್ರೆ ಸಮಯದಲ್ಲಿ ಒಬ್ಬ ಬೇಡರ ಹೆಂಗಸು ಕಾಟಣ್ಣ ಮತ್ತು ರಾಮನಾಥನ ಶಿರಸ್ಸುಗಳನ್ನು ಹೋಲುವ ಎರಡು ಕೃತಕ ರುಂಡಗಳನ್ನು ತೊಡೆಯ ಮೇಲಿಟ್ಟುಕೊಂಡು, ಈ ತೊಟ್ಟಿಯಲ್ಲಿ ಕುಳಿತು ಅಭಿಷೇಕವಾದ ಮೇಲೆ ಇಂದಿರುಗುತ್ತಾಳೆ. ಇದು ರಣದಲ್ಲಿ ತಮ್ಮ ತಲೆಗಳನ್ನು ತೆತ್ತ ಕಾಟಣ್ಣ ಮತ್ತು ಇವರ ಸ್ಮರಣ ಸೂಚಕವಾದ ಆಚರಣೆಯೇ ಸರಿ.[೪]

ಕೊಕ್ಕರಗೋಳ ಗ್ರಾಮವು ತಾಲೂಕು ಕೇಂದ್ರದಿಂದ ೪೦ ಕಿ.ಮೀ. ದೂರದಲ್ಲಿದೆ. ಇಲ್ಲಿ ಐತಿಹಾಸಿಕ ವಾದಂತಹ ವೀರಗಲ್ಲು ಕಂಡುಬರುತ್ತದೆ. ಇದು ಸಹ ಮೌಖಿಕ ಪರಂಪರೆಯನ್ನು ಹೊಂದಿರುವುದನ್ನು ಕಾಣಬಹುದು. ಕೊಕ್ಕರಗೋಳ ಬೇನ್ನುರುಗೆ ಹೋಗುವ ರಸ್ತೆಯ ಬದಿಯಲ್ಲಿ ವೀರಗಲ್ಲುನ್ನು ಗಮನಿಸಬಹುದು. ಈ ಶಿಲ್ಪವು ಉತ್ತರಕ್ಕೆಭಿಮುಖವಾಗಿದೆ. ಈ ವೀರಶಿಲ್ಪಕ್ಕೆ 'ಈರಣ್ಣ' ಎಂದು ಕರೆಯತ್ತಾರೆ. ಇದ್ದಕ್ಕೆ ಊರಿನ ಜನ ಇದ್ದಕ್ಕೆ ಹಬ್ಬ ಹರಿದಿನಕ್ಕೆ ಮಂಗಳವಾರ ಹಾಗೂ ಶುಕ್ರವಾರದಂದು ಪೂಜೆಯನ್ನು ಸಲ್ಲಿಸುತ್ತಾರೆ.[೫]

ಈ ಗ್ರಾಮವು ತಾಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಇಲ್ಲಿ ಐತಿಹಾಸಿಕ ಕುರುಹು ಆಗಿದ್ದು ಇದು ನಾಗಮ್ಮ ವಾಲೆಕಾರ ಹೋಲದಲ್ಲಿದೆ. ಇವರ ಹೊಲದಲ್ಲಿ ೩ ವೀರಗಲ್ಲುಗಳು

ಕಂಡುಬರುತ್ತವೆ. ಮತ್ತು ಹೊಲ ಉಳುವ ಸಂದರ್ಭದಲ್ಲಿ ಮತ್ತು ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ ಮಾಡುತ್ತಾರೆ. ಈ ವೀರಗಲ್ಲಿಗೆ ಕಾಡುಗಲ್ಲು ಎಂದು ಕರೆಯುತ್ತಾರೆ.[೬] ಈ ಗ್ರಾಮವು ತಾಲೂಕು ಕೇಂದ್ರದಿಂದ ೧೫ ಕಿಲೋ ಮೀಟರ್ ದೂರದಲ್ಲಿದೆ. ಇದಕ್ಕೆ ಹಳಪ ಸ್ಮಾರಕ ಎಂದು ಕೆರೆಯುತ್ತಾರೆ. ಹಬ್ಬ ಹರಿದಿನಗಳಲ್ಲಿ ಕುರುಬ ಜನಾಂಗದವರು ಪೂಜಿಸುತ್ತಾರೆ. ಈ ರೀತಿಯಾಗಿ ಈ ವೀರಗಲ್ಲು ವಿಶೇಷತೆಯನ್ನು ಹೊಂದಿದೆ.[೭]

ಈ ಗ್ರಾಮವೂ ತಾಲೂಕಿನಿಂದ ೨೬ ಕಿಲೋ ಮೀಟರ್ ದೂರದಲ್ಲಿದೆ. ಈ ವೀರಗಲ್ಲಿಗೆ ಕಾಸಪ್ಪ ಎಂಬ ಹೆಸರಿನಿಂದ ಕರೆಯುತ್ತಾರೆ. ಇದಕ್ಕೆ ವಿಶೇಷ ದಿನಗಳಲ್ಲಿ ಪೂಜೆ ಮಾಡುತ್ತಾರೆ. ಈ ಗ್ರಾಮವೂ ತಾಲೂಕು ಕೇಂದ್ರದಿಂದ ೨೭ ಕಿಲೋ ಮೀಟರ್ ದೂರದಲ್ಲಿದೆ. ಈ ವೀರಗಲ್ಲಿಗೆ ಈರಣ್ಣ ಎಂದು ಹೆಸರು. ಇದು ಲಕ್ಷ್ಮೀದೇವಿ ದೇವಾಸ್ಥಾನದ ಹಿಂದೆ ಇದೆ. ಇದಕ್ಕೆ ಹಬ್ಬ ಹರಿದಿನಗಳಲ್ಲಿ ಪೂಜೆ ಸಲ್ಲಿಸುತ್ತಾರೆ. ಇದು ತಾಲೂಕು ಕೇಂದ್ರದಿಂದ ೩೦ ಕಿಲೋ ಮೀಟರ್ ದೂರದಲ್ಲಿದ್ದು ಈ ಸ್ಮಾರಕಕ್ಕೆ ಕರಿಯಮ್ಮ ಎಂಬ ಹೆಸರಿನಿಂದ ಕರೆಯುವರು. ಮಂಗಳವಾರ ಮತ್ತು ಶುಕ್ರವಾರದಂದು ವೀಶೇಷ ಪೂಜೆ ಹಾಗೂ ಹಬ್ಬ ಹರಿದಿನಗಳ್ಲಿ ಎಲ್ಲಾ ಸಮುದಾಯದವರು ಪೂಜೆ ಮಾಡುವರು. ಈ ಗ್ರಾಮವೂ ತಾಲೂಕಿನಿಂದ ೧೦ ಕಿ.ಮೀ. ದೂರದಲ್ಲಿದೆ. ನಾರಾಯಣಪ್ಪ ಗುಡ್ಡದ ಮೇಲೆ ವೀರನ ಶಿಲ್ಪ ಇರುವ ಗುಡಿ ಇದೆ. ಈ ವೀರಗಲ್ಲುಗೆ ಇಲ್ಲಿನ ಸ್ಥಳಿಯ ಜನರು ನಾರಾಯಣಪ್ಪ ದೇವರು ಎಂದು ಆರಾಧನೆ ಮಾಡುತ್ತಾರೆ. ಈ ಸ್ಮಾರಕ ಶಿಲ್ಪಕ್ಕೆ ಹಬ್ಬ ಹರಿದಿನಕೆ ಪೂಜೆಯನ್ನು ಮಾಡುತ್ತಾರೆ.[೮]

ಕೊನೆಟಿಪ್ಪಣಿ

೧. ಮಂಜುನಾಥ ಬೇವಿನಕಟ್ಟಿ. ೨೦೦೭, ಕನ್ನಡ ಜನಪದ ನಂಬಿಕೆಗಳು, ಪು, ೩೫.

೨. ಮಂಜುನಾಥ ಬೇವಿನಕಟ್ಟಿ. ೨೦೧೦, ಪರಿಷೆತ \ಮಾನ್ಯೇವು, ಪು, ೧೦೫.

೩. ಜಿ. ವರದರಾಜಾರಾವ್; ಕುಮಾರರಾಮನ ಸಾಂಗತ್ಯಗಳು, ಪು, ೧೮೩.

೪. ಅದೇ, ಪು, ೨೮೪-೨೮೫.

೫. ಕ್ಷೇತ್ರಕಾರ್ಯ

೬. ಕ್ಷೇತ್ರಕಾರ್ಯ

೭. ಕ್ಷೇತ್ರಕಾರ್ಯ

೮. ಕ್ಷೇತ್ರಕಾರ್ಯ

ಅಧ್ಯಾಯ – ಆರು
ಸಮಾರೋಪ

ಅಧ್ಯಾಯ – ಆರು
ಸಮಾರೋಪ

ಕೊಪ್ಪಳ ಜಿಲ್ಲೆಯ ತಾಲ್ಲೂಕುಗಳಲ್ಲಿ ಒಂದಾದ ಗಂಗಾವತಿಯು ಪ್ರಾಚೀನ ಇತಿಹಾಸವನ್ನು ಹೊಂದಿದೆ. ಭೌಗೋಳಿಕವಾಗಿ ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಈ ಪರಿಸರದಲ್ಲಿ ಸಣ್ಣಪುಟ್ಟ ನದಿ, ಹಳ್ಳಕೊಳ್ಳಗಳು ಹರಿಯುತ್ತವೆ. ಆದ್ದರಿಂದ ಹೆಚ್ಚಿನ ನೀರಿನ ಅನುಕೂಲತೆ ಇರುವುದರಿಂದ ಪ್ರಾಚೀನ ಕಾಲದ ಮಾನವನ ವಾಸಕ್ಕೆ ಯೋಗ್ಯ ಸ್ಥಳವಾಗಿತ್ತು ಎಂಬುದಕ್ಕೆ ಇಲ್ಲಿ ದೊರೆತ ಪ್ರಾಗಿತಿಹಾಸಕಾಲದ ನೆಲೆಗಳು ಸಾಕ್ಷಿಯಾಗಿವೆ. ಈ ಪ್ರದೇಶದಲ್ಲಿ ಮಾನವನು ನೆಲೆಸಿದ್ದ ಎಂಬುದಕ್ಕೆ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ ಹಾಗೂ ಬೃಹತ್ ಶಿಲಾಯುಗದ ಅನೇಕ ಕುರುಹುಗಳು ನಮಗೆ ದೊರೆತಿರುವುದರಿಂದ ಇದು ಆದಿಮಾನವನ ವಾಸಸ್ಥಾನ ಆಗಿತ್ತೆಂದು ತಿಳಿಯಬಹುದಾಗಿದೆ. ಇತಿಹಾಸ ಕಾಲಘಟಕ್ಕೆ ಬಂದಾಗ ಶಾತವಾಹನರಿಂದ ಆರಂಭವಾಗಿ ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ಹಲವು ರಾಜಮನೆತನೆಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆಳ್ವಿಕೆ ಮಾಡಿರುವುದುನ್ನು ಇಲ್ಲಿರುವ ಪುರಾತತ್ವ ಆಕರಗಳಿಂದ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಶಾತವಾಹನರು ಮತ್ತು ಪಲ್ಲವರ ಬಗ್ಗೆ ಮಾಹಿತಿಯನ್ನು ತಿಳಿಸುವಂತಹ ಏಕೈಕ ಶಾಸನ ಗಂಗಾವತಿ ತಾಲ್ಲೂಕಿನಲ್ಲಿ ಅನೇಕ ಶಾಸನಗಳು ಕಂಡುಬರುತ್ತವೆ. ಈ ಅರಸರ ಆಡಳಿತ ಕಾಲದಲ್ಲಿ ಸಾಮಾನ್ಯ ಜನರು ಸೈನಿಕರಾಗಿ ಸೇವೆ ಸಲ್ಲಿಸಿರುವರು ಮತ್ತು ಹಲವು ಸೈನಿಕರು ಯುದ್ಧಗಳಲ್ಲಿ ಮಡಿದಿರುವರು. ಇದಲ್ಲದೆ ಗೋವುಗಳ ರಕ್ಷಣೆ, ಗ್ರಾಮಗಳ ರಕ್ಷಣೆ, ಸ್ತ್ರೀಯರ ರಕ್ಷಣೆಗಳಲ್ಲಿ ಮತ್ತು ಪ್ರಾಣಿಗಳ ಭೇಟೆಯ ಸಂದರ್ಭದಲ್ಲಿ ಹಲವು ವೀರರು ಮಡಿದಿರುವುದನ್ನು ಇಲ್ಲಿನ ಸ್ಮಾರಕ ಶಿಲ್ಪಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

ಸಾಮಾನ್ಯ ಜನರ ಇತಿಹಾಸವನ್ನು ರಚಿಸುವಲ್ಲಿ ಈ ಸ್ಮಾರಕ ಶಿಲ್ಪಗಳು ಮಹತ್ವದ ದಾಖಲೆಗಳಾಗಿವೆ. ಶಾಸನ ಸಹಿತವಾದ ಸ್ಮಾರಕ ಶಿಲ್ಪಗಳು ಸ್ಪಷ್ಟವಾದ ಮಾಹಿತಿಯನ್ನು ನೀಡಿದರೆ,

ಶಾಸನ ರಹಿತವಾದ ಸ್ಮಾರಕ ಶಿಲ್ಪಗಳು ಕೆಲವೊಮ್ಮೆ ಮಾಹಿತಿ ನೀಡುವುದು ಕಷ್ಟಸಾಧ್ಯವಾಗುತ್ತದೆ. ಆದರೂ ಶಿಲ್ಪ ಮತ್ತು ಶೈಲಿಗಳ ಆಧಾರದ ಮೇಲೆ ಆ ಸ್ಮಾರಕ ಶಿಲ್ಪಗಳ ಕಾಲವನ್ನು ನಿರ್ಧರಿಸಬಹುದು. ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ಹಲವು ಸ್ಮಾರಕ ಶಿಲ್ಪಗಳು ಪತ್ತೆಯಾಗಿದ್ದು, ಅವುಗಳಲ್ಲಿ ವಿವಿಧ ಪ್ರಕಾರದ ವೀರಗಲ್ಲುಗಳು, ಮಹಾಸತಿಕಲ್ಲುಗಳು ಮತ್ತು ನಿಸಿದಿಗಲ್ಲುಗಳು ಪ್ರಮುಖವಾಗಿವೆ. ಪ್ರತಿಯೊಂದು ಸ್ಮಾರಕ ಶಿಲ್ಪದ ಲಕ್ಷಣಗಳನ್ನು ಆಧರಿಸಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶದ ಎಲ್ಲಾ ಸ್ಮಾರಕ ಶಿಲ್ಪಗಳನ್ನು ಗಮನಿಸಿದಾಗ ತುರುಗೋಳ್‌ನಲ್ಲಿ ಮಡಿದ ವೀರರ ಸ್ಮಾರಕ ಶಿಲ್ಪಗಳು ಹೆಚ್ಚು ದೊರೆಯುತ್ತವೆ. ಆದ್ದರಿಂದ ತುರುಗೋಳ್ ಪ್ರಮುಖ ಸಂಪತ್ತಾಗಿತ್ತು ಎಂಬುದನ್ನು ತಿಳಿಯಬಹುದು, ವೀರರು, ಕಾಲ್ದಳ, ಕುದುರೆಗಳ ಮೂಲಕ ಯುದ್ಧದಲ್ಲಿ ಹೋರಾಡುತ್ತಿದ್ದರು ಎಂಬುವದನ್ನು ಈ ಸ್ಮಾರಕ ಶಿಲ್ಪಗಳಿಂದ ಸ್ಪಷ್ಟವಾಗುತ್ತದೆ. ಹಾಗೂ ಪ್ರಾಣಿಗಳ ವಿರುದ್ಧ ಹೋರಾಡಿ ಮಡಿದ ವೀರಗಲ್ಲುಗಳು ಸಹ ದೊರೆತಿವೆ. ಈ ಪ್ರದೇಶದ ಜನರು ಬೇಟೆಯಾಡುತ್ತಿದ್ದರು ಎಂಬುದಕ್ಕೆ ಮತ್ತು ಈ ಪರಿಸರದಲ್ಲಿ ಹುಲಿ, ಚಿರತೆ ಪ್ರಾಣಿಗಳು ಇದ್ದವು ಎಂಬುದಕ್ಕೆ ಇಲ್ಲಿ ಕಂಡುಬಂದಿರುವ ಪ್ರಾಣಿ ಬೇಟೆಯ ಸ್ಮಾರಕ ಶಿಲ್ಪಗಳು ಸ್ಪಷ್ಟವಾದ ಮಾಹಿತಿಯನ್ನು ನೀಡುತ್ತವೆ. ಮಹಾಸತಿ ಶಿಲ್ಪಗಳು ಪ್ರಾಚೀನ ಕಾಲದಲ್ಲಿದ್ದ ಸತಿಪದ್ಧತಿ ಆಚರಣೆಯನ್ನು ಕುರಿತು ಮಾಹಿತಿ ನೀಡುತ್ತವೆ. ಸ್ತ್ರೀಯರ ಜೀವನ ಕ್ರಮ, ಅವರ ಉಡುಪುಗಳು, ಆಭರಣಗಳು ಹಾಗೂ ಅಂದಿನ ಸಮಾಜದ ಸ್ಥಿತಿಗತಿಗಳ ಕುರಿತು ಮಾಹಿತಿ ತಿಳಿಸುತ್ತವೆ. ಮಹಾಸತಿ ಶಿಲ್ಪಗಳು ಕೈ ಮೇಲೆತ್ತಿ ಜನರಿಗೆ ಆಶೀರ್ವಾದ ನೀಡಿತ್ತಿರುವಂತಿದು. ಇದನ್ನು ಆಶೀರ್ವಾದ ಎನ್ನುವುದಕ್ಕಿಂತ ತಾನು ಮಡಿದ ಬಳಿಕ ದೇವಲೋಕದಲ್ಲಿ ಪತಿಯೊಂದಿಗೆ ಸೇರುವೆ ಹಾಗೂ ನಿಮ್ಮಿಂದ ವಿದಾಯಗೊಳ್ಳುತ್ತೇನೆ ಎಂದು ಹೇಳಲು ಸೂಕ್ತವೆನಿಸುತ್ತದೆ.

ಪ್ರಸ್ತುತ ಅಧ್ಯಯನದ ಕ್ಷೇತ್ರದಲ್ಲಿ ವೀರಗಲ್ಲುಗಳು ಹೆಚ್ಚಿನದಾಗಿದ್ದು, ಮಾಸ್ತಿಕಲ್ಲುಗಳು ಕಡಿಮೆ ಸಂಖ್ಯೆಯಲ್ಲಿ ದೊರೆಯುತ್ತವೆ. ಇವುಗಳ ಆಧಾರದ ಮೇಲೆ ಒಂದು ತೀರ್ಮಾನಕ್ಕೆ ಬರುವುದಾದರೆ ಪತಿ ಮಡಿದ ನಂತರ ಸತಿಪದ್ಧತಿ ಕಡ್ಡಾಯವಾಗಿರಲಿಲ್ಲ. ಬಹುತೇಕ ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳ ಆಚರಣೆಗಳಿಂದ ಗುರುತಿಸಬಹುದು. ಮಕ್ಕಳಿಗೆ ರೋಗ ರುಜನಿಯಾದರೆ, ದನಕರುಗಳಿಗೆ ಕಾಯಿಲೆಯಾದರೆ ಹಾಗೂ ಹಸುಗಳು ಕರು ಹಾಕುವ ಸಂದರ್ಭದಲ್ಲಿ ಇವುಗಳನ್ನು ಪೂಜಿಸುತ್ತಾರೆ. ಒಟ್ಟಿನಲ್ಲಿ ಸ್ಮಾರಕ ಶಿಲ್ಪಗಳು ಜನರ ಮನಸ್ಸಿನಲ್ಲಿ ದೈವತ್ವದ ಸ್ವರೂಪವನ್ನು ಪಡೆದುಕೊಂಡು ಇಂದಿಗೂ ಉಳಿದುಕೊಂಡಿವೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಮಗೆ ತಿಳಿದುಬರುವುದೇನೆಂದರೆ ಈ ಪರಿಸರದ ಹಲವು ಸ್ಮಾರಕ ಶಿಲ್ಪಗಳು ಸಂರಕ್ಷಣೆ ಇಲ್ಲದೆ ದೇವಾಲಯದ ಕಟ್ಟಡಗಳ ಬುನಾದಿಗಳಲ್ಲಿ ಹಾಕಿ ಮುಚ್ಚಿರುವುದನ್ನು, ನದಿಯಲ್ಲಿ ಹಾಕಿರುವುದನ್ನು ಹಾಗೂ ಮಣ್ಣಿನಲ್ಲಿ ಮುಚ್ಚಿಹೋಗಿರುವುದನ್ನು ನೋಡಿದರೆ ಅವುಗಳ ರಕ್ಷಣೆ ತೀರ ಅಗತ್ಯವಾಗಿದೆ. ಇನೂ ಕೆಲವು ಸ್ಮಾರಕ ಶಿಲ್ಮಗಳು ನಾಶದ ಅಂಚಿನಲ್ಲಿವೆ. ಅವುಗಳನ್ನು ಸಂರಕ್ಷಿಸುವ ಕಾರ್ಯ ತುರ್ತಾಗಿ ನಡೆಯಬೇಕಾಗಿದೆ.

ಒಟ್ಟಾರೆಯಾಗಿ ಗಂಗಾವತಿ ತಾಲೂಕಿನ ಸ್ಮಾರಕ ಶಿಲ್ಪಗಳು 'ವೀರಗಲ್ಲುಗಳು ಮಾಸ್ತಿಗಲ್ಲುಗಳು ನಿಸಿಧಿಗಲ್ಲುಗಳು: ಮೌಖಿಕ ಚರಿತ್ರೆ ಅಧ್ಯಯನ' ಒಂದು ವಿಶೇಷವಾದ ಅಧ್ಯಯನವಾಗಿದ್ದು, ಕೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಸ್ಥಳೀಯ ಜನರು ಸ್ಮಾರಕ ಶಿಲ್ಪಗಳ ಬಗ್ಗೆ ಮಾಹಿತಿ ನೀಡಿದಾಗ ವಿಶೇಷವೆನಿಸಿತ್ತು. ಏಕೆಂದರೆ ಪ್ರಾಚೀನ ಅವಶೇಷಗಳು ಇಂದಿನ ಜನರಿಗೆ ಅಸಡ್ಡೆಮನೋಭಾವ ಇರುವಾಗ ಇಲ್ಲಿನ ಜನರು ಅವುಗಳ ಮೇಲೆ ಪ್ರೀತಿ ತೋರಿಸಿದಾಗ ಅವರಿಗೆ ಪ್ರಾಚೀನ ಪುರಾತತ್ವ ಅವಶೇಷಗಳ ಮೇಲಿರುವ ಪ್ರೀತಿ ಮತ್ತು ಕಾಳಜಿ ಇರುವುದು ಕಂಡು ಬಂದಿತು.

ಒಟ್ಟಾರೆ ಈ ಅಧ್ಯಯನದ ಮೂಲಕ ಗಂಗಾವತಿ ತಾಲೂಕಿನ ಸ್ಮಾರಕ ಶಿಲ್ಪಗಳ ಕುರಿತು ಸಮಗ್ರವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಹಾಗೂ ರಾಜ್ಯ ಪುರಾತತ್ವ ಇಲಾಖೆಯು ತಾಲೂಕಿನ ವಿವಿಧ ಗ್ರಾಮಗಳಲ್ಲಿರುವ ಅವಶೇಷಗಳ ಮೇಲೆ ಕಣ್ಣುಹಾಯಿಸಿ ಅವುಗಳ ಸಂರಕ್ಷಣೆಮಾಡಿ ಮತ್ತು ಅಲ್ಲಿನ ಜನರಿಗೆ ಪ್ರಾಚೀನ ಸ್ಮಾರಕಗಳ ಮಹತ್ವವನ್ನು ತಿಳಿಸುವುದರ ಮೂಲಕ ಮುಂದಿನ ಪೀಳಿಗೆಯವರಿಗೆ ಅವುಗಳ ಐತಿಹಾಸಿಕ ಮಹತ್ವವನ್ನು ಕೊಂಡೊಯ್ಯಬೇಕಿದೆ.

ಅಧ್ಯಯನದ ಫಲಿತಗಳು

* ಗಂಗಾವತಿ ತಾಲೂಕಿನ ಸ್ಥಳೀಯ ಚರಿತ್ರೆಯನ್ನು ಅರಿಯುವಲ್ಲಿ ಈ ಪ್ರದೇಶದ ವೀರಗಲ್ಲು, ಮಾಸ್ತಿಕಲ್ಲು ಮತ್ತು ನಿಸಿದಿಗಲ್ಲುಗಳ ಮಹತ್ವ ಬಹಳ ಅಪಾರವಾದದ್ದು ಎಂಬುವುದನ್ನು ಪ್ರಸ್ತುತ ಅಧ್ಯಯನದಿಂದ ತಿಳಿಯಬಹುದಾಗಿದೆ.
* ಗಂಗಾವತಿ ತಾಲ್ಲೂಕಿನ ಜನರ ಸಂಸ್ಕೃತಿ ಐತಿಹ್ಯ, ನಂಬಿಕೆ, ಆಚರಣೆ ಹಾಗೂ ಸಂಪ್ರದಾಯವನ್ನು ಅರಿಯುವಲ್ಲಿ ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು ಪ್ರಮುಖ ಆಕರಗಳಾಗಿವೆ.
* ಜನಸಾಮಾನ್ಯರು ಹಾಗೂ ಸ್ಥಳೀಯರ ಸ್ಥಿತಿಗಳನ್ನು ಅರಿಯಲು ಮೌಖಿಕ ಚರಿತ್ರೆಯಿಂದ ಮಾತ್ರ ಸಾಧ್ಯ ಈ ಅಧ್ಯಯನದಲ್ಲಿ ಮೌಖಿಕ ಚರಿತ್ರೆಗೆ ಸಂಬಂಧಿಸಿದ ಅನೇಕ ಮಾಹಿತಿಗಳು ಲಭ್ಯವಿದ್ದು, ಗಂಗಾವತಿ ತಾಲ್ಲೂಕಿನ ಸ್ಥಳೀಯ ಚರಿತ್ರೆಯ ರಚನೆಗೆ ಅವು ಪೂರಕವಾಗಿವೆ.
* ಇಲ್ಲಿಯವರೆಗೆ ಪ್ರಕಟವಾಗದೆ ಉಳಿದಿರುವ ಕೆಲವು ವೀರಗಲ್ಲುಗಳು ಲಭ್ಯವಾಗಿರುವುದು ಈ ಅಧ್ಯಯನದ ಪ್ರಮುಖ ಅಂಶಗಳಲ್ಲಿ ಒಂದು.
* ಈ ತಾಲ್ಲೂಕಿನ ಬೂದುಗುಂಪ ಗ್ರಾಮದಲ್ಲಿ ಗೋಚರವಾಗಿರುವ ವೀರಗಲ್ಲುಗಳ ಲಕ್ಷಣಗಳಿಂದ ಮೊದಲ ಬಾರಿಗೆ ಈ ತಾಲ್ಲೂಕಿನಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದ ಇತಿಹಾಸವನ್ನು ತಿಳಿಯುವಲ್ಲಿ ಸಹಕಾರಿಯಾಗಿದೆ.
* ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಸ್ಥಳೀಯರು ನೀಡಿದ ವೀರಗಲ್ಲುಗಳ ಮಾಹಿತಿಗಳು ಮೌಖಿಕ ಚರಿತ್ರೆಗೂ ಹಾಗೂ ಲಿಖಿತ ಇತಿಹಾಸಕ್ಕೂ ಹೊಂದಾಣಿಕೆಯಾಗಿರುವುದನ್ನು

ತಿಳಿಯಬಹುದು. ಉದಾಹರಣೆಗೆ ಹೇರೂರು ಗ್ರಾಮದಲ್ಲಿರುವ ವೀರಗಲ್ಲುಗೆ ಜನರು ಕಂಠೆಪ್ಪ ತಾತ ಎಂದು ಹೇಳಿರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

* ಗಂಗಾವತಿ ತಾಲ್ಲೂಕಿನ ವೀರಗಲ್ಲುಗಳನ್ನು ಹಾಗೂ ಮಾಸ್ತಿಕಲ್ಲುಗಳನ್ನು ಕ್ರೂಢೀಕರಿಸಿ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿದೆ.
* ಗಂಗಾವತಿ ತಾಲ್ಲೂಕಿನ ವೀರಗಲ್ಲುಗಳು, ಮಾಸ್ತಿಗಲ್ಲುಗಳು, ಹಾಗೂ ನಿಸಿದಿಗಲ್ಲುಗಳ ಮೂಲಕ ಮೌಖಿಕ ಮತ್ತು ಸ್ಥಳೀಯ ಇತಿಹಾಸವನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಲಾಗಿದೆ.
* ಕೆಲವು ಆಯ್ದ ಗ್ರಾಮಗಳ ಸ್ಮಾರಕಗಳನ್ನು ಅಧ್ಯಯನ ಮಾಡುವುದರ ಮೂಲಕ ಚರಿತ್ರೆ ಪುನಾರಚನೆಗೆ ಹಾಗೂ ಮುಂದಿನ ತಲೆಮಾರಿಗೆ ಇತಿಹಾಸದ ಮಹತ್ವವನ್ನು ತಿಳಿಸುವ ಪ್ರಯತ್ನ ಪ್ರಸ್ತುತ ಪ್ರಬಂಧದ್ದಾಗಿದೆ.

ಪರಾಮರ್ಶನ ಗ್ರಂಥಗಳು

ಅಲ್ಲಮಪ್ರಭು ಬೆಟ್ಟದೂರು., ೨೦೦೫, **ಕೊಪ್ಪಳ ಜಿಲ್ಲಾ ದರ್ಶನ**, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

ಅಲ್ಲಾಗಿರಿ ರಾಜ,. ೨೦೦೬, **ಪುಣ್ಯಕ್ಷೇತ್ರ ಕನಕಗಿರಿ**. ಉದಗೊಳ್ಳ ಅಶೋಕನ ಶಾಸನಗಳು., ೬-೩-೧೯೬೧. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ.

ಚಂದ್ರಶೇಖರ್ ಎಸ್., ೧೯೯೩, ರಾಯಚೂರು ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳ ಬಳಕೆಯ ಸ್ಥಿತಿಗತಿ ಮತ್ತು ಮುನ್ನೋಟ, ತಿರುಳ್ಗನ್ನಡ.

ಚಿಂದಾನಂದಮೂರ್ತಿ ಎಂ., ೧೯೭೯, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸ್ವಪ್ನ ಬುಕ್ ಹೌಸ. ಬೆಂಗಳೂರು.

ಚಿಂದಾನಂದಮೂರ್ತಿ ಎಂ., ೧೯೮೪. **ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಜಯಮ್ಮ ಎಚ್., ೨೦೦೨, **ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಾದರ ಪಡಿಸಿದ ಪಿ.ಎಚ್.ಡಿ. ಮಹಾಪ್ರಬಂಧ.

ದುರುಗಪ್ಪ ಎಂ.ಕೆ., ೨೦೦೭, **ಕನಕಗಿರಿಯ ನಾಯಕರು**, ಪವಿತ್ರ ಪಬ್ಲಿಕೇಶನ್, ಬೆಂಗಳೂರು.

ದೇವರಾಜ ಡಿ.ವಿ. ಮತ್ತು ಪಾಟೀಲ ಪಿ,ಎಸ್., ೧೯೯೧. **ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ**, ೧೯೮೭-೮೮, ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯಗಳು.

ದೇವರ ಕೊಂಡಾರೆಡ್ಡಿ, ೧೯೯೪, **ತಲಕಾಡಿನ ಗಂಗರ ದೇವಾಲಯಗಳು; ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ದೇಸಾಯಿ ಪಿ.ಬಿ. ೧೯೩೬., ವಿಜಯನಗರ **ಸಾಮ್ರಾಜ್ಯ**, ಇತಿಹಾಸ ಸಂಶೋಧನಾ ಮಂಡಳಿ, ಧಾರವಾಡ.

ನರಸಿಂಹ ಮೂರ್ತಿ ಎ. ವಿ., ೧೯೮೩, **ಕರ್ನಾಟಕ ನಾಣ್ಯ ಸಂಪತ್ತು**, ಐ .ಬಿ.ಎಚ್ ಪ್ರಕಾಶನ, ಬೆಂಗಳೂರು.

ನರಸಿಂಹ ಮೂರ್ತಿ ಎ. ವಿ., ೧೯೮೩, **ಕರ್ನಾಟದಲ್ಲಿ ಪುರಾತತ್ವ ಶೋಧನೆ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ನರಸಿಂಹ ಮೂರ್ತಿ ಎ, ವಿ., ೨೦೦೩, **ಕರ್ನಾಟಕ ನಾಣ್ಯ ಪರಂಪರೆ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಪರಮಶಿವ ಮೂರ್ತಿ ಡಿ.ವಿ., ೧೯೯೯, **ಕನ್ನಡ ಶಾಸನಶಿಲ್ಪ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಕಾಶ ಹುಣಸಗಿ, ೧೯೮೭, **ಗಂಗಾವತಿ ತಾಲೂಕು ದರ್ಶನ**. ಐ. ಬಿ. ಎಚ್, ಪ್ರಕಾಶನ ಬೆಂಗಳೂರು.

ಮಹದೇವ ಸಿ. ಮತ್ತು ಇರರು, **ಹೊಸಪೇಟೆ ತಾಲೂಕು ದರ್ಶನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಘುನಾಥ ಭಟ್ ಎಚ್.ಆರ್., ೧೯೭೭, **ಕರ್ನಾಟಕ ಶಾಸನ ಕಲೆ**, ಭಾರತಿ ಪ್ರಕಾಶನ, ಮೈಸೂರು.

ರಾಜ ಪುರೋಹಿತ ಜಯತೀರ್ಥ., ೧೯೭೭, (ದ್ವಿತೀಯ ಮು), ಕನಕಗಿರಿ, ಇಂಡಿಯಾ ಬುಕ್ ಹೌಸ್, ಬೆಂಗಳೂರು.

ಶರಣಬಸಪ್ಪ ಕೋಲ್ಕಾರ., ೨೦೦೮, **ಆನೆಗೊಂದಿ**, ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ವಿಭಾಗ, ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮೀತಿ, ಸೇಡಮ್.

ಶರಣಬಸಪ್ಪ ಕೋಲ್ಕಾರ., ೨೦೧೯, **ಗಂಗಾವತಿ ತಾಲೂಕು ದರ್ಶನ**, ಬಸವ ಪ್ರಕಾಶನ, ಗುಲಬರ್ಗಾ.

ಶರಣಬಸಪ್ಪ ಕೋಲ್ಕಾರ., ೨೦೧೦, **ಶಿಲಾಯುಗದ ಗವಿ ಚಿತ್ರಗಳು**, ಬಸವ ಪ್ರಕಾಶನ, ಗಲಬರ್ಗಾ.

ಶರಣಬಸಪ್ಪ ಕೋಲ್ಕಾರ., ೨೦೧೪, **ವಿಜಯನಗರದ ಮಾತೃಸ್ಥಾನ ಆನೆಗೊಂದಿ**, ಬಸವ ಪ್ರಕಾಶನ, ಗುಲಬರ್ಗಾ.

ಶರಣಬಸಪ್ಪ ಕೋಲ್ಕಾರ., ೨೦೧೫, **ಪರಂಪರೆಯ ತೊಟ್ಟಿಲು ಕನಕಗಿರಿ**, ತಂಗಡಗಿ ಟಸ್ಟ, ಕಾರಟಗಿ.

ಶಿವತಾರಕ್ ಕೆ.ಬಿ., ೨೦೦೧, **ಕರ್ನಾಟಕದ ಪುರಾತತ್ವ ನೆಲೆಗಳು**. ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀನೀವಾಸ ರೆಡ್ಡಿ ಕೆ., ೨೦೦೭, **ಆನೆಗೊಂದಿ ಸ್ಥಳ ಮಹಿಮೆ ಹಾಗೂ ಇತಿಹಾಸ**, ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಂಚಿಕೆ, ಬೆಂಗಳೂರು.

ಶೇಷಶಾಸ್ತ್ರಿ ಆರ್., ೧೯೮೨, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

ಸುಂದರ ಅ., ೧೯೭೩, **ಗಂಗಾವತಿ ತಾಲೂಕಿನ ಪ್ರಾಚ್ಯವಸ್ತುಗಳು**, ಕರ್ನಾಟಕ ಭಾರತಿ, ಸಂಪುಟ–೬, ಸಂಚಿಕೆ–೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸುಂದರ ಅ., ೧೯೭೪, **ಕರ್ನಾಟಕದಲ್ಲಿಯ ಪ್ರಾಗೈತಿಹಾಸಿಕ ವರ್ಣಚಿತ್ರಗಳು**, ಸವಿಸಂಚಿಕೆ, ಶ್ರೀ ಸದಾಶಿವ ಒಡೆಯರ ಅವರ ೫೦ನೇಯ ಹುಟ್ಟು ಹಬ್ಬದ ಉತ್ಸವ ಸಮಿತಿ, ಚೌಡಯ್ಯದಾನಪುರ.

ಸುಂದರ ಅ., ೧೯೭೫, **ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು**, ಕರ್ನಾಟಕ ಭಾರತಿ, ಸಂಪುಟ–೮, ಸಂಚಿಕೆ–೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹಂಪನಾಗರಾಜಯ್ಯ., ೧೯೮೮, **ಕೊಪ್ಪಳ ಶಾಸನಗಳು**. ರತ್ನಾತ್ರೆಯ ಪ್ರಕಾಶನ, ಮೈಸೂರು.

ಶಾಸನ ಸಂಪುಟಗಳು

Annual Report on Indian Epigraphy.

Epigraphia India

Hyderband Arechaeological Series.

South india Inscriptions.

ದೇವರ ಕೊಂಡಾರೆಡ್ಡಿ, ಪರಮಶಿವಮೂರ್ತಿ ಡಿ. ವಿ. ಭಟ್ ಸೂರಿ, ಕಲವೀರ ಮನ್ವಾಚಾರ್,(ಸಂ) ೧೯೯೯, ಕೊಪ್ಪಳ ಜಿಲ್ಲೆಯ ಶಾಸನ ಸಂಪುಟ–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ. ಹಂಪಿ.

ಗೆಜಿಟಿಯರ್‌ಗಳು

ಅಭಿಶಂಕರ್ ಕೆ; ೧೯೭೦, ರಾಯಚೂರ ಡಿಸ್ಟ್ರಿಕ್ ಗೆಜಿಟಿಯರ್.

ಅಭಿಶಂಕರ ಕೆ; (ಸಂ), ೧೯೭೨, ಬಳ್ಳಾರಿ ಡಿಸ್ಟ್ರಿಕ್ ಗೆಜಿಟಿಯರ್

ಅಪ್ರಕಟಿತ ಎಂ.ಫಿಲ್. ಮತ್ತು ಪಿ.ಎಚ್.ಡಿ. ಸಂಶೋಧನಾ ಪ್ರಬಂಧಗಳು

ಅಶ್ವಥ ಡಿ.ಎಸ್., ೨೦೦೧, **ಕೊಪ್ಪಳ: ಒಂದು ಸಾಂಸ್ಕೃತಿಕ ಅಧ್ಯಯನ,** ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗೀತಾ ಪೋಲಿಸ ಪಾಟೀಲ, ೨೦೧೮, **ಕೊಪ್ಪಳ ಜಿಲ್ಲೆಯ ವಿಜಯನಗರ ಕಾಲದ ಸ್ಮಾರಕಗಳು,** ಅಪ್ರಕಟಿತ ಪಿಎಚ್.ಡಿ. ಮಹಾ ಪ್ರಬಂಧ. ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಕ್ಷೇಪ ಸೂಚಿ

ಕ.ವಿ.ವಿ.ಶಾಸಂ – ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ

ಎ.ಇಂ – ಎಫಿಗ್ರಾಫಿಯಾ ಇಂಡೋ ಮುಸ್ಲೋನಿಕಾ

ಈ.ಎಚ್.ಎ.ಎಸ್ – ಜರ್ನಲ್ ಆಫ್ ಹೈದ್ರಾಬಾದ್ ಆರ್ಕಿಯಾಲಾಜಿಕಲ್ ಸಿರೀಸ್.

ಐ.ಆರ್.ಐ.ಇ – ಆನ್ಯವಲ್ ರಿಪೋರ್ಟ ಆನ್ ಇಂಡಿಯಾ ಎಫಿಗ್ರಫಿ.

ಎ.ಆರ್.ಎಸ್.ಇ – ಅನ್ಯುವಲ್ ರಿಪೋರ್ಟ ಅನ್ ಸೌಥ ಇಂಡಿಯಾ ಎಫಿಗ್ರಫಿ

ಇ.ಸಿ – ಎಫಿಗ್ರಫಿಯ ಕರ್ನಾಟಕ

ಐ.ಕೆ – ಇನ್ಸ್ಕ್ರಿಪ್ಷನ್ಸ್ ಆಫ್ ಕೊಪ್ಪಳ ಡಿಸ್ಟ್ರಕ್ಟ್

ಐಸ್.ಐ.ಐ – ಸೌಥ ಇಂಡಿತನ್ ಇನ್ಸ್ಕ್ರಿಪ್ಷನ್ಸ್

ಎಂ.ಆರ್ – ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ

ಇ.ಪಿ – ಎಫಿಗ್ರಫಿಯ ಇಂಡಿಕಾ

ಜೆ.ಕೆ.ಯು – ಜರ್ನಲ್ ಆಫ್ ಕರ್ನಾಟಕ ಯುನಿವಸಿಲ್, ಧಾರವಾಡ

ಎ.ಫಿ.ಜಿ.ಎ.ಎಸ್ – ಆಂಧ್ರಪ್ರದೇಶ ಗವರ್ನಮೆಂಟ ಆರ್ಕಿಯಾಲಾಜಿಕಲ್ ಸೀರಿಸ್

ಐ.ಎ. – ಇಂಡಿಯನ್ ಎಂಟಿಕ್ವರಿ ಎಂ.ಸಿಎಫಿಟ – ಮಿಲಯನ ಕ್ಯೂಬಿಕ್ ಫೀಟ್

ವೀರಗಲ್ಲುಗಳು

ಕ್ರ.ಸಂ	ಗ್ರಾಮ	ಇರುವ ಸ್ಥಳ	ಕಾಲಮಾನ
೧	ಮುಕ್ಕುಂಪಿ	ಆಂಜನೇಯ ದೇವಾಲಯ ಆವರಣ	೧೪ನೆ ಶತಮಾನ
	ಮುಕ್ಕುಂಪಿ	ನಾಗಮ್ಮ, ವಾಲೇಕಾರ ಹೊಲದಲ್ಲಿ.	೧೨ನೇ ಶತಮಾನ
೩	ಮುಕ್ಕುಂಪಿ	ನಾಗಮ್ಮ ವಾಲೇಕಾರ ಹೊಲದಲ್ಲಿ	೧೨ನೇ ಶತಮಾನ
೪	ಮುಕ್ಕುಂಪಿ	ನಾಗಮ್ಮ ವಾಲೇಕಾರ ಹೊಲದಲ್ಲಿ	೧೩ನೇ ಶತಮಾನ
೫	ಮುಕ್ಕುಂಪಿ	ಮುದುಕಪ್ಪ ವಾಲೇಕಾರ ಹೊಲದಲ್ಲಿ	೧೩ನೇ ಶತಮಾನ
೬	ಮುಕ್ಕುಂಪಿ	ಗೋಲ್ಲರ ಹೊಲದಲ್ಲಿ	೧೩ನೇ ಶತಮಾನ
೭	ಮುಕ್ಕುಂಪಿ	ಮನುಮಂತಪ್ಪ ನವರ ಹೊಲದಲಿ	೧೩ನೇ ಶತಮಾನ
೮	ಚಿಕ್ಕ ಬೆನಕಲ್	ಈರಣ್ಣ ಅಳವಂಡಿಯರ ಹೊಲದಲ್ಲಿ	೧೫ನೇ ಶತಮಾನ
	ಹಿರೇ ಬೆನಕಲ್	ಶಾಲೆಯ ಹಿಂದೆ	೯ನೇ ಶತಮಾನ
೧೦	ಹಿರೇ ಬೆಣಕಲ್	ಚಿಕ್ಕ ಬೆನಕಲ್ಲಗೆ ಹೋಗುವ ದಾರಿಯ ಎಡಕ್ಕೆ	೧೪ನೇ ಶತಮಾನ
೧೧	ವಿಠಲಾಪುರ	ಶಾಲೆಯ ಆವರಣ	೧೫ನೇ ಶತಮಾನ
೧೨	ವಡಕಿ	ಲಕ್ಷ್ಮೀದೇವಿಯ ದೇವಾಲಯದ ಹಿಂದೆ	೧೫ನೇ ಶತಮಾನ
೧೩	ಉಳೇನೂರ	ಗ್ರಾಮ ಪಂಚಾಯಿತಿ ಮುಂದೆ	೧೫ನೇ ಶತಮಾನ

೧೪	ಕುಂಟೋಜಿ	ಬೀರಪ್ಪ ದೇವಾಲಯದ ಹಿಂದುಗಡೆ	೧೫ನೇ ಶತಮಾನ
೧೫	ಕೋಕ್ಕರಗೋಳ	ಬೇನ್ನೂರುಗೆ ಹೋಗುವ ರಸ್ತೆಯ ಪಕ್ಕದಲ್ಲಿ	೧೫ನೇ ಶತಮಾನ
೧೬	ತೊಂಡಿಹಾಳ	ದ್ಯಾವಮ್ಮ ಕಲ್ಗುಡಿ ಅವರ ಮನೆಯ ಮುಂದೆ	೧೫ನೇ ಶತಮಾನ
೧೭	ಕೋಕ್ಕರಗೋಳ	ಬೇನ್ನೂರುಗೆ ಹೋಗು ರಸ್ತೆಯ ಎಡಭಾಗದಲ್ಲಿ	೧೫ನೇ ಶತಮಾನ
೧೮	ಚಿಕ್ಕರಾಂಪೂರ	ಸಿ. ಅಮರೇಶಪ್ಪರವರ ಗದ್ದೆಯಲ್ಲಿ	೧೪ನೇ ಶತಮಾನ
೧೯	ಸಂಗಾಪುರ	ಈಶ್ವರ ದೇವಸ್ಥಾನದ ಮುಂದೆ	೧೪ನೇ ಶತಮಾನ
೨೦	ಆನೆಗೊಂದಿ	ಕೋಟೆಯ ಬಾಗಿಲ ಬಳಿ	೧೪ನೇ ಶತಮಾನ
೨೧	ಹೇರೂರು	ಗ್ರಾಮದ ಬಸ್ ನಿಲ್ದಾಣ	೧೪ನೇ ಶತಮಾನ
೨೨	ಗಡ್ಡಿ	ಆಗೋಲಿಗೆ ಹೋಗುವ ಮಾರ್ಗ	೧೪ನೇ ಶತಮಾನ
೨೩	ಮೈಲಾಪುರ	ಪಾಂಡವರ ಗುಡ್ಡದಲ್ಲಿ	೧೪ನೇ ಶತಮಾನ
೨೪	ಕನಕಗಿರಿ	ಕನಕಾಚಲ ಲಕ್ಷ್ಮೀನರಸಿಂಹ ದೇವಾಲಯದ ಮುಂದೆ	೧೫ನೇ ಶತಮಾನ
೨೫	ಚಿಕ್ಕ ಬೆಣಕಲ್	ಟೊಕಪ್ಪನ ಗುಡಿಯಲ್ಲಿ	೧೫ನೇ ಶತಮಾನ
೨೬	ಮಲಕನಮರಡಿ	ನಾರಾಯಣಪ್ಪನ ಗುಡ್ಡದಲ್ಲಿ	೧೪ನೇ ಶತಮಾನ
೨೭	ಗುಡದೂರು	ಹನುಮಂತ ದೇವಾಲಯದ ಆವರಣದ ಪಕ್ಕದಲ್ಲಿ	೧೫ನೇ ಶತಮಾನ

ಬಂದೂಕು ವೀರಗಲ್ಲುಗಳು

೧	ಮುಸ್ಟೂರು	ಚೆನ್ನಪ್ಪ ಗೊನ್ನಾಳ ಹೊಲದಲ್ಲಿ	೧೫ನೇ ಶತಮಾನ
೨	ವಿಠಲಾಪುರ	ಶಾಲೆಯ ಆವರಣದಲ್ಲಿ	೧೫ನೇ ಶತಮಾನ
೩	ಗುಡದೂರು	ಹನುಮಂತ ದೇವಾಲದ ಮುಂದೆ	೧೫ನೇ ಶತಮಾನ
೪	ಹಿರೇಜಂತಗಲ್ಲು	ದೇವಾಲಯದ ಹಿಂದಗಡೆ	೧೫ನೇ ಶತಮಾನ
೫	ಕಾರಟಗಿ	ಸಾಲೋಣಿ ವಠಾರ	೧೫ನೇ ಶತಮಾನ
೬	ಜಮ್ಮಾಪುರ	ಗ್ರಾಮದ ಹೊರಭಾಗದಲಿ	೧೫ನೇ ಶತಮಾನ
೭	ಹಳೇ ಕುಂಟೋಜಿ	ದೇವಾಲಯದ ಹಿಂದಗಡೆ	೧೫ನೇ ಶತಮಾನ

ಮಾಸ್ತಿಗಲ್ಲುಗಳು

೧.	ಆನೆಗೊಂದಿ	ಗ್ರಾಮದ ಹೊರಭಾಗದ ಹನುಮಂತ ದೇವಾಲಯದ ಎದುರಿಗೆ	೧೪ನೇ ಶತಮಾನ
೨.	ಕಡೇಬಾಗಿಲು	ಚಿಂತಾಮಣಿ ಮಠದ ಆವರಣ ನವವೃಂದಾವನಕ್ಕೆ ಹೋಗುವ ದಾರಿ	೧೫ನೇ ಶತಮಾನ
೩.	ಹಿರೇಜಂತಗಲ್ಲು	ಕನ್ನಿಕಾ ಪರಮೇಶ್ವರಿ ದೇವಾಲಯದ ಮುಂದೆ	೧೫ನೇ ಶತಮಾನ
೪.	ಆನೆಗೊಂದಿ	ಚಿಂತಾಮಣಿ ಮಠದ ಹತ್ತಿರ	೧೪ನೇ ಶತಮಾನ
೫.	ಆನೆಗೊಂದಿ	ರಂಗನಾಥ ದೇವಾಲಯದ ಪ್ರಾಕಾರಗೋಡೆಯ ಮೇಲೆ	೧೪ನೇ ಶತಮಾನ
೬.	ಹಿರೇ ಬೆಣಕಲ್	ಊರ ಹೊರಗಡೆ	೧೫ನೇ ಶತಮಾನ


ವಕ್ತೃವಿವರ

ಕ್ರಮಸಂಖ್ಯೆ	ಹೆಸರು	ವಯಸ್ಸು	ಊರಿನ ಹೆಸರು	ವೃತ್ತಿ
೧	ನಾಗಮ್ಮ ವಾಲೇಕಾರ	೩೦	ಮುಕ್ಕುಂಪಿ	ಕೃಷಿ
೨	ದೇವೇಂದ್ರಪ್ಪ ವಡ್ಡರ ಹಟ್ಟಿ	೫೮	ಚಿಕ್ಕ ಬೆಣಕಲ್	ಕೃಷಿ
೩	ಹನುಮತಂಪ್ಪ ಸಂಗಟ್ಟಿ	೫೫	ಬೂದುಗುಂಪ್ಪ	ಕೃಷಿ
೪	ಲಕ್ಷ್ಮಣ ಹೆಬ್ಬುಲಿ	೪೫	ವಡಕಿ	ಕೃಷಿ
೫	ಮಲ್ಲಿಕಾರ್ಜುನ	೬೦	ಉಳೇನೂರು	ಕೃಷಿ
೬	ಹನುಮಂತಪ್ಪ	೩೫	ನಂದಿಹಳ್ಳಿ	ಕೃಷಿ
೭	ದುರುಗಪ್ಪ ಚಲುವಾದಿ	೩೫	ನಂದಿಹಳ್ಳಿ	ಕೃಷಿ
೮	ತಿಮ್ಮರಡ್ಡಿ ನಾಯಕ	೭೭	ಕೊಕ್ಕರಗೋಳ	ಕೃಷಿ
೯	ಫತ್ತರ್ ಸಾಬ್	೫೫	ಬೂದುಗುಂಪಾ	ಕೃಷಿ
೧೦	ಯಮನೂರಪ್ಪ ಟೆಂಗೊಡ್ಡಿ	೫೦	ರಾಮದುರ್ಗಾ	ಕೃಷಿ
೧೧	ಫಕೀರಪ್ಪ	೬೦	ತೊಂಡಿಹಾಳ	ಕೃಷಿ
೧೨	ಹನುಮಂತಪ್ಪ ಗೋನಾಳ	೪೦	ಮುಸ್ಟೂರು	ಕೃಷಿ
೧೩	ತಿಮ್ಮಪ್ಪ ಪೋಲಿಸ್	೫೫	ಮುಕ್ಕುಂಪಿ	ಕೃಷಿ

ಕರ್ನಾಟಕ ನಕ್ಷೆ



ಕೊಪ್ಪಳ ಜಿಲ್ಲೆಯ ನಕ್ಷೆ



ಗಂಗಾವತಿ ತಾಲೂಕಿನ ನಕ್ಷೆ



ಛಾಯಾಚಿತ್ರಗಳು



ವೀರಗಲ್ಲು ಮುಕ್ಕುಂಪಿ



ವೀರಗಲ್ಲು ಬೂದುಗುಂಪ



ವೀರಗಲ್ಲು ಮುಕ್ಕುಂಪಿ



ವೀರಗಲ್ಲು ಉಳೇನೂರ್



ವೀರಗಲ್ಲು ಮುಕ್ಕುಂಪಿ



ವೀರಗಲ್ಲು ವಡಿಕಿ



ವೀರಗಲ್ಲು ಬೂದುಗುಂಪಾ



ವೀರಗಲ್ಲು ಕೊಕ್ಕರಗೋಳ



ವೀರಗಲ್ಲು ಹಿರೇ ಬೆಣಕಲ್ಲು



ವೀರಮಾಸ್ತಿಗಲ್ಲು ತೊಂಡಿಹಾಳ



ನಿಸಿದಿಗಲ್ಲು ಮುಕ್ಕುಂಪಿ



ನಿಸಿದಿಗಲ್ಲು ಮುಕ್ಕುಂಪಿ



ಹುಲಿಬೇಟೆ ಚಿತ್ರ ಹೊಸ ರಾಮದುರ್ಗ

ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

